

ದುಡಿಯುವ ಜನರ ಪ್ರಾಣ ಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 15 | ಸಂಚಿಕೆ 8 | ಫೆಬ್ರವರಿ 15–21, 2021 | ಪುಟ 16 | ರೂ. 10

https://janashakthi.wordpress.com e-mail : js_weekly@yahoo.com



ಅನ್ನದಾತರಿಗೆ 'ಪರಜೀವಿ'ಗಳ ಅವಮಾನ



ಕೇರಳ ಬಜೆಟ್: 'ನವ ಸಹಜತೆ'ಗೆ ತಯಾರಿ


NAVA KERALA MISSION



ಉತ್ತರಾಖಂಡ: ವಿವೇಚನಾರಹಿತ 'ಅಭಿವೃದ್ಧಿ'ಗೆ ಜನರ ಬಲಿ



ಗಾಂಧಿ ಹತ್ಯೆಗೈದವರು ಗೋ ಹತ್ಯೆ ನಿಷೇಧಿಸುತ್ತಾರೆ



ಸಿಎಜಿ ವರದಿ ಬಿಚ್ಚಿಟ್ಟ ವಿದ್ಯುತ್ ಉದ್ದಿಮೆಯ ಸತ್ಯ

ಭೀಮ-ಕೋರೆಗಾಂವ್ ಆಪಾದಿತರ ಮೇಲಿನ ಮೊಕದ್ದಮೆಗಳನ್ನು ಕೈಬಿಡಬೇಕು

ಮಹಾರಾಷ್ಟ್ರ ಸರಕಾರ ಒಂದು ಎಸ್.ಐ.ಟಿ. ರಚಿಸಬೇಕು

ಭೀಮ- ಕೋರೆಗಾಂವ್ ಕೇಸಿನಲ್ಲಿ ಬಂಧಿಸಿರುವ ಕಾರ್ಯಕರ್ತರುಗಳ ವಿರುದ್ಧ ಇರುವ ಮೊಕದ್ದಮೆಗಳನ್ನು ಕೈಬಿಡಬೇಕು, ಮತ್ತು ಸಾಕ್ಷ್ಯವನ್ನು ಹೇಗೆ ಸೃಷ್ಟಿಸಲಾಯಿತು ಹಾಗೂ ಇವರಲ್ಲಿ ಒಬ್ಬರಾದ ರೋನ ವಿಲಿಯಮ್ಸ್ ರವರ ಕಂಪ್ಯುಟರ್‌ನಲ್ಲಿ ಹೇಗೆ ಹಾಕಲಾಯಿತು ಎಂಬ ಬಗ್ಗೆ ಅಂತರ್ರಾಷ್ಟ್ರೀಯ ಪರಿಣತರ ವಿಶ್ವಾಸಾರ್ಹ ವರದಿಗಳಲ್ಲಿ ಬಹಿರಂಗವಾಗಿರುವ ಬೆಳವಣಿಗೆಗಳ ಬಗ್ಗೆ ತನಿಖೆ ನಡೆಸಲು ಮಹಾರಾಷ್ಟ್ರ ಸರಕಾರ ಒಂದು ವಿಶೇಷ ತನಿಖಾ ತಂಡ(ಎಸ್.ಐ.ಟಿ.)ವನ್ನು ರಚಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ.

ರೋನ ವಿಲಿಯಮ್ಸ್ ಕಂಪ್ಯುಟರನ್ನು ಹ್ಯಾಕ್ ಮಾಡಲಾಯಿತು ಮತ್ತು ಒಂದು ದುರುದ್ದೇಶದ ತಂತ್ರಾಂಶ(ಮಾಲ್‌ವೇರ್)ವನ್ನು ಅದರಲ್ಲಿ ನೆಲೆಗೊಳಿಸಲಾಯಿತು, ಅದು ಅವರ ಕಂಪ್ಯೂಟರ್ ಕಡತಗಳಲ್ಲಿ ಅವರ ಮೇಲೆ ಆರೋಪ ಹೊರಿಸಲು ಅನುವು ಮಾಡಿಕೊಡುವ ಮೇಲ್‌ಗಳನ್ನು ಹಾಕಿತು; ಇವನ್ನು ಅವರು ಎಂದೂ ನೋಡಿರಲೇ ಇಲ್ಲ ಎಂದು ಅಮೆರಿಕ ಸಂಯುಕ್ತ ಸಂಸ್ಥಾನದ ಒಂದು ಅಪರಾಧ ಪರೀಕ್ಷಣಾ(ಫೊರೆನ್ಸಿಕ್) ಪ್ರಯೋಗಾಲಯ ಕಂಡು ಹಿಡಿದಿದೆ. ಇದನ್ನು ಇತರ ಪರಿಣಿತರು ಪರೀಕ್ಷಿಸಿದ್ದಾರೆ.

ಅಲ್ಲದೆ ಈ ಮೋಸದ ಕೆಲಸ ಎರಡು ವರ್ಷಗಳಿಗಿಂತಲೂ ಹೆಚ್ಚು ಸಮಯದಿಂದ ಅವರ ಅರಿವಿಗೆ ಬರದಂತೆ ನಡೆದಿದೆ. ಇಂತಹ ಮೇಲ್‌ಗಳನ್ನೇ "ಪಿತೂರಿ" ಯ ಭಾಗ ಎಂದು ಎನ್.ಐ.ಎ. ಹೇಳಿಕೊಂಡಿದೆ ಎಂಬುದನ್ನು ಪೊಲಿಟ್‌ಬ್ಯುರೊ ನೆನಪಿಸಿದೆ.

ಆಪಾದನಾಕಾರಿ ಮೇಲ್ ಗಳನ್ನು ಮೋಸದಿಂದ ಹಾಕಲು ಕಂಪ್ಯೂಟರನ್ನು ಹ್ಯಾಕ್ ಮಾಡುವ ಒಂದು ಮಾರಣಾಂತಿಕ ಆಯುಧವನ್ನು ಮೋದಿ ಸರಕಾರ ಬಳಸಿದೆ ಮತ್ತು ಭವಿಷ್ಯದಲ್ಲಿ ರಾಜಕೀಯ ವಿರೋಧಿಗಳ ಮೇಲೆ ಬಳಸಬಹುದು. ಇದನ್ನು ಬಯಲು ಮಾಡಿರುವುದನ್ನು, ಆರಂಭಿಕ ಅಧಿಕೃತ ಪ್ರತಿಕ್ರಿಯೆಗಳು ಸೂಚಿಸುವಂತೆ, ಮುಚ್ಚಿ ಹಾಕಲು ಅಥವ ತಳ್ಳಿ ಹಾಕಲು ಬಿಡಬಾರದು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ವಿಶಾಖಪಟ್ಟಣ ಉಕ್ಕು ಸ್ಥಾವರದ ಖಾಸಗೀಕರಣ ನಿಲ್ಲಬೇಕು

ರಾಷ್ಟ್ರೀಯ ಇಸ್ಪಾತ್ ನಿಗಮ ಲಿ.ನ 100ಶೇ. ಆಯಕಟ್ಟಿನ ಶೇರು ಹಿಂಪಡಿಕೆ ನಡೆಸುವ ಮೂಲಕ ಅದರ ಅಡಿಯಲ್ಲಿರುವ ಸಂಸ್ಥೆಯಾದ ವಿಶಾಖಪಟ್ಟಣ ಉಕ್ಕು ಸ್ಥಾವರ(ವಿ.ಎಸ್.ಪಿ.)ವನ್ನು ಖಾಸಗೀಕರಿಸುವ ಕೇಂದ್ರ ಸರಕಾರದ ನರ್ಧಾರಕ್ಕೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾದ ವಿರೋಧವನ್ನು ವ್ಯಕ್ತಪಡಿಸಿದೆ.

ವಿಶಾಖಪಟ್ಟಣ ಉಕ್ಕು ಸ್ಥಾವರ ಆಂಧ್ರಪ್ರದೇಶದ ಜನತೆಯ ದೀರ್ಘ ಹೋರಾಟದಿಂದ ರಚನೆಗೊಂಡ ಸಂಸ್ಥೆ. ಈ ಹೋರಾಟದಲ್ಲಿ 32 ಮಂದಿ ಪ್ರಾಣಾರ್ಪಣೆ ಮಾಡಿದ್ದಾರೆ. ಇದರಲ್ಲಿ ಸುಮಾರು 20,000 ಜನಗಳು ದುಡಿಯುತ್ತಿದ್ದಾರೆ, ಅಲ್ಲದೆ ವಿಶಾಖಪಟ್ಟಣ ನಗರದಲ್ಲಿ ಇದು ಇತರ ಪರೋಕ್ಷ ಉದ್ಯೋಗಾವಕಾಶಗಳನ್ನೂ ಸೃಷ್ಟಿಸಿದೆ.

ಇದು ಒಂದು ನವರತ್ನ ಕಂಪನಿ ಮತ್ತು ಭಾರತದ ಮೊದಲ ತಟ-ಆಧಾರಿತ ಸಮಗ್ರೀಕೃತ ಉಕ್ಕು ಸ್ಥಾವರವಾಗಿದೆ. 2015ರ ವರೆಗೂ ಲಾಭ ಮಾಡುತ್ತಿದ್ದ ಉದ್ದಿಮೆಯಾಗಿದ್ದ ಇದು, ನಂತರ ನೇರ ಹತೋಟಿಯ ಗಣಿಗಳ ಕೊರತೆ ಮುಂತಾದ ತಾರತಮ್ಯದ ಧೋರಣೆಗಳಿಂದಾಗಿ ತೊಂದರೆಗೊಳಗಾಗಿದೆ.

ಆಂಧ್ರಪ್ರದೇಶದ ಜನತೆ ವಿಶಾಖಪಟ್ಟಣ ಉಕ್ಕು ಸ್ಥಾವರದ ಖಾಸಗೀಕರಣಕ್ಕೆ ಸಂಪೂರ್ಣವಾಗಿ ವಿರುದ್ಧವಾಗಿದ್ದಾರೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ, ಸರಕಾರ ಈ ಉಕ್ಕುಸ್ಥಾವರವನ್ನು ಖಾಸಗೀಕರಿಸುವ ನಿರ್ಧಾರವನ್ನು ಹಿಂದಕ್ಕೆ ಪಡೆಯಬೇಕು ಮತ್ತು ಈ ಉದ್ದಿಮೆ ತನ್ನ ಪೂರ್ಣ ಸಾಮರ್ಥ್ಯವನ್ನು ಹೊಂದುವಂತೆ ಇದನ್ನು ಪುನಶ್ಚೇತನಗೊಳಿಸುವ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಆಗ್ರಹಿಸಿದೆ.

ಸ್ವತಂತ್ರ ಮಾಧ್ಯಮಗಳ ಮೇಲೆ ಇನ್ನೊಂದು ದಾಳಿ

ಡಿಜಿಟಲ್ ಸುದ್ದಿ ಸಂಸ್ಥೆಯಾದ ನ್ಯೂಸ್‌ಕ್ಲಿಕ್ ನ ಕಚೇರಿ ಮತ್ತು ಅದರ ಸಂಪಾದಕರು ಹಾಗೂ ಮಾಲಕರ ಮನೆಗಳ ಮೇಲೆ ಜಾರಿ ನಿರ್ದೇಶನಾಲಯ(ಇ.ಡಿ.) ದಾಳಿ ನಡೆಸಿರುವುದನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡಿಸಿದೆ.

ಈ ಇ.ಡಿ. ಕಾರ್ಯಾಚರಣೆ ಒಂದು ಸ್ವತಂತ್ರ ಸುದ್ದಿ ತಾಣವನ್ನು ಬೆದರಿಸುವ ಮತ್ತು ದಮನ ಮಾಡುವ ಒಂದು ನಾಚಿಕೆಗೆಟ್ಟ ಪ್ರಯತ್ನ. ನ್ಯೂಸ್‌ಕ್ಲಿಕ್ ರೈತರ ಹೋರಾಟಗಳಿಗೆ ವಿಶ್ವಾಸಾರ್ಹ ಮತ್ತು ವ್ಯಾಪಕ ಪ್ರಸಾರವನ್ನು ಕೊಡುತ್ತಿತ್ತು.

ಸ್ವತಂತ್ರ ಮಾಧ್ಯಮಗಳಿಗೆ ಕಿರುಕುಳ ಕೊಡಲು ಮತ್ತು ಅವುಗಳ ಬಾಯಿಮುಚ್ಚಿಸಲು ಮೋದಿ ಸರಕಾರ ಕೇಂದ್ರೀಯ ಏಜೆನ್ಸಿಗಳನ್ನು ಬಳಸುತ್ತಿದೆ ಎಂದಿರುವ ಪೊಲಿಟ್‌ಬ್ಯುರೊ ನ್ಯೂಸ್‌ಕ್ಲಿಕ್ ಮತ್ತು ಅದರ ನಿರ್ವಾಹಕರ ಮೇಲೆ ಹಗೆಸಾಧಕ ಕ್ರಮಗಳನ್ನು ಕೊನೆಗೊಳಿಸಬೇಕು ಎಂದು ಆಗ್ರಹಿಸಿದೆ.

ಮುಂದುವರೆದ ದೇಶವ್ಯಾಪಿ ರೈತ ಹೋರಾಟ: ಫೆ. 18 ರಂದು 4 ಗಂಟೆಗಳ ರೈಲ್ ರೋಕೋ

ಪ್ರಧಾನ ಮಂತ್ರಿಗಳು ಮೂರು ಕೃಷಿ ಕಾಯ್ದೆಗಳನ್ನು ಮತ್ತೊಮ್ಮೆ ಸಮರ್ಥಿಸಿಕೊಳ್ಳುತಿರುವಾಗಲೇ ಅವನ್ನು ರದ್ದು ಮಾಡಬೇಕೆಂಬ ರೈತರ ಹೋರಾಟವನ್ನು ಸಂಯುಕ್ತ ಕಿಸಾನ್ ಮೋರ್ಚಾ ಇನ್ನಷ್ಟು ತೀವ್ರಗೊಳಿಸುವ ಸಂಕೇತವನ್ನು ನೀಡಿದೆ.

ಫೆಬ್ರುವರಿ 18 ರಂದು ದೇಶಾದ್ಯಂತ 'ರೈಲು ತಡೆ' ನಡೆಸುವುದಾಗಿ ಅದು ಪ್ರಕಟಿಸಿದೆ.

- **ಫೆಬ್ರುವರಿ 12 ರಿಂದ** ರಾಜಸ್ಥಾನದಲ್ಲಿ ಟೋಲ್ ಸಂಗ್ರಹಕ್ಕೆ ಅವಕಾಶ ಕೊಡುವುದಿಲ್ಲ, ಅವುಗಳನ್ನು ಖಾಸಗಿ ಸಂಗ್ರಹ ಏಜೆನ್ಸಿಗಳಿಂದ ಮುಕ್ತಗೊಳಿಸಬೇಕು ಎಂದೂ ರೈತ ಮುಖಂಡರು ಸಿಂಘು ಗಡಿಯಲ್ಲಿ ಪ್ರಕಟಿಸಿದ್ದಾರೆ.
- ಹರ್ಯಾಣದ ಶಾಸಕರು ರೈತರ ಹೋರಾಟವನ್ನು ಬೆಂಬಲಿಸಬೇಕು, ಇಲ್ಲವೇ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿ ಬಿಜೆಪಿ ಹಾಗೂ ಅದರ ಮಿತ್ರಪಕ್ಷ ಜೆಜೆಪಿ ಶಾಸಕರ ಘೇರಾವ್ ನಡೆಸಲು ಅಲ್ಲಿಯ ರೈತರಿಗೆ ಕರೆ ನೀಡಲಾಗಿದೆ.
- **ಫೆಬ್ರುವರಿ 14 ರಂದು** ಸೈನಿಕರನ್ನು ರೈತರ ವಿರುದ್ಧ ನಿಲ್ಲಿಸುವ ದುರುದ್ದೇಶಪೂರ್ವಕ ಪ್ರಯತ್ನಗಳನ್ನು ಖಂಡಿಸಿದ ರೈತ ಮುಖಂಡರು ಪುಲ್ವಾಮ ದಾಳಿಯ ಎರಡನೇ ವಾರ್ಷಿಕದಂದು ಹುತಾತ್ಮರಾದ ಸೈನಿಕರಿಗೆ ಮತ್ತು ರೈತರಿಗೆ ಶ್ರದ್ಧಾಂಜಲಿ ಅರ್ಪಿಸುವ ಕಾರ್ಯಕ್ರಮವನ್ನು ನಡೆಸುವಂತೆಯೂ ಸಂಯುಕ್ತ ಕಿಸಾನ್ ಮೋರ್ಚಾ ಕರೆ ನೀಡಿದೆ. ಅಂದು ಮೋಂಬತ್ತಿ ಮೆರವಣಿಗೆ, ಪಂಜಿನ ಮೆರವಣಿಗೆ ಇತ್ಯಾದಿ ಕಾರ್ಯಕ್ರಮಗಳು ನಡೆಯುತ್ತವೆ.
- **ಫೆಬ್ರುವರಿ 16 ರಂದು** ರೈತ ಮುಖಂಡ ಸರ್ ಛೋಟೂ ರಾಮ್ ಅವರನ್ನು ಮತ್ತು ಅವರ ಪರಂಪರೆಯನ್ನು ನೆನಪಿಸಿಕೊಳ್ಳಲು ಸಭೆಗಳನ್ನು ನಡೆಸಲಾಗುವುದು.
- **ಫೆಬ್ರುವರಿ 18 ರಂದು ಮಧ್ಯಾಹ್ನ 12 ರಿಂದ ಸಂಜೆ 4ರ ವರೆಗೆ** ದೇಶಾದ್ಯಂತ ರೈತರ ಆತಂಕವನ್ನು ವ್ಯಕ್ತಪಡಿಸಲು ರೈಲು ಸೇವೆಗಳನ್ನು ತಡೆಯಲಾಗುವದು.

ಜನವರಿ 26 ರ ಘಟನೆಗಳ ನಂತರ ಪಂಜಾಬ್, ಹರ್ಯಾಣ ಮತ್ತು ರಾಜಸ್ಥಾನದಲ್ಲಿ ರೈತರು ಬೃಹತ್ ಮಹಾಪಂಚಾಯ್ತ್‌ಗಳ ಮೂಲಕ ತಮ್ಮನ್ನು ಸಂಘಟಿಸಿಕೊಳ್ಳುತ್ತಿದ್ದಾರೆ, ಇದು ಮುಂದುವರೆಯುತ್ತದೆ ಎಂದೂ ರೈತ ಮುಖಂಡರು ಹೇಳಿದ್ದಾರೆ.

ಸಂಸತ್ತಿನ ಬಜೆಟ್ ಅಧಿವೇಶನದಲ್ಲಿ ರೈತ ಪ್ರಶ್ನೆಗಳನ್ನು ಚರ್ಚಿಸಲಾಗುವುದು ಮತ್ತು ಒಂದು ಇತ್ಯರ್ಥಕ್ಕೆ ಬರಲಾಗುವುದು ಎಂದು ರೈತರು ನಿರೀಕ್ಷಿಸಿದ್ದರು. ಆದರೆ ಸರಕಾರ ಕಾರ್ಪೊರೇಟ್-ಪರವಾಗಿ ಮೊಂಡುತನವನ್ನು ಮುಂದುವರೆಸುತ್ತಿದೆ, ಬಜೆಟ್ ಹಂಚಿಕೆಗಳನ್ನೂ ಕಡಿತಗೊಳಿಸಿರುವುದು ರೈತರನ್ನು ಸರಕಾರದ ಬಗ್ಗೆ ನಿರಾಶರಾಗಿಸಿದೆ ಎಂದು ರೈತ ಮುಖಂಡರು ಹೇಳಿದ್ದಾರೆ.

ಖಾಸಗೀಕರಣದ ವಿರುದ್ಧ ಎರಡು ದಿನಗಳ ಬ್ಯಾಂಕ್ ಮುಷ್ಕರ

ಈ ಬಾರಿ ಕೇಂದ್ರ ಬಜೆಟಿನಲ್ಲಿ ಎರಡು ಸಾರ್ವಜನಿಕ ವಲಯದ ಬ್ಯಾಂಕುಗಳನು ಖಾಸಗೀಕರಿಸುವ ನಿರ್ಧಾರವನ್ನು ಪ್ರಕಟಿಸಲಾಗಿದೆ. ಇದನ್ನು ವಿರೋಧಿಸಿ ಮಾರ್ಚ್ 15 ಮತ್ತು 16 ರಂದು ದೇಶವ್ಯಾಪಿ ಮುಷ್ಕರವನ್ನು ನಡೆಸಲು ನಿರ್ಧರಿಸಿರುವದಾಗಿ 9 ಬ್ಯಾಂಕ್ ನೌಕರರ ಮತ್ತು ಅಧಿಕಾರಿಗಳ ಐಕ್ಯ ವೇದಿಕೆಯಾದ ಯುಎಫ್‌ಬಿಯು ಪ್ರಕಟಿಸಿದೆ.

ಅದಕ್ಕೆ ಮೊದಲು ಫೆಬ್ರುವರಿ 19 ರಂದು ಎಲ್ಲ ರಾಜ್ಯಗಳ ರಾಜಧಾನಿಗಳಲ್ಲಿ ಒಂದು ದಿನದ ಧರಣಿ ನಡೆಸಲಾಗುವುದು. ಫೆಬ್ರುವರಿ 20 ರಿಂದ ಮಾರ್ಚ್ 10 ರ ವರೆಗೆ ಎಲ್ಲ ರಾಜ್ಯಗಳು / ಜಿಲ್ಲೆಗಳು / ಪಟ್ಟಣಗಳಲ್ಲಿ ಸರದಿ ಧರಣಿಗಳು ನಡೆಯಲಿವೆ ಎಂದು ಯುಎಫ್‌ಬಿಯು ಹೇಳಿದೆ.

ರೈತರು ಮತ್ತು ಜನತೆಗೆ ಸಂಸತ್ತಿನಲ್ಲಿ ಪ್ರಧಾನ ಮಂತ್ರಿಗಳಿಂದ ಅವಮಾನ

'ಆಂದೋಲನ ಜೀವಿ' ಗಳೆಂದು ಹೀಯಾಳಿಸಿದ 'ಕಾರ್ಪೊರೇಟ್ ಜೀವಿ' ದೇಶದ ಕ್ಷಮೆ ಕೇಳಬೇಕು – ಎ.ಐ.ಕೆ.ಎಸ್.

ಪ್ರಧಾನ ಮಂತ್ರಿಗಳು ಪ್ರತಿಭಟನಾ ನಿರತ ರೈತರನ್ನು 'ಆಂದೋಲನ ಜೀವಿಗಳು' ಎಂದು ಹೇಳಿ ಅವಮಾನ ಮಾಡಿದ್ದಾರೆ, ಸಂಸತ್ತಿನಲ್ಲಿ ಅವರ ಹೀಯಾಳಿಕೆಯ ಟಿಪ್ಪಣಿಗಳನ್ನು ಹಿಂದಕ್ಕೆ ಪಡೆಯಬೇಕು ಮತ್ತು ಕ್ಷಮೆ ಕೇಳಬೇಕು ಎಂದು ಅಖಿಲ ಭಾರತ ಕಿಸಾನ್ ಸಭಾ (ಎ.ಐ.ಕೆ.ಎಸ್.) ಅವರ ಮಾತುಗಳನ್ನು ಖಂಡಿಸುತ್ತ ಆಗ್ರಹಿಸಿದೆ.

ಈ ಅವಮಾನ ಒಬ್ಬ 'ಕಾರ್ಪೊರೇಟ್ ಜೀವಿ' ಪ್ರಧಾನ ಮಂತ್ರಿಯಿಂದ ಬಂದಿದೆ. ಆತನ ಆರೆಸ್ಸೆಸ್ ಎಂದೂ ಬ್ರಿಟಿಶರ ಗುಲಾಮಿಕೆಯ ವಿರುದ್ಧ ಭಾರತದ ಜನತೆ ನಡೆಸಿದ ಆಂದೋಲನದ ಭಾಗವಾಗಿರಲಿಲ್ಲ. ಮತ್ತು ಅವರು "ವಿದೇಶಿ ವಿಧ್ವಂಸಕಾರೀ ತತ್ವಸಿದ್ಧಾಂತ"(ಎಫ್‌ಡಿಐ) ದ ಬಗ್ಗೆ ಮಾತಾಡಿರುವುದು, ಅವರದ್ದೇ ಆರೆಸ್ಸೆಸ್ ತನ್ನ ಗುರುಗಳಾದ ಹಿಟ್ಲರ್‌ಮತ್ತು ಮುಸೊಲಿನಿಯಂತವರಿಂದ ಪಡೆದ ಫ್ಯಾಸಿಸಂಗೆ ಚೆನ್ನಾಗಿ ಹೊಂದುತ್ತದೆ ಎಂದು ಎ.ಐ.ಕೆ.ಎಸ್.ನ ಅಧ್ಯಕ್ಷರಾದ ಅಶೋಕ ಧವಳೆ ಮತ್ತು ಪ್ರಧಾನ ಕಾರ್ಯದರ್ಶಿ ಹನ್ನನ್ ಮೊಲ್ಲ ನೀಡಿರುವ ಹೇಳಿಕೆಯಲ್ಲಿ ತರಾಟೆಗೆ ತಗೊಂಡಿದ್ದಾರೆ.

ಪ್ರತಿಯೊಬ್ಬ ರೈತ ನಮ್ಮ ಸಂವಿಧಾನದ ಪ್ರಕಾರ ಪ್ರತಿಭಟನೆಯ ಹಕ್ಕು ಹೊಂದಿದ್ದಾರೆ. ತಮ್ಮ ಜೀವನಾಧಾರವನ್ನು ರಕ್ಷಿಸಿಕೊಳ್ಳುವ ರೈತರ ಹೋರಾಟದ ಮೇಲೆ ಅಪವಾದ ಹೊರಿಸಲು ಪ್ರಧಾನ ಮಂತ್ರಿಗಳು ತಮ್ಮ ಅಧಿಕಾರದ ದುರುಪಯೋಗ ಮಾಡಿಕೊಂಡಿದ್ದಾರೆ ಎಂದಿರುವ ಎ.ಐ.ಕೆ.ಎಸ್., ಪ್ರಧಾನ ಮಂತ್ರಿಗಳಿಂದ ರೈತರಿಗೆ ಅಗಿರುವ ಈ ಅವಮಾನವನ್ನು ಖಂಡಿಸಲು ಮುಂದೆ ಬರಬೇಕು ಎಂದು ಎಲ್ಲ ಪ್ರಜಾಪ್ರಭುತ್ವವಾದಿ ಜನವಿಭಾಗಗಳಿಗೆ, ರಾಜಕೀಯ ಪಕ್ಷಗಳಿಗೆ ಮತ್ತು ಸಮೂಹ ಹಾಗೂ ವರ್ಗ ಸಂಘಟನೆಗಳಿಗೆ ಕರೆ ನೀಡಿದೆ.

ರೈತ ಸಂಘಟನೆಗಳು ತಮ್ಮ ಹೋರಾಟಕ್ಕೆ ಕಾರಣಗಳನ್ನು ಕೊಡಲು ಅಸಮರ್ಥರಾಗಿದ್ದಾರೆ ಎಂದು ಪ್ರಧಾನಗಳು ಹೇಳಿದ್ದಾರೆ. ಇದು ರೈತರ ಹೋರಾಟವನ್ನು ಹೀಯಾಳಿಸುವ ಅವರ ಆಟದ ಒಂದು ಭಾಗ. ಭಾರತವನ್ನು ಕೃಷಿ ಬಿಕ್ಕಟ್ಟು ಆವರಿಸಿಕೊಂಡಿದೆ, ಪ್ರತಿಯೊಂದು ಗಂಟೆಯಲ್ಲಿ ಇಬ್ಬರು ರೈತರು ಆತ್ಮಹತ್ಯೆ ಮಾಡಿಕೊಳ್ಳುವಂತಹ ಪರಿಸ್ತಿತಿ ಇದೆ. ಇದಕ್ಕೆ ಕಾರಣ, ಬೇಸಾಯ ಪ್ರತಿಫಲದಾಯಕ ಬೆಲೆಗಳ ಕೊರತೆ ಮತ್ತು ಅದರಿಂದಾಗಿರುವ ಸಾಲಗ್ರಸ್ತತೆಯಿಂದಾಗಿ ಆರ್ಥಿಕವಾಗಿ ದುಸ್ತರವಾಗಿರುವುದು. ದೇಶದ 86% ರೈತ ಕುಟುಂಬಗಳ ಬಳಿ ಇರುವುದು 2 ಹೆಕ್ಟೇರುಗಳಿಗಿಂತಲೂ ಕಡಿಮೆ ಜಮೀನು. ಅವರು ಮಾರುಕಟ್ಟೆಯಲ್ಲಿ ತೀವ್ರ ಶೋಷಣೆಗೆ ಒಳಗಾಗಿದ್ದಾರೆ, ಇದರಿಂದಾಗಿ ಬೇಸಾಯ ಬಿಟ್ಟು ವಲಸೆ ಕಾರ್ಮಿಕರಾಗಬೇಕಾಗಿ ಬಂದಿದೆ.

ಪ್ರಧಾನಮಂತ್ರಿಗಳು ಮತ್ತು ಬಿಜೆಪಿ 2014 ರ ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಸಿ2+50% ಸೂತ್ರದಂತೆ ಕನಿಷ್ಟ ಬೆಂಬಲ ಬೆಲೆ(ಎಂ.ಎಸ್.ಪಿ.) ವ್ಯವಸ್ಥೆಯನ್ನು ಜಾರಿಗೆ ತರುವುದಾಗಿ ವಚನವಿತ್ತಿದ್ದರು ಎಂದು ಅವರಿಗೆ ನೆನಪಿಸಿರುವ ಎ.ಐ.ಕೆ.ಎಸ್. ಈ ವಚನವನ್ನು ಈಡೇರಿಸುವ ಬದಲು ಮೋದಿ ಸರಕಾರ ಭಾರತೀಯ ಕೃಷಿಯನ್ನು ಮತ್ತು ರಾಷ್ಟ್ರದ ಆಹಾರ ಭದ್ರತೆಯನ್ನು ಕಾರ್ಪೊರೇಟ್‌ಗಳಿಗೆ ಒಪ್ಪಿಸುತ್ತಿದೆ ಎಂದು ಟೀಕಿಸಿದೆ.

ರೈತರು ದೇಶಾದ್ಯಂತ ಎಲ್ಲ ಬೆಳೆಗಳಿಗೆ ಕಾನೂನಾತ್ಮಕ ಖಾತ್ರಿಯಿರುವ ಎಂ.ಎಸ್.ಪಿ. ಮತ್ತು ಸರಕಾರದಿಂದ ಖರೀದಿಯನ್ನು ಆಗ್ರಹಿಸಿ ಹೋರಾಟ ನಡೆಸಿದ್ದಾರೆ.

ರೈತರು ನಡೆಸುತ್ತಿರುವ ಈ ಹೋರಾಟಕ್ಕೆ ಕಳೆದ ಏಳು ವರ್ಷಗಳಿಂದ ತನ್ನದೇ ವಚನವನ್ನು ಉಲ್ಲಂಘಿಸಿರುವ ಪ್ರಧಾನ ಮಂತ್ರಿಗಳೇ ಏಕೈಕ ಹೊಣೆಗಾರರು ಎಂದಿರುವ ಎ.ಐ.ಕೆ.ಎಸ್., ಸಂಸತ್ತಿನಲ್ಲಿ ಅವರ ಭಾಷಣ ವಿದೇಶಿ ಮತ್ತು ದೇಶೀ ಕಾರ್ಪೊರೇಟ್ ಬಂಡವಾಳದ ಬಿಗಿಮುಷ್ಠಿಯಲ್ಲಿರುವ

ಪುಟ 13 ನೋಡಿ

ಸಂಪಾದಕೀಯ

ಗಾಂಧಿ ಹತ್ಯೆಗೈದವರು ಗೋಹತ್ಯೆ ನಿಷೇಧಿಸುತ್ತಾರೆ!

ತೀವ್ರ ಗದ್ದಲ, ಕೋಲಾಹಲದ ಮಧ್ಯೆ ಗೋಹತ್ಯೆ ನಿಷೇಧಿಸುವ 'ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣೆ ವಿಧೇಯಕ–2020' ಕ್ಕೆ ವಿಧಾನ ಪರಿಷತ್ತಿನಲ್ಲೂ ಅಂಗೀಕಾರ ಸಿಕ್ಕಿದೆ. ಕಳೆದ ಅಧಿವೇಶನದಲ್ಲಿ ಮೇಲ್ಮನೆಯ ಅಂಗೀಕಾರ ಪಡೆದುಕೊಳ್ಳುವಲ್ಲಿ ವಿಫಲಗೊಂಡಿದ್ದ ಯೂಡಿಯೂರಪ್ಪ ಸರ್ಕಾರ ಕೊನೆಗೂ ತನ್ನ ತಂತ್ರಗಾರಿಕೆಯಲ್ಲಿ ಯಶಸ್ವಿಯಾಗಿದೆ. ಸರ್ಕಾರಕ್ಕೆ ಮತ್ತು ಆಳುವ ಬಿಜೆಪಿ ಪಕ್ಷಕ್ಕೆ ಇದು ಪ್ರತಿಷ್ಠೆಯ ಪ್ರಶ್ನೆಯಾಗಿ ಪರಿಣಮಿಸಿತ್ತು. ಆದ್ದರಿಂದಲೇ ಸುಗ್ರೀವಾಜ್ಞೆಯನ್ನು ಹೊರಡಿಸಲಾಗಿತ್ತು.

ಅಂದು ಸೋಮವಾರ ಮಧ್ಯಾಹ್ನದ ಕಲಾಪದಲ್ಲಿ ಸಭಾಪತಿ ಪೀಠದಲ್ಲಿದ್ದ ಎಂ.ಕೆ. ಪ್ರಾಣೇಶ್ ರಾಜ್ಯಪಾಲರ ಭಾಷಣಕ್ಕೆ ವಂದನೆ ಸಲ್ಲಿಸುವ ನಿರ್ಣಯದ ಮೇಲಿನ ಚರ್ಚೆಯನ್ನು ಮೊಟಕುಗೊಳಿಸಿ ಈ ವಿಧೇಯಕದ ಮಂಡನೆಯನ್ನು ಎತ್ತಿಕೊಂಡರು. ಆಗ ಕಾಂಗ್ರೆಸ್ ಮತ್ತು ಜೆಡಿಎಸ್ ಸದಸ್ಯರು ಈ ತರಾತುರಿಯ ಮಂಡನೆ ಮತ್ತು ಚರ್ಚೆ ಈಗ ಬೇಡವೆಂದು ಪಟ್ಟುಹಿಡಿದರು. ಆದರೂ ಸಭಾಪತಿ ಅವರಿಗೆ ಕಿವಿಗೊಡದೆ ಪಶು ಸಂಗೋಪನಾ ಮಂತ್ರಿ ಪ್ರಭು ಚವಾಣ್‌ರವರಿಗೆ ವಿಧೇಯಕ ಮಂಡಿಸಲು ಸೂಚಿಸಿದರು. ಬಳಿಕ ವಿಧೇಯಕದ ಪರವಾಗಿ ಗೃಹ ಮತ್ತು ಕಾನೂನು ಮಂತ್ರಿ ಬಸವರಾಜ್ ಬೊಮ್ಮಾಯಿ ವಿವರಣೆ ನೀಡಿದರು. ಕಾಂಗ್ರೆಸ್ ಮತ್ತು ಜೆಡಿಎಸ್ ಸದಸ್ಯರು ವಿಧೇಯಕವನ್ನು ವಿರೋಧಿಸಿ ಸುದೀರ್ಘವಾಗಿ ಮಾತನಾಡಿದರಲ್ಲದೆ ಅದನ್ನು ಕೈಬಿಡಬೇಕೆಂದು ಆಗ್ರಹಿಸಿದರು. ಆಡಳಿತ ಹಾಗೂ ಪ್ರತಿಪಕ್ಷಗಳ ಸದಸ್ಯರ ನಡುವೆ ವಾಗ್ವಾದವೇ ನಡೆಯಿತು. ಕಾಂಗ್ರೆಸ್ ಸದಸ್ಯರು ಸಭಾಪತಿ ಪೀಠದ ಮುಂದೆ ಬಂದು ಘೋಷಣೆ ಕೂಗಿದರಲ್ಲದೆ ವಿಧೇಯಕದ ಪ್ರತಿಯನ್ನು ಹರಿದು ಹಾಕಿದರು. ಸದನದಲ್ಲಿ ಉಂಟಾದ ಕೋಲಾಹಲದ ಲಾಭ ಪಡೆದು ಎರಡೇ ನಿಮಿಷದಲ್ಲಿ ವಿಧೇಯಕಕ್ಕೆ ಧ್ವನಿಮತದ ಅಂಗೀಕಾರ ಪಡೆದುಕೊಳ್ಳಲಾಯಿತು.

ಗಾಂಧೀಜಿಯವರನ್ನು ಹತ್ಯೆ ಮಾಡಲಾಯಿತು. ಅದು ಕೆಲವು ಮತಾಂದರ ದ್ವೇಷದ ಪರಾಕಾಷ್ಠೆಯಾಗಿತ್ತು. ಹಾಗೆ ಗೋವುಗಳನ್ನು ಯಾರೂ1 ಹತ್ಯೆ ಮಾಡಿ ಬಿಸಾಡುವುದಿಲ್ಲ. ದ್ವೇಷ ಸಾಧನೆಗಾಗಿ ಯಾರೂ ಜಾನುವಾರುಗಳ ಹತ್ಯೆ ಮಾಡುವುದಿಲ್ಲ. 'ಹತ್ಯೆ' ಎಂಬ ಈ ಪದ ಇಲ್ಲಿ ಅಸಂಬದ್ಧವಾಗಿದೆ. ಪ್ರಾಣಿಗಳನ್ನು ಮಾನವ ಆರಂಭದಿಂದಲೂ ವಧಿಸುತ್ತಾ ಅವುಗಳ ಮಾಂಸವನ್ನು ಸೇವಿಸುತ್ತಾ ಬೆಳೆದಿದ್ದಾನೆ. ಜಾನುವಾರುಗಳನ್ನು ಬುಡಕಟ್ಟು ಸಮುದಾಯಗಳು ಆಸ್ತಿಯಾಗಿ ಸಾಕುತ್ತಿದ್ದರು. ಹೆಚ್ಚು ಜಾನುವಾರುಗಳನ್ನು ಹೊಂದಿದ್ದ ಬುಡಕಟ್ಟು ಹೆಚ್ಚು ಬಲಿಷ್ಠವೆಂದು ಪರಿಗಣಿಸಲಾಗುತಿತ್ತು. ಪ್ರಾಚೀನ ವಸ್ತು ವಿನಿಮಯ ಪದ್ಧತಿಯಲ್ಲಿ ಕೆಲಕಾಲ ಜಾನುವಾರುಗಳು ಮಾಧ್ಯಮವಾಗಿ ಬಳಸಲ್ಪಟ್ಟವು. ಕ್ರಮೇಣ ಪ್ರಾಚೀನ ಮಾನವರು ಕೃಷಿ ಮಾಡುವುದನ್ನು ಕಂಡುಕೊಂಡ ನಂತರ, ಕೃಷಿಯಲ್ಲಿ ಜಾನುವಾರುಗಳ ಬಳಕೆ ರೂಢಿಯಲ್ಲಿ ಬಂತು. ಕೃಷಿಗೆ ತೊಂದರೆಯಾಗಬಾರದೆಂಬ ಉದ್ದೇಶದಿಂದ ದನಗಳನ್ನು ಮಾಂಸಕ್ಕಾಗಿ ವಧಿಸುವುದನ್ನು ಕೈಬಿಡಲಾಯಿತು. ಅದಾಗ್ಯೂ ಕೃಷಿಗೆ ಉಪಯೋಗವಿಲ್ಲದ ಜಾನುವಾರುಗಳನ್ನು ಆಹಾರಕ್ಕಾಗಿ ವಧಿಸುವ ಪದ್ಧತಿ ಮುಂದುವರೆದಿತ್ತು. ಈಗಲೂ ಸಹ ಹೆಚ್ಚು ಬೆಲೆ ತರಬಲ್ಲ ಜಾನುವಾರುಗಳನ್ನು ಅವುಗಳನ್ನು ಸಾಕುವವರು ವಧಿಸಲು ನೀಡುವುದಿಲ್ಲ.

ಇಂದು ಪರಿಸ್ಥಿತಿ ತುಂಬಾ ಬದಲಾಗಿದೆ. ಜನಸಂಖ್ಯೆ ಭಾರೀ ಹೆಚ್ಚಾಗಿದೆ. ಕೇವಲ ಸಸ್ಯಹಾರದಿಂದ ಮಾತ್ರ ಬದುಕಲು ಸಾಧ್ಯವಿಲ್ಲದಂತಾಗಿದೆ. ದನಗಳ ಮಾಂಸ ಇತರ ಎಲ್ಲಾ ಜಾನುವಾರುಗಳ ಮಾಂಸಕ್ಕಿಂತ ಉತ್ಕೃಷ್ಟವಾಗಿದೆ. ಕುರಿ, ಕೋಳಿಗಳ ಮಾಂಸಕ್ಕಿಂತ ಅದು ಹೆಚ್ಚು ಹಗ್ಗವಾಗಿ ದೊರೆಯುತ್ತದೆ. ಕೃಷಿಗೆ ಉಪಯೋಗವಿಲ್ಲದ ದನಗಳನ್ನು ನಿರ್ವಹಿಸಲು ಸಾಧ್ಯವಾಗುತ್ತದೆ. ಅಷ್ಟು ಮಾತ್ರವಲ್ಲ, ಇಂದು ಆಧುನಿಕ ಕೃಷಿ ಪದ್ಧತಿ ಹೆಚ್ಚು ಬಳಕೆಗೆ ಬರುತ್ತಿದ್ದು ಕೃಷಿಯಲ್ಲಿ ದನಗಳಿಗಿಂತ ಯಂತ್ರಗಳನ್ನೇ ಹೆಚ್ಚು ಲಾಭದಾಯಕವಾಗಿ ಬಳಸಲಾಗುತ್ತದೆ. ಹೀಗೆ ಕೃಷಿಯಲ್ಲಿಯೂ ದನಗಳ ಬೇಡಿಕೆ ಕುಸಿಯುತ್ತಿದೆ. ರೈತನಿಗೆ ಅವುಗಳ ಸಾಕಾಣಿಕೆ ದುಬಾರಿಯಾಗುತ್ತಿದೆ. ಹೈನೋದ್ಯಮದಲ್ಲಿ ತೊಡಗಿದವರಿಗ ಹಾಲು ನೀಡದಂತಾದ ದನಗಳನ್ನು ಸಾಕುವುದು ಹೊರೆಯಾಗುತ್ತದೆ. ದನಗಳ ಮಾಂಸವನ್ನು ಆಹಾರವಾಗಿ ಸೇವಿಸುವವರು ಇಲ್ಲದೆ ಹೋಗಿದ್ದರೆ ಸಮಸ್ಯೆ ಬಾರೀ ಗಂಭೀರವಾಗುತಿತ್ತು.

ಹಣೆಗೆ ವಿಭೂತಿ ಹಚ್ಚಿಕೊಳ್ಳುವ ಬದಲು ಆರೆಸ್ಸೆಸ್ ತಿಲಕವನ್ನು ಇಟ್ಟುಕೊಳ್ಳುವ ಮುಖ್ಯ ಮಂತ್ರಿ ಯಡಿಯೂರಪ್ಪನವರು ವಿಧಾನಸಭೆಯ ಎರಡೂ ಮನೆಗಳಲ್ಲಿ ಕನಿಷ್ಠ ಚರ್ಚೆಗೂ ಅವಕಾಶ ನೀಡದೆ ಜಾನುವಾರು ಹತ್ಯಾ ನಿಷೇಧ ಕಾಯ್ದೆ ತಿದ್ದುಪಡಿ ವಿಧೇಯಕಕ್ಕೆ ಅಂಗೀಕಾರ ಪಡೆದುಕೊಂಡದ್ದು ಆರೆಸ್ಸೆಸ್ ಯಜಮಾನರನ್ನು ಸಂತೃಪ್ತಗೊಳಿಸಿ ಕುರ್ಚಿಮೇಲಿನ ತನ್ನ ಸ್ಥಾನವನ್ನು ಗಟ್ಟಿಗೊಳಿಸಿದ್ದು ಗುಟ್ಟಿನ ವಿಷಯವೇನಲ್ಲ. ಗೋಹತ್ಯೆ ನಿಷೇಧ ಆರೆಸ್ಸೆಸ್ – ವಿಶ್ವ ಹಿಂದೂ ಪರಿಷತ್‌ಗಳ ಪ್ರಮುಖ ಅಜೆಂಡಾಗಳಲ್ಲಿ ಒಂದು. ಭಾರತವನ್ನು ಹಿಂದೂ ರಾಷ್ಟ್ರವನ್ನಾಗಿಸುವ ಅವುಗಳ ಗುರಿಸಾಧನೆಯತ್ತ ಹಿಂದೂ ಮತ ಬ್ಯಾಂಕನ್ನು ಭದ್ರಗೊಳಿಸುವುದು ಅವರ ಉದ್ದೇಶವಾಗಿದೆ. ಈ ಗುರಿಸಾಧನೆಗಾಗಿ ಅವರು ಭಾರತದ ಮುಗ್ಧ ಹಿಂದುಗಳ ಭಾವನೆಗಳನ್ನು, ನಂಬಿಕೆಗಳನ್ನು ದುರ್ಬಳಕೆ ಮಾಡುತ್ತಿದ್ದಾರೆ. ಭಾರತದ ಶ್ರೇಣೀಕೃತ ಸಮಾಜದಲ್ಲಿ ಮೇಲ್ವರ್ಗದ ಜನಗಳಲ್ಲಿ ಗೋವು ಪವಿತ್ರವಾದದ್ದು, ಅದರ ದೇಹದೊಳಗೆ ದೇವರುಗಳು ನೆಲೆಸಿದ್ದಾರೆ ಎಂಬ ಕಲ್ಪನೆಯನ್ನು ಆಳವಾಗಿ ಬೆಳೆಸಿದ್ದಾರೆ. ನಮಗೆ ಪವಿತ್ರವಾದ ಹಸುವನ್ನು ಇವರು ಯಾಕೆ ಹತ್ಯೆ ಮಾಡಬೇಕು ಎಂದು ಅವರನ್ನು ಹಿಂದುಯೇತರರ ವಿರುದ್ಧ ಎತ್ತಿಕಟ್ಟಲಾಗುತ್ತಿದೆ.

ಯಾರಾದರೂ ಪವಿತ್ರ ಎನ್ನಿಸುವುದನ್ನೇ ತಿನ್ನುತ್ತಾರೆಯೇ ಹೊರತು ಅಪವಿತ್ರವಾದುದನ್ನಲ್ಲ. ದೇವಸ್ಥಾನದಲ್ಲಿ ನೀಡಲಾಗುವ ಪ್ರಸಾದವನ್ನು ಪವಿತ್ರ ಎಂದುಕೊಂಡೇ ಸೇವಿಸಲಾಗುತ್ತದೆ. ಕೆಲವರಿಗೆ ಹಂದಿ ಎಂಬುದು ಅಪವಿತ್ರ. ಆದ್ದರಿಂದ ಅವರು ಅದರ ಮಾಂಸವನ್ನು ಸೇವಿಸುವುದಿಲ್ಲ. ಯೇಸುಕ್ರಿಸ್ತ 'ನನ್ನ ಮಾಂಸವನ್ನು ನೀವು ಸೇವಿಸದಿದ್ದರೆ, ನಿಮ್ಮಲ್ಲಿ ಜೀವ ಇರಲಾರದು' ಎಂದು ತನ್ನ ಶಿಷ್ಯವೃಂದಕ್ಕೆ ಹೇಳುತ್ತಾನೆ. ಹೀಗೆ ಅವರೆಲ್ಲರೂ ಪವಿತ್ರವಾದುದನ್ನು ಮಾತ್ರ ಸೇವಿಸುತ್ತಾರೆ. ಗೋವು ಪವಿತ್ರ ಎಂದಾದರೆ ಆಹಾರವಾಗಿ ಸೇವಿಸಲು ಅದು ಅತೀ ಯೋಗ್ಯವಾದ ಜಾನುವಾರು ಆಗಿದೆ.

ಗೋವುಗಳನ್ನು ವಧಿಸುವುದು ನಮ್ಮ ಭಾವನೆಗೆ ನೋವುಂಟು ಮಾಡುತ್ತದೆ ಎಂದು ಹಿಂದುಗಳಲ್ಲಿ ಕೆಲವರು ಆತಂಕಪಡಬಹುದು. ಯಾರಿಗೂ ಯಾರಿಂದಲೂ ನೋವಾಗಬಾರದು. ಅದು ಯಾವ ಪ್ರಾಣಿ ವಧೆಗಿಂತಲೂ ಹೆಚ್ಚು ಕ್ರೂರವಾದ ಹಿಂಸೆ. ಮಾನವರು ಮಾನವರಿಗೆ ನೀಡುವ ನೋವು ಅತಿ ದೊಡ್ಡ ಹಿಂಸೆ. ಮಾನವನಿಂದ ಮಾನವನಿಗಾಗುವ ಹಿಂಸೆಯನ್ನು ತಡೆಯಲು ನಾವೆಲ್ಲರೂ ಒಂದಾಗಿ ಪ್ರಯತ್ನಿಸಬೇಕಾಗಿದೆ. ಅಲ್ಪಸಂಖ್ಯಾತರಾದ ಕ್ರಿಶ್ಚಿಯನ್ನರು, ಮುಸಲ್ಮಾನರು, ಹಿಂದುಗಳೇ ಆಗಿರುವ ಶೂದ್ರರು, ದಲಿತರು ಗೋಮಾಂಸವನ್ನು ಆಹಾರವಾಗಿ ಸೇವಿಸುತ್ತಾರೆ. ಯಾರಿಗೂ ನೋವು ಉಂಟುಮಾಡುವುದು ಅವರ ಉದ್ದೇಶವಲ್ಲ. ಶತಮಾನಗಳಿಂದ ಅದು ಅವರ ಆಹಾರ ಪದ್ಧತಿಯ ಭಾಗವಾಗಿದೆ. ಅವರು ಗೋಮಾಂಸ ತಿನ್ನುವುದರಿಂದ ಹಿಂದುಗಳ ಮನಸ್ಸಿಗೆ ನೋವು ಆಗುವುದಾದರೆ ಅದನ್ನು ಅವರೊಂದಿಗೆ ವಿನಯದಿಂದ ಚರ್ಚಿಸಬೇಕು. ಅವರ ಮನಸ್ಸುಗಳಿಗೆ ಹಿಂದುಗಳು ನೋವು ನೀಡುತ್ತಿರುವುದನ್ನು ತ್ಯಜಿಸಲಾಗದೆ? ಅವರ ಮಸೀದಿಗಳನ್ನು, ಕಾರಣ ಏನೇ ಇರಲಿ, ನೀವು ನಾಶಮಾಡುವುದರಿಂದ ಅವರಿಗೆ ನೋವಾಗುವುದಿಲ್ಲವೆ? ದೇವಸ್ಥಾನ ಪ್ರವೇಶ ನಿರಾಕರಣೆ, ಸಹಬೋಜನ ನಿರಾಕರಣೆ, ಕ್ಷೌರದ ಅಂಗಡಿಗೆ ಪ್ರವೇಶ ನಿರಾಕರಣೆ, ಹೊಟೇಲುಗಳಲ್ಲಿ ತಾರತಮ್ಯ, ಅಂತರಜಾತಿ ಮದುವೆಗಳಿಗೆ ಪ್ರತಿಬಂಧ ಮುಂತಾದ ನಡವಳಿಕೆಯಿಂದ ನಮ್ಮ ದಲಿತ ಬಂಧುಗಳಿಗೆ ನೋವಾಗುವುದಿಲ್ಲವೆ.? ನೀವು ಒಮ್ಮೆಯಾದರೂ ಇದನ್ನು ಆಲೋಚಿಸಿದ್ದೀರಾ? ಪಶ್ಚಾತ್ತಾಪ ಪಟ್ಟಿದ್ದೀರಾ? ಗೋಮಾಂಸ ಸೇವಿಸುವುದು ಅವರ ಹಕ್ಕು. ಆ ಹಕ್ಕನ್ನು ಅವರು ತ್ಯಾಗ ಮಾಡಬೇಕಾದರೆ ನೀವು ಪರ್ಯಾಯವಾದ ಯಾವ ತ್ಯಾಗಕ್ಕೆ ಸಿದ್ದರಿದ್ದೀರಿ? ಅವರ ಬಾಬರಿ ಮಸೀದಿಯನ್ನು ಅವರಿಗೆ ವಾಪಸ್ ಕೊಡುತ್ತಿರಾ? ದಲಿತ ಹೆಣ್ಣು ಮಕ್ಕಳೊಂದಿಗೆ ನೀವು ನಿಮ್ಮ ಗಂಡು ಮಕ್ಕಳ ಮದುವೆಗೆ ಸಾರ್ವತ್ರಿಕವಾಗಿ ಸಮ್ಮತಿಸುತ್ತೀರಾ? ಎಲ್ಲಾ ಸಮಸ್ಯೆಗಳಿಗೂ ಪರಿಹಾರ ಸಾಧ್ಯವಿದೆ. ಬಲವಂತದ ಕಾನೂನು ಬೇಕಾಗಿಲ್ಲ. ನೀವು ನಿಮ್ಮ ನೆರೆಹೊರೆಯ ಅಲ್ಪಸಂಖ್ಯಾತರೊಂದಿಗೆ, ದಲಿತರೊಂದಿಗೆ ಅನ್ಯೋನ್ಯವಾಗಿ ಬಾಳಿದರೆ ಅಲ್ಲೇ ಸಿಗಲಿದೆ ಪರಿಹಾರ. ಬುದ್ಧ, ಬಸವ, ಅಂಬೇಡ್ಕರ್, ಗಾಂಧಿ ಕಂಡ ಕನಸಿನ ಭಾರತ! ಮತಬ್ಯಾಂಕ್ ರಾಜಕಾರಣಕ್ಕೆ ಧಿಕ್ಕಾರವಿರಲಿ. ಈ ಕಾಯ್ದೆಯಿಂದ ಸಮಾಜದಲ್ಲಿ ದ್ವೇಷ ಹೆಚ್ಚಾಗುವುದು. ಅಲ್ಪ ಸಂಖ್ಯಾತರ ಮೇಲೆ ದಾಳಿ ದೌರ್ಜನ್ಯ ಹೆಚ್ಚಾಗುವುದು. ಯಡಿಯೂರಪ್ಪನವರೆ, ಈ ಕರಾಳ ಕಾನೂನು ವಾಪಸ್ ಪಡೆಯಿರಿ.

ಪಾರ್ಕಿಂಗ್ ನೀತಿ ದುಬಾರಿ ದಂಡ ತಡೆಗೆ ಸಿಪಿಐ(ಎಂ) ಒತ್ತಾಯ

ಬಿಬಿಎಂಪಿ ಮತ್ತು ನಗರ ಭೂ ಸಾರಿಗೆ ನಿರ್ದೇಶನಾಲಯ ರೂಪಿಸಿದ್ದ ಪಾರ್ಕಿಂಗ್ ನೀತಿ 2.0 ಗೆ ರಾಜ್ಯ ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಒಪ್ಪಿಗೆಯು ಜನತೆಯ ಮೇಲೆ ದುಬಾರಿ ದಂಡ ವಿಧಿಸಲು ಮತ್ತು ಜನತೆಯ ಸುಲಿಗೆಗೆ ಅನುವು ಮಾಡಿಕೊಡಲಿದೆ. ಅದನ್ನು ತಡೆಯಲು ರಾಜ್ಯ ಸರ್ಕಾರವನ್ನು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲಾ ಸಮಿತಿಗಳು ಒತ್ತಾಯಿಸಿವೆ. ವಾಹನ ನಿಲುಗಡೆಯನ್ನು ಶಿಸ್ತಿಗೆ ಒಳಪಡಿಸಿ ಸಾರಿಗೆಯನ್ನು ಸುಗಮಗೊಳಿಸುವ ಬದಲು ಅದನ್ನೇ ಬಳಸಿ ಜನತೆಯ ಮೇಲೆ ಹೊರೆ ಹೊರಿಸಿ ಸುಲಿಗೆ ಮಾಡುವ ಕ್ರಮವಿದಾಗಿದೆ. ನಗರದ ಕಡಿಮೆ, ಮಧ್ಯಮ ಆದಾಯದ ಗುಂಪಿನ ಜನತೆಯು ತಮ್ಮ ಮನೆಯ ಮುಂದೆ ನಿಲ್ಲಿಸುವ ದ್ವಿಚಕ್ರ ವಾಹನಗಳಿಗೂ ಹಣ ಪಾವತಿಸಿ ಪರವಾನಗಿ ಪಡೆಯಬೇಕೆಂಬ ನೀತಿಯು ಜನತೆಯ ಸುಲಿಗೆಗೆ ಮತ್ತೊಂದು ಮಾರ್ಗವಾಗಲಿದೆ.

ಇಂತಹ ನಾಗರೀಕ ವಿರೋಧಿ ಕ್ರಮಕ್ಕೆ ಬಿಜೆಪಿ ಸರ್ಕಾರದ ಜನದ್ರೋಹಿ ನೀತಿಯೆ ಕಾರಣ ಎಂದು ಸಿಪಿಐ(ಎಂ) ಖಂಡಿಸಿದೆ.

ಪಾರ್ಕಿಂಗ್ ನೀತಿ ಪ್ರಕಟಿಸಿದ ಕೂಡಲೇ ಅದರಲ್ಲಿನ ಸುಲಿಗೆ ಕ್ರಮಗಳನ್ನು ಸಿಪಿಐ(ಎಂ) ಮತ್ತಿತರರು ವಿರೋಧಿಸಿದ್ದರೂ ಸಹಾ ಯಾವುದೆ ಆಕ್ಷೇಪಣೆಯನ್ನು ಪರಿಗಣಿಸದೆ ನೀತಿಗೆ ಒಪ್ಪಿಗೆ ನೀಡಿರುವುದು ಬಿಜೆಪಿ ಸರ್ಕಾರದ ಹಠಮಾರೀತನದ ಜನವಿರೋಧೀ ಧೋರಣೆಯ ಪ್ರತಿಫಲವಾಗಿದೆ. ಪ್ರತಿಯೊಂದಕ್ಕೂ ಬಳಕೆದಾರರ ಶುಲ್ಕ ವಿಧಿಸುವ ನವ ಉದಾರವಾದಿ ಆರ್ಥಿಕ ನೀತಿಯನ್ನು ರಾಜ್ಯ ಬಿಜೆಪಿ ಸರ್ಕಾರ ಜಾರಿಗೊಳಿಸುತ್ತಿರುವುದರ ಪರಿಣಾಮವಾಗಿದೆ.

ಕಡಿಮೆ ಹಾಗು ಮದ್ಯಮ ಆದಾಯದ ಗುಂಪಿನ ಪ್ರದೇಶಗಳಲ್ಲಿ ವಾಸಿಸುವವರ ಮನೆ ಮುಂದಿನ ವಾಹನ ನಿಲುಗಡೆಗೆ ರಿಯಾಯಿತಿ ನೀಡಲು ಹಾಗು ದುಬಾರಿ ಶುಲ್ಕ ತಡೆಗೆ ಕ್ರಮ ವಹಿಸದಿದ್ದಲ್ಲಿ ಸಿಪಿಐ(ಎಂ) ತೀವ್ರ ಹೋರಾಟಕ್ಕೆ ಮುಂದಾಗಲಿದೆ ಎಂದು ಸರ್ಕಾರಕ್ಕೆ ಎಚ್ಚರಿಕೆ ನೀಡಿದೆ.



ಹಗ್ಗಕಟ್ಟಿ ಜೀಪೆಳೆದು ಪ್ರತಿಭಟನೆ

ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಏರಿಕೆ ಮಾಡಿರುವುದನ್ನು ಖಂಡಿಸಿ ಸಿಪಿಐಎಂ ಕಾರ್ಯಕರ್ತರು ವಿನೂತನ ಪ್ರತಿಭಟನೆ ನಡೆಸಿದ್ದಾರೆ.

ಕೊಡಗು ಜಿಲ್ಲೆ ಸೋಮವಾರಪೇಟೆ ತಾಲ್ಲೂಕಿನ ನೆಲ್ಯಹುದಿಕೇರಿಯಲ್ಲಿ ಫೆ. 09 ರಂದು ಸಿಪಿಐಎಂ ಕಾರ್ಯಕರ್ತರು ಜೀಪಿಗೆ ಹಗ್ಗಕಟ್ಟಿ ಎಳೆದು ವಿಭಿನ್ನ ರೀತಿಯಲ್ಲಿ ಪ್ರತಿಭಟನೆ ನಡೆಸಿದ್ದಾರೆ.

ಜೀಪಿಗೆ ಹಗ್ಗಕಟ್ಟಿ ಎಳೆಯುವುದರ ಮೂಲಕ ಪೆಟ್ರೋಲ್, ಡೀಸೆಲ್ ಕೊಳ್ಳಲು ಸಾಧ್ಯವಿಲ್ಲದ ಸ್ಥಿತಿ ನಿರ್ಮಾಣವಾಗಿದೆ ಎನ್ನೋದನ್ನು ಬಿಂಬಿಸಿದ್ದಾರೆ. ಆಟೋ ಮತ್ತು ಬೈಕ್‌ಗಳನ್ನು ನೂಕಿಕೊಂಡೇ ಪ್ರತಿಭಟನಾ ಮೆರವಣಿಗೆ ನಡೆಸಿದ್ದಾರೆ. ಅಲ್ಲದೆ ಗ್ಯಾಸ್ ಬೆಲೆಯೂ ಜಾಸ್ತಿ ಮಾಡಲಾಗಿದ್ದು ಸಬ್ಸಿಡಿಯನ್ನು ಕಡಿತ ಮಾಡಲಾಗಿದೆ ಎಂದು ದೂರಿದ ಪ್ರತಿಭಟನಾ ನಿರತ ಮಹಿಳೆಯರು ಖಾಲಿ ಸಿಲಿಂಡರ್ ಒಂದನ್ನು ಜೀಪ್ ಮೇಲೆ ಇಟ್ಟು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ರಾಷ್ಟ್ರೀಯ ಹೆದ್ದಾರಿಯ ಅವೈಜ್ಞಾನಿಕ ಕಾಮಗಾರಿಯ ವಿರುದ್ಧ-ಡಿವೈಎಫ್ಐ ಧರಣಿ



ರಾಷ್ಟ್ರೀಯ ಹೆದ್ದಾರಿಯ ಅವೈಜ್ಞಾನಿಕ ಕಾಮಗಾರಿಯ ವಿರುದ್ಧ ವಡೇರ ಹೋಬಳಿ ಗ್ರಾಮದ ನಿವಾಸಿಗಳು ಹಾಗೂ ಡಿವೈಎಫ್ಐ ತಾಲೂಕು ಸಮಿತಿ ಹಾಗೂ ಕುಂದಾಪುರ ಆಟೋರಿಕ್ಷಾ ಮತ್ತು ವಾಹನ ಚಾಲಕರ ಸಂಘ ಸಿಐಟಿಯು ಮೆರವಣಿಗೆ ನಡೆಸಿ ಶಾಸ್ತ್ರಿ ವೃತ್ತದಲ್ಲಿ ಧರಣಿ ಸತ್ಯಾಗ್ರಹ ನಡೆಸಿದರು. ಬೊಬ್ಬರ್ಯನ ಕಟ್ಟೆಯ ಪಶ್ಚಿಮ ಭಾಗದ ನಿವಾಸಿಗಳು ತಮ್ಮ ಅಗತ್ಯದ ಕಛೇರಿಗಳಾದ ಮೆಸ್ಕಾಂ, ಶಿಶು ಅಭಿವೃದ್ಧಿ ಅಧಿಕಾರಿ ಕಛೇರಿ, ಗ್ರಂಥಾಲಯ, ಭೂಮಾಪನ ಇಲಾಖೆ, ತೆರಿಗೆ ಇಲಾಖೆಗಳು, ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳು ಕಾಲಡಿಯಲ್ಲಿಯೇ ಇದ್ದರೂ ನವಯುಗ ಕಂಪೆನಿಯ ಅವೈಜ್ಞಾನಿಕ ಕಾಮಗಾರಿಯಿಂದ ಸ್ಥಳೀಯರು 3 ಕಿ.ಮೀ. ಸುತ್ತಿ ಬರಬೇಕಾಗಿದೆ. ಇದರ ವಿರುದ್ಧ ಪ್ರತಿಭಟಿಸಿದ ನಾಗರೀಕರು ಸ್ಥಳೀಯ ಬೊಬ್ಬರ್ಯನ ಕಟ್ಟೆ ಬಳಿ ಪಾದಾಚಾರಿ ಮಾರ್ಗ ನಿರ್ಮಿಸಲು ಆಗ್ರಹಿಸಿತು. ಈ ವೇಳೆಯಲ್ಲಿ ಡಿವೈಎಫ್ಐ ಅಧ್ಯಕ್ಷ ರಾಜೇಶ ವಡೇರ ಹೋಬಳಿ, ಉಪಾಧ್ಯಕ್ಷ ಸುರೇಶ್ ಕಲ್ಲಾಗರ, ಸಿಐಟಿಯು ಸಂಚಾಲಕರಾದ ಎಚ್ ನರಸಿಂಹ, ರಿಕ್ಷಾ ಸಂಘಟನೆಯ ಪ್ರಧಾನ ಕಾರ್ಯದರ್ಶಿ ರಾಜು ದೇವಾಡಿಗ, ಸಂತೋಷ ಕಲ್ಲಾಗರ ಧರಣಿಯನ್ನುದ್ದೇಶಿಸಿ ಮಾತನಾಡಿದರು. ಡಿವೈಎಫ್ಐ ಮುಖಂಡ, ರಾಜ ಬಿಟಿಆರ್, ರವಿವಿಎಂ, ಕಿರಣ ಪಡುಕೋಣೆ ವಂದಿಸಿದರು.



ಉನ್ನತ ಶಿಕ್ಷಣದ ಅಪಹರಣಕ್ಕೆ ಯಾರು ಹೊಣೆ?


ಸರಕಾರಗಳು ಶಿಕ್ಷಣ ಕ್ಷೇತ್ರವನ್ನು ಯಾವ ದಿಕ್ಕಿಗೆ ಕೊಂಡೊಯ್ಯುತ್ತಿದ್ದಾರೆ? ಶಿಕ್ಷಣ ನಿಜಕ್ಕೂ ಎಲ್ಲರ ಸ್ವತ್ತಾಗುತ್ತಿದೆಯಾ? ಖಾಸಗಿ ಮತ್ತು ವಿದೇಶಿ ವಿಶ್ವವಿದ್ಯಾಲಯಗಳಿಂದ ಶಿಕ್ಷಣದ ಮೂಲ ಆಶಯ ಏನಾಗುತ್ತಿದೆ? ಉನ್ನತ ಶಿಕ್ಷಣದ ಅಪಹರಣಕ್ಕೆ ಯಾರು ಹೊಣೆ? ಎಂದು ಉನ್ನತ ಶಿಕ್ಷಣದ ಕ್ಷೇತ್ರದ ಕುರಿತು ಹತ್ತು ಹಲವು ಪ್ರಶ್ನೆಗಳು ಮೂಡುತ್ತಿವೆ.

ಭಾರತದಲ್ಲಿ ಉನ್ನತ ಶಿಕ್ಷಣ ಪ್ರಾಚೀನ ಕಾಲದಿಂದಲೂ ಹೆಚ್ಚು ಮಹತ್ವ ಪಡೆದುಕೊಂಡ ಕ್ಷೇತ್ರ. ಪ್ರಾಚೀನ ಕಾಲದ ನಳಂದ, ತಕ್ಷಶೀಲ, ಕಂತಿ, ಓದಂಟಪುರಿ, ಉಜ್ಜಯಿನಿ, ಉನ್ನತ ಶಿಕ್ಷಣದ ಕೇಂದ್ರಗಳಾಗಿದ್ದಲ್ಲದೆ ದೇಶ ವಿದೇಶದಿಂದ ವಿದ್ಯಾರ್ಥಿ ಮತ್ತು ಶಿಕ್ಷಕರನ್ನು ಆಕರ್ಷಿಸುತ್ತಿದ್ದವು. ಪ್ರಾಚೀನ ಕಾಲದಿಂದಲೂ ಉನ್ನತ ಶಿಕ್ಷಣ ಆಳುವ ವರ್ಗದ ಮತ್ತು ಶ್ರೀಮಂತರ ಹಿತಕ್ಕೆ ರಕ್ಷಣೆಗೆ ಮಾತ್ರ ಮೀಸಲಾಗಿತ್ತೇ ವಿನಃ ಸಾಮಾನ್ಯ ಜನರಿಗೆ ಸಿಗುತ್ತಿರಲಿಲ್ಲ. ಆಧುನಿಕ ಕಾಲದಲ್ಲಿ ಬ್ರಿಟಿಷ್ ರು, ಉನ್ನತ ಶಿಕ್ಷಣ ಮುಕ್ತವಾಗಿ ನೀಡುವ ಉದ್ದೇಶದಿಂದ ಭಾರತದಲ್ಲಿ 1858ರಲ್ಲಿ ಕಲ್ಕತ್ತ, ಬಾಂಬೆ ಮತ್ತು ಮದ್ರಾಸ್‌ನಲ್ಲಿ ಮೂರು ವಿಶ್ವವಿದ್ಯಾಲಯ ಆರಂಭಿಸಿದರು. 1916ರಲ್ಲಿ 16 ವಿಶ್ವವಿದ್ಯಾನಿಲಯಗಳನ್ನು ಭಾರತದಲ್ಲಿ ಆರಂಭಿಸಿದರು. ಸ್ವಾತಂತ್ರ ನಂತರ ಉನ್ನತ ಶಿಕ್ಷಣದ ಕ್ಷೇತ್ರ ವಿಶಾಲವಾಗಿ ವಿಸ್ತರಿಸುತ್ತಾ ಹೋಯಿತು.

1991 ರಿಂದ ಉನ್ನತ ಶಿಕ್ಷಣ ಸುಧಾರಣೆಗಳ ಬಗ್ಗೆ ಸಲಹೆ ನೀಡುವ ವರದಿಗಳು ಆರಂಭಗೊಂಡವು, ಬಹುತೇಕ ಆ ವರದಿಗಳು ಖಾಸಗೀಕರಣ, ಉದಾರೀಕರಣ, ವಿದೇಶಿಕರಣಕ್ಕೆ ಆದ್ಯತೆ ನೀಡಿವೆ. 19 ನೇ ಶತಮಾನ ಕೃಷಿಯ ವಾಣಿಜ್ಯಕರಣಕ್ಕೆ ಪ್ರೋತ್ಸಾಹವನ್ನು ನೀಡಿದರೆ. 21 ನೇ ಶತಮಾನದಲ್ಲಿ ಕೇಂದ್ರ ಮತ್ತು ರಾಜ್ಯ ಸರಕಾರಗಳು ಉನ್ನತ ಶಿಕ್ಷಣವನ್ನು ಖಾಸಗೀಕರಣ ಮತ್ತು ವಾಣಿಜ್ಯಕರಣಗೊಳಿಸಿವೆ. ಕೇಂದ್ರದಲ್ಲಿ ಈ ಹಿಂದೆ ಹಲವು ದಶಕಗಳ ಕಾಲ ಆಳ್ವಿಕೆ ನಡೆಸಿದ ಯು.ಪಿ.ಎ ಸರ್ಕಾರ ಅನುಸರಿಸಿದ ಖಾಸಗೀಕರಣ ಹಾಗೂ ನವ ಉದಾರೀಕರಣ ನೀತಿಗಳ ಪರಿಣಾಮ ಶಿಕ್ಷಣ ಕ್ಷೇತ್ರವು ದಿವಾಳಿಯಂಚಿಗೆ ತಲುಪಿತು, ಈಗ ಕೇಂದ್ರದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ನೇತೃತ್ವದ ಎನ್ ಡಿ ಎ ಸರಕಾರವು ಹಿಂದಿನ ಯುಪಿಎ ಸರಕಾರ ಅನುಸರಿಸಿದ ಖಾಸಗೀಕರಣ ಹಾಗೂ ನವ ಉದಾರೀಕರಣ ನೀತಿಗಳನ್ನು ಚಾಚೂ ತಪ್ಪದೇ ಜಾರಿ ಮಾಡಲು ಮುತುವರ್ಜಿ ವಹಿಸುವ ಜೊತೆಗೆ ಶಿಕ್ಷಣ ಕ್ಷೇತ್ರವನ್ನು ಕೋಮುವಾದೀಕರಣಗೊಳಿಸುವ ಹಾಗೂ ಶಿಕ್ಷಣ ಕ್ಷೇತ್ರದ ಮೇಲೆ ಧಾಳಿ ನಡೆಸಲು ಮುಂದಾಗಿದೆ. ಅದಕ್ಕಾಗಿ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಕೇಂದ್ರ ಸರಕಾರ ಜಾರಿಗೆ ತಂದಿದೆ.

ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ 2020 ರಲ್ಲಿ 100 ಖಾಸಗಿ ವಿ.ವಿ ಮತ್ತು ವಿದೇಶಿ ವಿಶ್ವ ವಿದ್ಯಾಲಯಗಳನ್ನು ಆರಂಭಿಸುವುದಾಗಿ ಹೇಳಿದೆ. ಈಗ ಕರ್ನಾಟಕದಿಂದಲೆ ಅದಕ್ಕೆ ಚಾಲನೆ ನೀಡಲಾಗಿದೆ. ಮೊನ್ನೆ ನಡೆದ ವಿಧಾನ ಸಭಾ ಅಧೀವೇಶನದಲ್ಲಿ ಐದು ಖಾಸಗಿ ವಿವಿಗಳಿಗೆ ಅನುಮತಿ ನೀಡಲು ಮುಂದಾಗಿದೆ. ವಿದ್ಯಾಶಿಲ್ಪ ವಿಶ್ವವಿದ್ಯಾನಿಲಯ, ಏಟ್ರಿಯಾ ವಿಶ್ವವಿದ್ಯಾಲಯ, ನ್ಯೂ ಹೊರೈಜನ್ ವಿಶ್ವವಿದ್ಯಾನಿಲಯ, ಜಗದ್ಗುರು ಮುರುಘ ರಾಜೇಂದ್ರ ವಿಶ್ವವಿದ್ಯಾನಿಲಯ ವಿಧೇಯಕ ಅಂಗೀಕಾರಗೊಂಡಿದೆ. ಸೇಂಟ್ ಜೋಸೆಫ್ ವಿವಿ ವಿಧೇಯಕ ಅಂಗಿಕಾರಕ್ಕೆ ರಾಜ್ಯಪಾಲರ ಒಪ್ಪಿಗೆ ಬೇಕಾದ ಹಿನ್ನೆಲೆಯಲ್ಲಿ ವಿಧೇಯಕ ಮಂಡನೆಯನ್ನು ಮುಂದೂಡಲಾಗಿದೆ.

ಬಿಜೆಪಿ ಸರಕಾರ ಅಧಿಕಾರವಿದ್ದಾಗಲೆಲ್ಲ ಖಾಸಗಿ ವಿ.ವಿ ಸ್ಥಾಪನೆ ಮಾಡುತ್ತಿದೆ. ಹಿಂದೆ ಸಿ.ಟಿ ರವಿ ಉನ್ನತ ಶಿಕ್ಷಣ ಸಚಿವರಾಗಿದ್ದಾಗ 20 ಕ್ಕೂ ಹೆಚ್ಚು ಖಾಸಗಿ ವಿ.ವಿ ಗಳ ಸ್ಥಾಪನೆ ಮಾಡಿದ್ದರು. ಉನ್ನತ ಶಿಕ್ಷಣವನ್ನು ಖಾಸಗೀಕರಣ ಮಾಡುವ ಮೂಲಕ ಶಿಕ್ಷಣವನ್ನು ಉಳ್ಳವರಪರ ಮಾಡುತ್ತಿದ್ದಾರೆ. ಸಂಶೋಧನಾ ಶಿಕ್ಷಣವನ್ನು ತಳ ಸಮುದಾಯಗಳು ಪಡೆಯಬಾರದು ಎಂಬುದು ಬಿಜೆಪಿ ಉದ್ದೇಶವಾಗಿದೆ. ಎಂಬ ಆರೋಪಗಳು ಕೇಳಿ ಬರುತ್ತಿವೆ. ರಾಜ್ಯದಲ್ಲಿ ಸರ್ಕಾರಿ 30 ವಿಶ್ವ ವಿದ್ಯಾಲಯಗಳಿವೆ, 14 ಡೀಮ್ಡ್ ವಿಶ್ವ ವಿದ್ಯಾಲಯಗಳಿವೆ, 22 ಖಾಸಗಿ ವಿವಿ ಸೇರಿದಂತೆ ಒಟ್ಟು 65 ವಿಶ್ವ ವಿದ್ಯಾಲಯಗಳಿವೆ.



ಅದರಲ್ಲಿ ಖಾಸಗಿಯವರು ಪಾಲು ಹೆಚ್ಚಿದೆ. 35 ಖಾಸಗಿ ವಿಶ್ವ ವಿದ್ಯಾಲಯಗಳು ಕರ್ನಾಟಕದಲ್ಲಿ ಈಗ ತಲೆ ಎತ್ತಿವೆ. ಉನ್ನತ ಶಿಕ್ಷಣವನ್ನು ಮಾರುಕಟ್ಟೆಯ ಸರಕನ್ನಾಗಿಸಲು ಯತ್ನಿಸಲಾಗುತ್ತಿದೆ ಎಂಬುದು ಈ ಅಂಕಿ ಅಂಶಗಳಿಂದ ಸಾಬೀತಾಗಿದೆ. ಖಾಸಗಿ ವಿಶ್ವ ವಿದ್ಯಾಲಯಗಳು ಶಿಕ್ಷಣದ ಮೂಲ ಆಶಯವನ್ನೆ ನಾಶಮಾಡುತ್ತವೆ. ಕೇಂದ್ರ, ರಾಜ್ಯ ಸರಕಾರಗಳು ಶಿಕ್ಷಣವನ್ನು ಉಳ್ಳವರ ಪರವಾಗಿಸುವ ಕೆಲಸವನ್ನು ಮಾಡುತ್ತಿವೆ ಎಂದು ಹಂಪಿ ವಿಶ್ವ ವಿದ್ಯಾಲಯದ ವಿಶ್ರಾಂತ ಪ್ರಾಧ್ಯಾಪಕರಾದ ಚಂದ್ರ ಪೂಜಾರಿಯವರು ಆರೋಪವನ್ನು ಮಾಡಿದ್ದಾರೆ.

ಡೀಮ್ಡ್ ವಿಶ್ವ ವಿದ್ಯಾಲಯಗಳು ಕೂಡಾ ಮುಂದೆ ಖಾಸಗಿ ವಿ.ವಿ ತೆರೆಯಲು ಅರ್ಜಿಯನ್ನು ಸಲ್ಲಿಸುತ್ತವೆ ಆಗ ಅವುಗಳಿಗೂ ಅನುಮತಿ ಕೊಟ್ಟರೆ ಆಶ್ಚರ್ಯವಿಲ್ಲ, ಸರ್ಕಾರ ಖಾಸಗೀ ಸಹಭಾಗಿತ್ವ ಹೆಸರಿನಲ್ಲಿ ಎಲ್ಲಾ ಹಂತದಲ್ಲಿ ಶಿಕ್ಷಣವನ್ನು ಖಾಸಗೀಕರಣ ಗೊಳಿಸಲಾಗುತ್ತಿದೆ ಎಂದು ಶಿಕ್ಷಣ ತಜ್ಞ ಶ್ರೀಪಾದ್ ಭಟ್ ಆರೋಪಿಸಿದ್ದಾರೆ.

ಸಂವಿಧಾನ ಬದ್ಧ ಶಿಕ್ಷಣದ ಹಕ್ಕನ್ನು ಎಲ್ಲರಿಗೂ ತಲುಪಿಸುವಲ್ಲಿ ಸರ್ಕಾರಗಳು ವಿಫಲವಾಗಿವೆ. ಸರಕಾರಿ ಶಾಲೆಗಳನ್ನು ಮುಚ್ಚಿದಂತೆ ಸರಕಾರಿ ಕಾಲೇಜು, ವಿಶ್ವವಿದ್ಯಾಲಯಗಳನ್ನು ಮುಚ್ಚುವ ಭೀತಿ ಎದುರಾಗಿದೆ. ವ್ಯಾಪಾರಿ ಮನೋಭಾವದ ಸರಕಾರಗಳು ಶಿಕ್ಷಣವನ್ನು ಉಳ್ಳವರ ಪರವಾಗಿಸಿವೆ. ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಶಿಕ್ಷಣಕ್ಕೆ ನೀಡಿದ ಆದ್ಯತೆಯನ್ನು ನಮ್ಮ ಕೇಂದ್ರ ರಾಜ್ಯ ಸರಕಾರಗಳು ಅಧ್ಯಯನ ಮಾಡಬೇಕಿದೆ. ಶಿಕ್ಷಣ ಜಗತ್ತನ್ನು ಬದಲಿಸಬಹುದಾದ ಅತ್ಯಂತ ಶಕ್ತಿಯುತವಾದ ಆಯುಧ ಎಂಬ ನೆಲ್ಸನ್ ಮಂಡೇಲಾರ ಆಶಯವನ್ನು ಜಾರಿ ಮಾಡಲು ಮುಂದಾಗಬೇಕಿದೆ.

ದಿಲ್ಲಿಯಲ್ಲಿ ಹೋರಾಟ ನಿರತ ರೈತರ ಮೇಲಿನ ದೌರ್ಜನ್ಯ ಮತ್ತು ಕೇಂದ್ರ ಸರ್ಕಾರದ ರೈತ ವಿರೋಧಿ ಬಜೆಟ್‌ನ್ನು ವಿರೋಧಿಸಿ ನಡೆದ

'ರಸ್ತೆ ತಡೆ ಚಳುವಳಿ' ರಾಜ್ಯದಲ್ಲಿ ಬಹುತೇಕ ಯಶಸ್ವಿ-ಸಂಯುಕ್ತ ಹೋರಾಟ-ಕರ್ನಾಟಕ

ಎರಡೂವರೆ ತಿಂಗಳಿನಿಂದ ಶಾಂತಯುತ ಹೋರಾಟ ನಡೆಸುತ್ತಿರುವ ದಿಲ್ಲಿಯ ಹೋರಾಟ ನಿರತ ರೈತರ ಮೇಲಿನ ದೌರ್ಜನ್ಯಗಳನ್ನು ಕೂಡಲೇ ನಿಲ್ಲಿಸಬೇಕು, ಕೃಷಿ ಸಂಬಂಧಿತ ಮೂರು ಕಾಯ್ದೆಗಳು, ವಿದ್ಯುತ್ ಮಸೂದೆಯನ್ನು ವಾಪಸ್ಸು ಪಡೆದು, ಡಾ॥ ಎಂ.ಎಸ್. ಸ್ವಾಮಿನಾಥನ್ ವರದಿಯನ್ವಯ ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ಖಾತರಿ ಮಾಡುವ ಕಾನೂನನ್ನು ರೂಪಿಸಬೇಕೆಂದು ಒತ್ತಾಯಿಸಿ ಹಾಗು ರೈತ ವಿರೋಧಿ, ಕಾರ್ಪೋರೇಟ್ ಕಂಪನಿಗಳ ಪರವಾದ ಕೇಂದ್ರ ಸರ್ಕಾರದ ಬಜೆಟ್‌ನ್ನು ವಿರೋಧಿಸಿ ಫೆಬ್ರವರಿ 6, 2021 ರಂದು ನೀಡಲಾಗಿದ್ದ 'ರಾಷ್ಟ್ರೀಯ, ರಾಜ್ಯ ಹೆದ್ದಾರಿಗಳ ಬಂಧ್'ಗೆ ರಾಜ್ಯದ ಬಹುತೇಕ ಕಡೆಗಳಲ್ಲಿ ಅತ್ಯಂತ ಯಶಸ್ವಿ ಚಳುವಳಿ ನಡೆದಿದೆ.

ರಾಷ್ಟ್ರ ಮಟ್ಟದ ಕರೆಗೆ ಸ್ಪಂದಿಸಿ ಚಳವಳಿಯನ್ನು ಯಶಸ್ವಿ ಮಾಡಿದ ರಾಜ್ಯದ ರೈತರು, ದಲಿತರು, ಕಾರ್ಮಿಕರು, ವಿದ್ಯಾರ್ಥಿ, ಯುವಜನ, ಮಹಿಳಾ ಸಮುದಾಯವನ್ನು ಸಂಯುಕ್ತ ಹೋರಾಟ-ಕರ್ನಾಟಕ ಅಭಿನಂದಿಸಿದೆ.

ಬೆಂಗಳೂರು-ಹೈದ್ರಾಬಾದ್ ರಾಷ್ಟ್ರೀಯ ಹೆದ್ದಾರಿಯಲ್ಲಿ ಚಿಕ್ಕಬಳ್ಳಾಪುರ, ಸಾದರಹಳ್ಳಿ ಗೇಟ್, ಚೆನ್ನೈ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಕೋಲಾರ, ಬೆಂಗಳೂರು-ಮೈಸೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ರಾಮನಗರ, ಮಂಡ್ಯ, ಮೈಸೂರು, ಬೀದರ್-ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಶಾಹಪುರ, ಕಲಬುರ್ಗಿ ಸೇರಿದಂತೆ ತುಮಕೂರು, ಕುಣಿಗಲ್, ಹಾಸನ, ಚಿತ್ರದುರ್ಗ, ದಾವಣಗೆರೆ, ರಾಯಚೂರು, ಕೊಪ್ಪಳ, ಬೆಳಗಾಂ, ಸಾಗರ, ಭದ್ರವತಿ, ಉತ್ತರ ಕನ್ನಡದ ಅಂಕೋಲ ಹೀಗೆ ಸುಮಾರು 160-170 ಕೇಂದ್ರಗಳಲ್ಲಿ ಹತ್ತಾರು ಸಾವಿರ ರೈತರು, ರಸ್ತೆ ತಡೆ ಚಳುವಳಿಯನ್ನು ಯಶಸ್ವಿ ಮಾಡಿದ್ದಾರೆ. ಕೆಲವು ಕಡೆ ನೂರಾರು ರೈತರು ಈ ರಸ್ತೆಗಳಲ್ಲಿಯೇ ಅಡುಗೆ ಮಾಡಿ ತಮ್ಮ ಹೋರಾಟವನ್ನು ನಡೆಸಿದ್ದಾರೆ.

ಇದೇ ರೀತಿಯಲ್ಲಿ ದೇಶದ ಬಹುತೇಕ ರಾಜ್ಯಗಳಲ್ಲಿ ಈ ರಾಷ್ಟ್ರ ಮಟ್ಟದ ಹೋರಾಟಕ್ಕೆ ಅಭೂತ ಪೂರ್ವ ಬೆಂಬಲ ವ್ಯಕ್ತವಾಗಿದೆಯೆಂಬ ವರದಿಗಳು ಬರುತ್ತಿವೆ.

ಕೇಂದ್ರ ಸರ್ಕಾರ, ರೈತರ ಈ ಹೋರಾಟವನ್ನು ಗಂಭೀರವಾಗಿ ಪರಿಗಣಿಸಿ, ಕೂಡಲೇ ದಿಲ್ಲಿಯಲ್ಲಿ ಹೋರಾಟ ನಿರತ ರೈತರ ಮೇಲೆ ನಡೆಸುತ್ತಿರುವ ದೌರ್ಜನ್ಯಗಳನ್ನು ಕೂಡಲೇ ನಿಲ್ಲಿಸಬೇಕು, ರೈತರ ಬೇಡಿಕೆಗಳನ್ನು ಈಡೇರಿಸಬೇಕೆಂದು ಸಂಯುಕ್ತ ಹೋರಾಟ – ಕರ್ನಾಟಕ ಆಗ್ರಹಿಸಿದೆ.

ವಿದ್ಯುತ್ ಉದ್ದಿಮೆಗಳ ನಷ್ಟಕ್ಕೆ ಯಾರು ಹೊಣೆ?! ಸಿಎಜಿ ವರದಿ ಬಿಚ್ಚಿಟ್ಟ ಸತ್ಯವೇನು?!!



ವಿದ್ಯುತ್ ವಲಯದ ಉದ್ದಿಮೆಗಳ ನಷ್ಟಕ್ಕೆ ಯಾರು ಹೊಣೆ? ವರ್ಷಗಳು ಗತಿಸಿದರೂ ಅನುಷ್ಠಾನಗೊಳ್ಳದ ಯೋಜನೆಗಳು? ಸಿಎಜಿ ವರದಿ ಬಿಚ್ಚಿಟ್ಟ ಸತ್ಯವೇನು?!!

ವಿಧಾನಸಭೆಯಲ್ಲಿ ಮಂಡನೆಯಾದ ಸಿಎಜಿ ವರದಿ ಹಲವು ಆತಂಕಗಳನ್ನು ಹೊರಹಾಕಿದೆ. ಏನು ಆ ಆತಂಕಗಳು ಎನ್ನುವದನ್ನೊ ಒಂದೊಂದಾಗಿ ತಿಳಿಸಿಯುತ್ತಾ ಹೋಗೋಣ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ವ್ಯಾಪ್ತಿಯ 50 ಯೋಜನೆಗಳಿಗೆ ವಿವಿಧ ಪ್ರಾಧಿಕಾರಗಳಿಂದ ಅನುಮತಿಯನ್ನು ಪಡೆಯೋದಕ್ಕೆ ವಿಳಂಬ ಆಯ್ತು, ಇದರಿಂದಾಗಿ 1556 ದಶ ಲಕ್ಷ ಯೂನಿಟ್ ಗಳನ್ನು ನಾವು ಕಳೆದುಕೊಳ್ಳುವಂತಾಯಿತು. ಇದರ ಒಟ್ಟು ಮೌಲ್ಯ 556 ಕೋಟಿ ರೂ ಆಗಿದೆ ಎಂದು ಸಿಎಜಿ ವರದಿ ಆತಂಕವನ್ನು ವ್ಯಕ್ತಪಡಿಸಿದೆ.

ಅನುಷ್ಠಾನಗೊಳ್ಳಲು ವಿಳಂಬವಾದ ಯೋಜನೆಗಳು ಈ ರೀತಿ ಇವೆ: ಮೂಲ್ಕಿ ಉಪಕೇಂದ್ರವನ್ನು ಮೇಲ್ದರ್ಜೆಗೇರಿಸುವ ಹಾಗೂ ನಂದಿಕೂರಿನಿಂದ ಮೂಲ್ಕಿಗೆ 11 ಕೆ.ವಿ ಮಾರ್ಗವು, 2008 ರ ಜನವರಿಯಲ್ಲಿ ಆರಂಭವಾಗಿ, ಆಗಸ್ಟ್‌ನಲ್ಲಿ ಪೂರ್ಣಗೊಳಿಸಬೇಕಿತ್ತು. ಈ ವಿಳಂಬಕ್ಕೆ ಕಾರಣ ಗುತ್ತಿಗೆದಾರರು ಎಂಬುದು ತನಿಖೆಯಿಂದ ಸಾಬೀತಾದರೂ ಯಾವುದೆ ಕ್ರಮವನ್ನು ಜರುಗಸಿಲ್ಲ. ಇದರಿಂದಾಗಿ 11 ವರ್ಷ ಕಳೆದರೂ ಈ ಯೋಜನೆ ಪೂರ್ಣವಾಗಿಲ್ಲ. ಈ ಯೋಜನೆಗೆ 13.40 ಕೋಟಿ ರೂ ಯನ್ನು ಹೆಚ್ಚುವರಿಯಾಗಿ ವೆಚ್ಚ ಮಾಡಲಾಗಿದೆ.

ಬೆಳಗಾವಿಯಿಂದ ಘಟಪ್ರಭಾ ಉಪ ಸ್ಟೇಷನ್ನಿಗೆ 110 ಕೆವಿ ಮಾರ್ಗ 2007ರ ಜೂನ್‌ನಲ್ಲಿ ಪ್ರಾರಂಭವಾಗಿ ಡಿಸೆಂಬರ್‌ನಲ್ಲಿ ಮುಗಿಯಬೇಕಿತ್ತು. ಈ ಮಾರ್ಗದ ಉದ್ದಕ್ಕೂ ಅರಣ್ಯ ಭೂಮಿ ಹೆಚ್ಚಾಗಿದ್ದರಿಂದ ಮಾರ್ಗವನ್ನು ರಚಿಸುವುದಕ್ಕಾಗಿ ಅರಣ್ಯ ಇಲಾಖೆಯಿಂದ ಅನುಮತಿ ಪಡೆಯಬೇಕಾಗಿತ್ತು. ಅನುಮತಿಯನ್ನು ಪಡೆಯುವದಕ್ಕೆ ಆರು ವರ್ಷಗಳವರೆಗೆ ಕಾಯಬೇಕಾಯಿತು. ಈ ಕಾರಣದಿಂದಾಗಿ ಯೋಜನೆಯ ಅನಿಷ್ಠಾನಕ್ಕೆ 10 ವರ್ಷ ಮೂರು ತಿಂಗಳು ಕಾಲ ವಿಳಂಬವಾಯಿತು.

ಬೆಂಗಳೂರಿನ ದೇವರಬೀಸನಹಳ್ಳಿ ಉಪ ಕೇಂದ್ರ ಹಾಗೂ ಪ್ರಸರಣ ಮಾರ್ಗದ ಕಾಮಗಾರಿಯಲ್ಲಿ ಅನುಮತಿ ಪಡೆಯಲು ವಿಳಂಬ ಮಾಡಿದ್ದರಿಂದ ಯೋಜನೆ ಐದೂವರೆ ವರ್ಷ ತಡವಾಯಿತು. ಉಪ ಕೇಂದ್ರಕ್ಕಾಗಿ ಭರಿಸಲಾದ 131.90 ಕೋಟಿ ಮೊತ್ತವು ಐದು ವರ್ಷಗಳಿಂದ ಖರ್ಚಾಗದೆ ಹಾಗೇ ಉಳಿದಿದೆ.

ಕರ್ನಾಟಕದ ವಿದ್ಯುತ್ ವಲಯದ ಉದ್ದಿಮೆಗಳಿಗೆ ಸಂಬಂಧಿಸಿದಂತೆ ಅದರ ಕಾರ್ಯವೈಖರಿಯಲ್ಲಿ ಹಲವು ನಷ್ಟಗಳನ್ನು ಕಂಡುಕೊಂಡಿದೆ. ಸಿಇಜಿ ವರದಿ ಪ್ರಕಾರ, 11 ಉದ್ದಿಮೆಗಳ ಪೈಕೆ ಆರು ಉದ್ದಿಮೆಗಳು 2019 ಕ್ಕೆ 2,928 ಕೋಟಿ ನಷ್ಟವನ್ನು ಅನುಭವಿಸಿವೆ. ಐದು ಉದ್ದಿಮೆಗಳು ಮಾತ್ರ ಲಾಭವನ್ನು ಗಳಿಸಿವೆ. ರಾಯಚೂರು ಪವರ್ ಕಾರ್ಪೊರೇಶನ್ ಲಿಮಿಟೆಡ್ 1,251. 1 ಕೋಟಿ ರೂ ನಷ್ಟವನ್ನು ಅನುಭವಿಸಿದೆ. ಕರ್ನಾಟಕ ಪವರ್ ಕಾರ್ಪೊರೇಶನ್ ಲಿಮಿಟೆಡ್ 992.06 ಕೋಟಿ ರೂ ನಷ್ಟವನ್ನು ಅನುಭವಿಸಿದೆ. ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ಲಿಮಿಟೆಡ್ 209.35 ಕೋಟಿ ರೂ, ಮತ್ತು ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ಲಿಮಿಟೆಡ್ 472.63 ಕೋಟಿ ರೂ ನಷ್ಟವನ್ನು ಅನುಭವಿಸಿದೆ.

ಐದು ಉದ್ದಿಮೆಗಳು ಲಾಭ ಗಳಿಸಿದ್ದು, ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ಲಿಮಿಟೆಡ್ 690 ಕೋಟಿ ರೂ ಲಾಭ ಗಳಿಸಿದೆ. ಮತ್ತು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ಲಿಮಿಟೆಡ್ 212.14 ಕೋಟಿ ರೂ ಲಾಭ ಗಳಿಸಿದೆ. ಒಟ್ಟು 1086.71 ಕೋಟಿ ರೂ ಲಾಭವಾಗಿದೆ. ವಿದ್ಯುತ್ ವಲಯದ ಉದ್ದಿಮೆಗಳಲ್ಲಿನ ಹೂಡಿಕೆ 52.75% ರಷ್ಟು ಏರಿಕೆಯಾಗಿದ್ದು, 2014–15ರಲ್ಲಿ, 9,495.8 ಕೋಟಿಯಿಂದ 2018–19ರಲ್ಲಿ ರೂ. 14,504.76 ಕೋಟಿಗೆ ಏರಿದೆ.

ವಿತರಣಾ ಟ್ರಾನ್ಸ್‌ಫಾರ್ಮರ್ ಕೇಂದ್ರಗಳು ಅಂದ್ರೆ ಡಿಟಿಸಿ ಅಂತಾ ನಾವೇನು ಕರೆಯುತ್ತೇವೆ, ಅಲ್ಲಿ ಮೀಟರ್ ಅಳವಡಿಸುವದರಲ್ಲೂ ದೊಡ್ಡ ಲೋಪದೋಷಗಳಾಗಿದ್ದು, ಲೆಕ್ಕಪರಿಶೋಧನೆಯನ್ನು ನಡೆಸಲು ಎಸ್ಕಾಮ್‌ಗಳು ವಿಫಲವಾಗಿವೆ ಎಂದು ಸಿಎಜಿ ವರದಿಯಲ್ಲಿ ತಿಳಿಸಲಾಗಿದೆ.

ಬೆಸ್ಕಾಮ್ ಮತ್ತು ಹೆಸ್ಕಾಮ್ನಲ್ಲಿ 60% ಡಿಟಿಸಿಗಳಿಗೆ ಮತ್ತು 43% ಮೆಸ್ಕಾಂನಲ್ಲಿ ಮಾತ್ರ ಮೀಟರ್ ಅಳವಡಿಕೆ ಮಾಡಲಾಯಿತು. ಮಾರ್ಚ್ 2019 ರ ಹೊತ್ತಿಗೆ ಮೂರು ಎಸ್ಕಾಂಗಳು ಡಿಟಿಸಿ ಮೀಟರ್ ಗಳ ಅಳವಡಿಕೆಗೆ 449.81 ಕೋಟಿ ರೂ ವೆಚ್ಚವನ್ನು ಮಾಡಿದವು. ಸಾಲವನ್ನು ಪಡೆದ ಪರಿಣಾಮ 133.63 ಕೋಟಿ ರೂ ಬಡ್ಡಿಯನ್ನು ಪಾವತಿಸಲಾಯಿತು. ಬಾಕಿ ಇರುವ ಸಾಲದ ಮೇಲೆ ಈಗ ವರ್ಷಕ್ಕೆ 40.43 ಕೋಟಿ ರೂ ಬಡ್ಡಿಯನ್ನು ಕಟ್ಟಬೇಕಾಗಿದೆ.

ವಿದ್ಯುತ್ ಕಾಯ್ದೆ (ತಿದ್ದುಪಡಿ)–2020 ರೈತಾಪಿ ಕೃಷಿಯನ್ನು ಸರ್ವನಾಶ ಮಾಡುವ ಹುನ್ನಾರ

2014–18ರ ಅವಧಿಯಲ್ಲಿ 18 ಸಾರ್ವಜನಿಕ ಉದ್ದಿಮೆಗಳು ಕಂಪನಿಗಳ ಸಾಮಾಜಿಕ ಹೊಣೆಗಾರಿಕೆ ನಿಧಿಯಡಿ (ಸಿಎಸ್‌ಆರ್) 84.27 ಕೋಟಿ ರೂಪಾಯಿಯನ್ನು ಭರಿಸಬೇಕಿತ್ತು. ಆದರೆ, 65.3 ಕೋಟಿಯನ್ನಷ್ಟೇ ಭರಿಸಿವೆ ಎಂದು ಸಿಎಜಿ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಅದರಲ್ಲಿ 14.28 ಕೋಟಿ ಮೊತ್ತವನ್ನು ಅನರ್ಹ ಕಾರ್ಯಚಟುವಟಿಕೆಗಳ ಮೇಲೆ ಭರಿಸಲಾಗಿತ್ತು. ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಸಮಿತಿಯ ಶಿಫಾರಸು ಇಲ್ಲದೆಯೇ 14.63 ಕೋಟಿ ವ್ಯಯಿಸಲಾಗಿತ್ತು. ಇದರ ಮೇಲ್ವಿಚಾರಣಾ ವ್ಯವಸ್ಥೆ ಸಹ ಅಸಮರ್ಪಕವಾಗಿತ್ತು ಎಂದು ಸಿಎಜಿ ಆಕ್ಷೇಪಿಸಿದೆ.

ಬೆಸ್ಕಾಂ ವ್ಯಾಪ್ತಿಯಲ್ಲಿ 25.42% ಹಾಗೂ ರಾಜ್ಯದ ಇತರೆಡೆ 17.15% ವಿದ್ಯುತ್ ದರ ಏರಿಕೆಯಾಗಿದೆ. ನಮ್ಮ ರಾಜ್ಯದಲ್ಲಿ ಉತ್ಪಾದನೆಯಾಗುವ ವಿದ್ಯುತ್ ಪ್ರಮಾಣ 30,000 ಮೆಗಾವ್ಯಾಟ್, ನಮ್ಮಲ್ಲಿರುವ ಬೇಡಿಕೆ ಪ್ರಮಾಣ 8000 ದಿಂದ 10,500 ಮೆಗಾವ್ಯಾಟ್ ಇದೆ. ನಾವೇ ವಿದ್ಯುತ್ ಅನ್ನು ಮಾರುವಂತಹ ಸದೃಢ ಸ್ಥಿತಿಯಲ್ಲಿ ಇದ್ದೇವೆ, ಹೀಗಿದ್ದಾಗ ನಷ್ಟ ಆಗೋಕೆ ಹೇಗೆ ಸಾಧ್ಯ? ಸರಕಾರ ಇದಕ್ಕೆ ಉತ್ತರಿಸಬೇಕು ಎಂದು ವಿಪಕ್ಷ ನಾಯಕ ಸಿದ್ಧರಾಮಯ್ಯ ಆಗ್ರಹಿಸಿದ್ದಾರೆ.

ವಿದ್ಯುತ್ ಖಾಸಗೀಕರಣದಿಂದಾಗಿ ಉದ್ದಿಮೆಗಳಿಗೆ ದೊಡ್ಡ ಪ್ರಮಾಣದಲ್ಲಿ ಹೊಡೆತ ಬೀಳುತ್ತಿದೆ. ಯೋಜನೆಗಳು ಅನುಷ್ಠಾನಗೊಳ್ಳದಿರುವುದಕ್ಕೆ ಸರಕಾರದ ನಿರ್ಲಕ್ಷಗಳೆ ಕಾರಣವಾಗಿವೆ ಎಂದು ಬೆಸ್ಕಾಂನ ನಿವೃತ್ತ ಡಿಜೆಎಂ ಎಂ.ಜಿ. ನಾರಾಯಣಸ್ವಾಮಿ ಆರೋಪಿಸಿದ್ದಾರೆ.

ವಿದ್ಯುತ್ (ತಿದ್ದುಪಡಿ) ಮಸೂದೆ 2020 ಅನ್ನು ರದ್ದುಗೊಳಿಸುವಂತೆ ಒತ್ತಾಯಿಸಿ ಕೇಂದ್ರ ಜಂಟಿ ಕಾರ್ಮಿಕ ಸಂಘಟನೆಗಳು ದೆಹಲಿಯಲ್ಲಿ ಪ್ರತಿಭಟನೆಯನ್ನು ನಡೆಸಿದವು.

ಸಾರ್ವಜನಿಕ ವಲಯದಿಂದ ಖಾಸಗಿ ಕಂಪನಿಗೆ ವಿದ್ಯುತ್ ಖಾಸಗೀಕರಣದ ಪ್ರಕ್ರಿಯೆಯನ್ನು ಹಿಂತೆಗೆದುಕೊಳ್ಳಬೇಕು. ವಿದ್ಯುತ್ ಕ್ಷೇತ್ರದಲ್ಲಿ ಅಸ್ತಿತ್ವದಲ್ಲಿರುವ ಎಲ್ಲಾ ಖಾಸಗಿ ಪರವಾನಿಗೆಗಳನ್ನು ಮತ್ತು ಫ್ರ್ಯಾಂಚೈಸ್‌ಗಳನ್ನು ರದ್ದುಗೊಳಿಸಿಬೇಕು. ಕೇರಳ ರಾಜ್ಯ ವಿದ್ಯುತ್ ಮಂಡಳಿ ಲಿಮಿಟೆಡ್ ಮತ್ತು ಹಿಮಾಚಲ ಪ್ರದೇಶ ರಾಜ್ಯ ವಿದ್ಯುತ್ ಮಂಡಳಿ ಲಿಮಿಟೆಡ್‌ನಲ್ಲಿ ಪ್ರಚಲಿತದಲ್ಲಿರುವ ಯಶಸ್ವಿ ವ್ಯವಸ್ಥೆಯಂತಹ ಯೋಜನೆಗಳನ್ನು ಜಾರಿಗೊಳಿಸುವಂತೆ ಎಲ್ಲಾ ರಾಜ್ಯಗಳ ಉತ್ಪಾದನೆ, ಪ್ರಸರಣ ಮತ್ತು ವಿದ್ಯುತ್ ವಿತರಣೆಯ ಕಾರ್ಯಗಳನ್ನು ಮರುಸಂಘಟಿಸಿಬೇಕು ವಿದ್ಯುತ್ ತಿದ್ದುಪಡಿ ಕಾಯ್ದೆಯು ರೈತರಿಗೆ ಅಪಾಯಕಾರಿಯಾಗಿದ್ದು ಆ ಕಾಯ್ದೆಯನ್ನು ಕೈ ಬಿಡಬೇಕು ಎಂದು ಒತ್ತಾಯವನ್ನು ಮಾಡಿದವು.

ಜನರಿಗೆ 'ಕರೆಂಟ್ ಶಾಕ್' ನೀಡಿದ ಸರಕಾರ

ಸಿಎಜಿ ಹೊರ ಹಾಕಿರುವ ಆತಂಕಕಾರಿ ವಿಚಾರಗಳನ್ನು ಸರಕಾರ ಗಂಭೀರವಾಗಿ ಪರಿಗಣಿಸಬೇಕಿದೆ. ವಿದ್ಯುತ್ ಉಳಿಸುವ ಮತ್ತು ಬೆಳಸುವುದಕ್ಕಾಗಿ ಸಾಕಷ್ಟು ಯೋಜನೆಗಳನ್ನು ಬಲಪಡಿಸಬೇಕಿದೆ. ವಿದ್ಯುತ್ ಜನ ಸ್ನೇಹಿಯಾಗಿ, ರೈತ ಸ್ನೇಹಿಯಾಗಿ ಕಾರ್ಯನಿರ್ವಹಿಸಲು ಸರಕಾರ ಖಾಸಗೀಕರಣ ನೀತಿಗಳನ್ನು ಕೈ ಬಿಡಬೇಕಿದೆ.

ವಿದ್ಯುತ್ ವೇದನೆ

ಕವನ

ವಿದ್ಯುತ್ ಮಸೂದೆ ಬೇಡ !
ತಿದ್ದುಪಡಿ ಮಸೂದೆ ಬೇಡವೇ ಬೇಡಾ !!

ಭಾಗ್ಯ ಜ್ಯೋತಿಯ ಕಸಿದು ಕೊಳ್ಳುವ ವಿದ್ಯುತ್ ಮಸೂದೆ ಬೇಡ !
ಬಡವರ ಮನೆಯನ್ನು ಕತ್ತಲು ಮಾಡುವ ತಿದ್ದುಪಡಿ ಮಸೂದೆ ಬೇಡವೇ ಬೇಡಾ !!

ಪಂಪ್ ಸೆಟ್ಟಗಳಿಗೆ ಮೀಟರು ಜಡಿಯುವ ವಿದ್ಯುತ್ ಮಸೂದೆ ಬೇಡ !
ರೈತನ ಬದುಕನು ನಾಶ ಮಾಡುವ ತಿದ್ದುಪಡಿ ಮಸೂದೆ ಬೇಡವೇ ಬೇಡಾ !!

ಕೈಗಾರಿಕೆಗಳ ಕೊಂದು ಹಾಕುವ
ವಿದ್ಯುತ್ ಮಸೂದೆ ಬೇಡ !
ಸಹಾಯಧನವನ್ನು ವಾಪಾಸು ಪಡೆಯುವ ತಿದ್ದುಪಡಿ ಮಸೂದೆ ಬೇಡವೇ ಬೇಡಾ !!

ಕಾರ್ಮಿಕರ ಉದ್ಯೋಗ ಕಳೆಯುವ ವಿದ್ಯುತ್ ಮಸೂದೆ ಬೇಡಾ !
ನಿರುದ್ಯೋಗವನು ವ್ಯಾಪಕಗೊಳಿಸುವ ತಿದ್ದುಪಡಿ ಮಸೂದೆ ಬೇಡವೇ ಬೇಡಾ !!

ವಿದ್ಯುತ್ ಬೆಲೆಗಳ ಏರಿಕೆ ಮಾಡುವ
ವಿದ್ಯುತ್ ಮಸೂದೆ ಬೇಡ!
ಖಾಸಗಿ ಕಂಪನಿ ಲೂಟಿಗೆ ತೆರೆಯುವ ತಿದ್ದುಪಡಿ ಮಸೂದೆ ಬೇಡವೇ ಬೇಡಾ !!

ಉಚಿತ ವಿದ್ಯುತ್ ಉಳಿಸಿ ಕೊಳ್ಳಲು
ಲೂಟಿಕೋರ ವಿದ್ಯುತ್ ಮಸೂದೆ ಬೇಡ !
ಸಾರ್ವಜನಿಕ ರಂಗವನು ಬೆಳೆಸಲು
ತಿದ್ದುಪಡಿ ಮಸೂದೆ ಬೇಡವೇ ಬೇಡಾ !!

ಸ್ವಾವಲಂಬಿ ಬದುಕನು ಉಳಿಸಲು
ವಿದ್ಯುತ್ ಮಸೂದೆ ಬೇಡ !
ಸಾರ್ವಭೌಮತೆಯ ನಾಡನು ಬೆಳೆಸಲು
ತಿದ್ದುಪಡಿ ಮಸೂದೆ ಬೇಡವೇ ಬೇಡಾ !!

–ಬಸು, ಬಳ್ಳಾರಿ.



ಅತಿಥಿ ಅಂಕಣ



ಡಾ. ಸಬಿತಾ ಬನ್ನಾಡಿ

ಹೆಣ್ಣು ರಾಜಕೀಯ ಕ್ಷೇತ್ರವಿರಲಿ, ಯಾವುದೇ ಕ್ಷೇತ್ರದಲ್ಲಿರುವುದೂ ಸಹಜ ಎಂಬ ಮನಸ್ಥಿತಿಗೆ ಪಲ್ಲಟವಾಗಬೇಕಿರುವುದು ಎಷ್ಟು ಮುಖ್ಯವೋ, ಅವಳು ಗಂಡಿನ ಜಾಗದಲ್ಲಿ ಕೂತುಕೊಳ್ಳುವುದಕ್ಕಿಂತಲೂ, ಅವಳದೇ ಆದ ಅಪೂರ್ವ ಲೋಕದೃಷ್ಟಿಯನ್ನು ಅವಳು ಹೊಂದಿದ್ದೂ ಅದನ್ನು ಒಟ್ಟು ಸಮಾಜದ ಲೋಕದೃಷ್ಟಿಯಾಗಿಸುವುದು ಅಷ್ಟೇ ಮುಖ್ಯ. ನಾವು ತೋರುವ ಹೊಸದಾರಿಯಲ್ಲಿ ನಮ್ಮ ನಾಯಕತ್ವ ಅತ್ಯಂತ ಸಹಜ ಸಂಗತಿ ಎಂಬ ಮನಸ್ಥಿತಿಯ ಪಲ್ಲಟ ಬೇಕಾಗಿದೆ. ಈ ಹೊಸದಾರಿ ಎಂದರೆ, ಮೊತ್ತ ಮೊದಲಿಗೆ ಭೂಮಿ ವಿಷರಹಿತವಾಗುವುದು, ರಾಜಕೀಯ ವಿಷರಹಿತವಾಗುವುದು, ಇವೆರಡರ ನಡುವೆ ಬದುಕುವ ಸಕಲ ಜೀವಿಗಳ ಸಾಮಾಜಿಕ ಬದುಕು ವಿಷರಹಿತವಾಗುವುದು. ಇದು ಹೆಣ್ಣು ರೂಪಿಸಿಕೊಂಡಿದ್ದ ದಾರಿ, ರೂಪಿಸಿಕೊಟ್ಟಿದ್ದ ದಾರಿ. ಮತ್ತು ಆ ದಾರಿಯನ್ನು ಮರು ಅನ್ವೇಷಣೆ ಮಾಡಿಕೊಂಡು ಸಾಮಾಜಿಕ, ರಾಜಕೀಯ ಪಲ್ಲಟ ಸಾಧಿಸುವುದು ನಮ್ಮ ಗುರಿ.

ಮಹಿಳಾ ಲೋಕದೃಷ್ಟಿಯನ್ನು ಒಟ್ಟು ಸಮಾಜದ ಲೋಕದೃಷ್ಟಿಯಾಗಿಸಬೇಕು

ಹಿಳಾ ಬದುಕಿನ ಪಲ್ಲಟಗಳು ಮಹಿಳೆಯ ನೆಲೆಯಿಂದಲೇ ಆಗುವುದು ಚರಿತ್ರೆಯಲ್ಲಿ ಬಹಳ ಅಪರೂಪ. ಅದು ಈಗಾಗಲೇ ಯಾರದೋ ಹಿಡಿತದಲ್ಲಿರುವ ಒಟ್ಟು ಜಾಗತಿಕ ವ್ಯವಸ್ಥೆಯ ಬದಲಾವಣೆಯ ಅಪ್ಪಳಿಸುವಿಕೆಯ ಅಲೆಯೊಂದಿಗೆ ತೇಲಿ ಇನ್ನೆಲ್ಲೋ ಬಂದು ನಿಲ್ಲುವುದೇ ಹೆಚ್ಚು. ಒಂದು ಉದಾಹರಣೆಯೊಂದಿಗೆ ಇದನ್ನು ವಿವರಿಸಿಕೊಳ್ಳಬಹುದು. ರಾಜಪ್ರಭುತ್ವವಿದ್ದಾಗ ಹೆಣ್ಣು ಹೆಚ್ಚೆಂದರೆ ರಾಣಿಯಾಗಿ ಅವನ ಅಂತಃಪುರದಲ್ಲಿ ಇರುವುದು ಅವಳಿಗೆ ಕೊಡಮಾಡಿದ ಅತಿ ಉಚ್ಚಸ್ಥಾನ. ಆದರೆ ಎಂದೂ ಅವಳಿಗೆ ರಾಣಿಯಾಗಿ ಸ್ವತಂತ್ರ ಆಡಳಿತ ಮಾಡುವ ಹಕ್ಕು ಇದ್ದಿರಲಿಲ್ಲ. (ಆಕಸ್ಮಿಕವಾಗಿ ರಾಜ ಸತ್ತು, ಗಂಡು ಮಕ್ಕಳಿಲ್ಲದಾಗ ಅವಳು ರಾಣಿಯಾಗಿ ವ್ಯವಹರಿಸಿದ್ದಿದೆ.) ಪ್ರಜಾಪ್ರಭುತ್ವ ಬಂದ ಮೇಲೂ ಜಗತ್ತಿನೆಲ್ಲೆಡೆ ಅರಂಭದಲ್ಲಿ ಹೆಣ್ಣಿಗೆ ಯಾವ ಪಾತ್ರವೂ ಇರಲಿಲ್ಲ. ಮಹಿಳಾ ಚಳುವಳಿ ಅಮೆರಿಕದಂತಹ ಮುಂದುವರಿದ ದೇಶಗಳಲ್ಲೂ ಮತದಾನದ ಹಕ್ಕಿಗಾಗಿ ಹೋರಾಡಬೇಕಾಯಿತು. ಗಮನಿಸಿ, ಚುನಾವಣೆಗೆ ನಿಲ್ಲುವ ಗಂಡಸರನ್ನು ಆಯ್ಕೆ ಮಾಡುವುದಕ್ಕಾಗಿ ಹಾಕುವ ಓಟಿನ ಹಕ್ಕನ್ನು ಕೇಳುವುದೂ ಆಗ ಕ್ರಾಂತಿಕಾರಕ ಸಂಗತಿ. ಇಲ್ಲೂ ಆಕೆ ಅದಾಗಲೇ ಇರುವ ವ್ಯವಸ್ಥೆಯೊಂದು ಹಲವು ಚಾರಿತ್ರಿಕ ಕಾರಣಗಳಿಗಾಗಿ ಬದಲಾದಾಗ, ಆ ಬದಲಾವಣೆಯ ಅಂಗವಾಗಿ ತನ್ನ ಪಾತ್ರವನ್ನು ತಾನೇ ಗುರುತಿಸಿಕೊಂಡು, ತನಗೆ ಈಗಾಗಲೇ ಇರುವ ಪಾತ್ರದ ಸ್ವರೂಪದಲ್ಲಿ ಬದಲಾವಣೆಯನ್ನು ಮಾಡಿಕೊಳ್ಳುತ್ತಾಳೆಯೇ ಹೊರತು ವ್ಯವಸ್ಥೆಯ ಬದಲಾವಣೆಯ ಸಂದರ್ಭದಲ್ಲಿ ಆ ಬದಲಾವಣೆಯ ಸ್ವರೂಪ ಹೇಗಿರಬೇಕು ಎಂದು ಹೆಣ್ಣನ್ನು ಕೇಳಿದ್ದೇ ಇಲ್ಲ.

ಚರಿತ್ರೆಯಲ್ಲಿ ಆಗಿ ಹೋದ ಯಾವ್ಯಾವ ಆಂದೋಲನದಲ್ಲಿ ಹೆಣ್ಣೂ ಸಮಾನವಾಗಿ ಭಾಗಿಯಾಗಲು ಸಾಧ್ಯವಾಗಿದೆಯೋ, ಅಲ್ಲೆಲ್ಲಾ ಅದು ಹೆಚ್ಚು ಮಾನವೀಯ ನೆಲೆಯ ಒಳಗೊಳ್ಳುವಿಕೆಯ ಮತ್ತು ಅಹಿಂಸೆಯಿಂದ ಮುಂಚಲನೆ ಪಡೆದುಕೊಳ್ಳಲು ಪೂರಕವಾದ ಚಲನೆಯಾಗಿ ಮುಂದಡಿ ಇಟ್ಟಿದ್ದನ್ನು ನೋಡಬಹುದು. ಅದು ಭಕ್ತಿ ಆಂದೋಲನವಿರಲಿ, ಸ್ವಾತಂತ್ರ್ಯ ಚಳುವಳಿಯಲ್ಲಿ ಗಾಂಧಿ ನಾಯಕತ್ವದ ಸಂದರ್ಭದಲ್ಲಿ ಹೆಣ್ಣುಮಕ್ಕಳ ಭಾಗವಹಿಸುವಿಕೆ ಇರಬಹುದು, ದಲಿತರನ್ನು ಒಗ್ಗೂಡಿಸಿ ಹೊಸ ಎಚ್ಚರ ಮೂಡಿಸುವ ಅಂಬೇಡ್ಕರ್ ನಾಯಕತ್ವದ ಸಂದರ್ಭದ ಹೆಣ್ಣು ಮಕ್ಕಳ ಸಾವಿರ ಸಾವಿರ ಸಂಖ್ಯೆಯ ಭಾಗವಹಿಸುವಿಕೆ ಇರಬಹುದು. ಈ ಭಾಗವಹಿಸುವಿಕೆಯೂ ಕೂಡ ಅಂಬೇಡ್ಕರ್ ಹಿಂದೂ ಕೋಡ್ ಬಿಲ್ ನಂತಹ ಸೂಕ್ಷ್ಮ ಮಹಿಳಾಪರ ಕಾಯ್ದೆ ರೂಪಿಸುವಲ್ಲಿ ಪೂರಕವಾಗಿ ಕೆಲಸ ಮಾಡಿರುತ್ತದೆ. ಅಂದರೆ ಮಹಿಳಾ ಬದುಕಿನ ಪಲ್ಲಟ ಎಂಬುದು ಹೆಣ್ಣು ಪೂರ್ಣ ಪ್ರಮಾಣದಲ್ಲಿ ಭಾಗಿಯಾದಾಗ ಆಗುವುದುಕ್ಕೂ, ಮಹಿಳೆಯನ್ನು ಮುಸುಕಿನಲ್ಲಿಟ್ಟು ಅವಳ ಪರವಾಗಿ ತಾನೇ, ಅವಳಿಗೆ ಬೇಕಾದ ಸವಲತ್ತುಗಳನ್ನು ಒದಗಿಸುತ್ತೇನೆ ಎಂಬ ಪುರುಷಪ್ರಧಾನ ಅಹಂಕಾರವು ತಂದು ಸುರಿಯುವ ಪಲ್ಲಟಕ್ಕೂ ಮೂಲಭೂತ ವ್ಯತ್ಯಾಸವಿದೆ. ಎರಡರಲ್ಲೂ ಪರಿಣಾಮ ಎದುರಿಸುವಳು ಹೆಣ್ಣೇ ಆದರೂ ಎರಡನೆಯದು ಹಿಂಸೆಯ ಹೊಸ ವಿಧಾನಗಳಾಗಿ ಮಾತ್ರ ಅವಳ ಬದುಕಿನಲ್ಲಿ ಬದಲಾವಣೆ ತರುತ್ತವೆ. ಮತ್ತಿದು ಅವಳ ಬದುಕಿನಲ್ಲಿ ಇತ್ಯಾತ್ಮಕವಾದ ನೆಲೆಯಿಂದ ಅಮೂಲಾಗ್ರ ಪಲ್ಲಟಗಳನ್ನು ಮಾಡಿರುವುದಿಲ್ಲ.

ಒಂದು ಅಂಶವನ್ನು ಗಮನಿಸಬೇಕು. ಹೆಣ್ಣಿನ ಬದುಕಿನ ನಿರಂತರ ಏಕತಾನತೆಯೆಂಬುದು ಎಂದಿಗೂ ಬದಲಾಗಿಲ್ಲ. ಅದು ಪ್ರತಿನಿತ್ಯವೂ ಬಡಿಯುವ ರೊಟ್ಟಿಯೇ ಆಗಿರಲಿ, ಕತ್ತು ಬಗ್ಗಿಸಿ ಹೊಲಿವ ಗಾರ್ಮೆಂಟ್ ಕೆಲಸವೇ ಆಗಿರಲಿ ಈ ಏಕತಾನತೆ ಎಂಬುದೇ ಅವಳ ಚೈತನ್ಯವನ್ನು ಕುಗ್ಗಿಸುವ ಅತಿ ಸುಲಭದ, ಕಣ್ಣಿಗೆ ಕಾಣಿಸದ ಜೀವಾವಧಿ ಶಿಕ್ಷೆಯಂತದು. ಇದರ ನಡುವೆ ಆಕೆ ಚಿಂತನೆ ಮಾಡುವಂತೆ ಮಾಡುವ, ಮನಸ್ಸು ಅರಳಿಸಿಕೊಳ್ಳುವ ಅವಕಾಶವೇ ಬಹಳ ಕಡಿಮೆ ಇದ್ದಾಗಲೂ ಅವಳು ಆ ಪ್ರಯತ್ನಗಳನ್ನು ಮಾಡುತ್ತಲೇ ಬಂದಿದ್ದಾಳೆ. ಮತ್ತು ಇನ್ನೊಂದೆಡೆಯಿಂದ ಅವಳ ದಿಕ್ಕು ತಪ್ಪಿಸುವ, ಬಗ್ಗು ಬಡಿಯುವ ಪ್ರಯತ್ನವೂ ನಡೆಯುತ್ತಲೇ ಬಂದಿದೆ. ಇದುವರೆಗೂ ಅವಳ ಸಾಮಾಜಿಕ, ರಾಜಕೀಯ ಪಾಲ್ಗೊಳ್ಳುವಿಕೆ ಅದೃಷ್ಟ, ಅಭಯ ಮತ್ತು ಒತ್ತಾಯದ ಸ್ಥಿತಿಯಲ್ಲೇ ಇದೆ. ಅದು ಆ ಹಂತದಿಂದ ಸಹಜ, ಸಾಧ್ಯ ಮತ್ತು ಇಚ್ಛೆಯನುಸಾರ ಎಂದಾಗಿ ಬದಲಾಗಬೇಕಿದೆ.



ಹಗಲೂ ರಾತ್ರಿ – ಅರ್ಪಣ ಕೌರ್ ಅವರ ಕಲಾಕೃತಿ

ಮಹಿಳೆಯರ ಸಾಮಾಜಿಕ ಮತ್ತು ರಾಜಕೀಯ ಪಲ್ಲಟಗಳನ್ನು ಅವಲೋಕಿಸುವಾಗ ಗಮನಿಸಬೇಕಾದ ಸಂಗತಿಯೆಂದರೆ, ಇವೆರಡೂ ಪರಸ್ಪರ ಬೇರೆಯಲ್ಲ ಎಂಬುದು. ರಾಜಕೀಯ ನೋಟಕ್ರಮವೊಂದು ಸಾಮಾಜಿಕತೆಯನ್ನು ರೂಪಿಸುತ್ತದೆ. ಸಾಮಾಜಿಕತೆಯ ನೆಲೆಯೇ ಹೆಣ್ಣಿನ ರಾಜಕೀಯ ಪಾಲ್ಗೊಳ್ಳುವಿಕೆಯನ್ನು ನಿರ್ಧರಿಸುತ್ತದೆ. ಸದ್ಯದ



ಬಿ. ಪ್ರಭಾ ಅವರ ಕಲಾಕೃತಿ

ಸ್ಥಿತಿಯಲ್ಲಿ ಹೆಣ್ಣಿನ ರಾಜಕೀಯ ಪಾಲ್ಗೊಳ್ಳುವಿಕೆಯ ನಿರ್ವಾತ ಅಥವಾ ನಿರಾಶಾದಾಯಕ ಸ್ಥಿತಿಗೂ ಇನ್ನೂ ಖಚಿತ ರೂಪ ಪಡೆದು ಅನುಭವದ ಭಾಗವಾಗದ ಅವಳ ಸಾಮಾಜಿಕತೆಗೂ ಪರಸ್ಪರ ಸಂಬಂಧ ಇದೆ. ಅನುಭವದ ಭಾಗವಾಗದ ಸಾಮಾಜಿಕತೆ ಎಂದರೆ, ನಮ್ಮ ಪತ್ಯಗಳಲ್ಲಿ, ಟಿ.ವಿ ಕಾರ್ಯಕ್ರಮಗಳಲ್ಲಿ, ಸಿನಿಮಾಗಳಲ್ಲಿ ರೂಪಿತವಾಗಿರುವ ಸಾಮಾಜಿಕತೆಯು ಒಂದು ತೆಳು, ಟೊಳ್ಳು ಪದರಗಳಲ್ಲಿದ್ದು ಅವಳ ವಾಸ್ತವ ಚಿತ್ರಣ ಸರಿಯಾದ ರೀತಿಯಲ್ಲಿ ಪ್ರತಿನಿಧೀಕರಣಗೊಂಡಿಲ್ಲ ಅನ್ನುವುದು. ಎಷ್ಟೋ ಬಾರಿ ನಮ್ಮ ಕಿವಿಗಳಿಗೆ ಬೀಳುವ ಮಾತೆಂದರೆ, 'ಈಗೇನು, ಎಲ್ಲಾ ಅವಕಾಶಗಳೂ ಅವಳಿಗೆ ಸಮಾನವಾಗಿ ಸಿಗುತ್ತಿದೆ. ಅವಳೇ ಸರಿಯಾಗಿ ಉಪಯೋಗಿಸಿಕೊಳ್ಳಬೇಕು' ಎನ್ನುವುದು. ಮೇಲ್ನೋಟಕ್ಕೆ ಇದು ಹೌದು ಅಂತ ಅನ್ನಿಸಿಬಿಡಬಹುದು. ಆದರೆ ಎಚ್ಚೆತ್ತ ನೋಟದಲ್ಲಿ ನೋಡಿದಾಗ ಪರಿಸ್ಥಿತಿಯ ಇನ್ನೊಂದು ಮಗ್ಗುಲು ಕಾಣಿಸಿಕೊಳ್ಳುತ್ತದೆ. ಅದು ಹಲವು ಮರೆ ಮೋಸಗಳಲ್ಲಿ ಅಡಗಿಕೊಂಡಿರುವುದು ತೆರೆದುಕೊಳ್ಳುತ್ತದೆ. ಅವಳಿಗೆ ಸಿಕ್ಕುತ್ತಿರುವ ಹಲವು ಅವಕಾಶಗಳಲ್ಲಿ ಅವಳು ಬಿಡುವಿಲ್ಲದೆ ದುಡಿಯುತ್ತಿರುವುದೇನೋ ನಿಜ. ಆದರೆ ಅವಳ ದುಡಿಮೆಯನ್ನು ವ್ಯಯಿಸುವ, ಯೋಜಿಸುವ ಆಯ್ಕೆ ಅವಳಿಗಿರುವುದಿಲ್ಲ ಅಷ್ಟೆ.

ಕೆಲವು ಕಣ್ಣಿಗೆ ಕಾಣಿಸುವ ಸಂಗತಿಗಳನ್ನು ಮೊದಲು ಗಮನಿಸೋಣ. ಈಚಿನ ಮೂವತ್ತು ನಲವತ್ತು ವರ್ಷಗಳಲ್ಲಿ ಕೆಲವು ಅವಕಾಶಗಳು, ಸ್ಥಿತಿಗಳು ಖಂಡಿತಾ ಬದಲಾಗಿವೆ. ತಳವರ್ಗ, ಜಾತಿಯ ಹೆಣ್ಣುಮಕ್ಕಳ 'ದುಡಿಮೆಯ ಘನತೆ' (ಡಿಗ್ನಿಟಿ ಆಫ್ ಲೇಬರ್)ಯಲ್ಲಿ ಬದಲಾವಣೆ ಇದೆ. ಹಿಂದೆ ಇವರು ಮೇಲ್ಜಾತಿ ಜನರ ಒಕ್ಕಲುಗಳೋ, ಕೂಲಿಗಳೋ ಆಗಿದ್ದಾಗ 'ಯಜಮಾನ'ನ ಕಣ್ಣಿನ ಮೊನೆಗೆ ಸಿಕ್ಕದೇ ಮಾನ ಉಳಿಸಿಕೊಳ್ಳೋದೇ ಕಷ್ಟ ಇತ್ತು. ಈಗ ಕೆಲಸದ ಸ್ಥಳಗಳಲ್ಲಿ ಕೆಲವು ಆಯ್ಕೆ ಸಿಗುವುದರಿಂದ ಸ್ವಲ್ಪಮಟ್ಟಿಗೆ ಬಚಾವಾಗಿದ್ದಾರೆ. ಹಾಗೆಯೇ ಮೇಲ್ಜಾತಿ ಹೆಣ್ಣುಮಕ್ಕಳೂ ಒಂದು ಹಂತದ ನಿಟ್ಟುಸಿರು ಬಿಡುತ್ತಾರೆ. ಹಿರಿಯ ಹೆಂಗಸರು ಕಿರಿಯರಿಗೆ, 'ನಿಮ್ಮ ಕಾಲವೇ ಚೆನ್ನಾಗಿದೆ. ನೀವೀಗ ಎಜುಕೇಶನ್ ಪಡೆದಿದ್ದೀರಿ, ದುಡಿತಿದೀರಿ, ಎಲ್ಲದಕ್ಕೂ ಗಂಡನ ಕೈ ಕಾಯ ಬೇಕಿಲ್ಲ' ಎಂದು ನಿಟ್ಟುಸಿರು ಬಿಡುತ್ತಾರೆ. ಹಾಗೆಯೇ ನಮ್ಮ ಟ್ರಾನ್ಸ್‌ಜೆಂಡರ್ ಸಹೋದರಿಯರಿಯರಿಗೆ ಸಣ್ಣದೊಂದು ಸ್ವೀಕಾರಭಾವ ಸಮಾಜದಲ್ಲಿ ಕಾಣಿಸುತ್ತಿದೆ. ಹಲವು ಸಾರ್ವಜನಿಕ ಕ್ಷೇತ್ರದಲ್ಲಿ ಹೆಂಗಸರ ಸ್ಥಿತಿ ಸುಧಾರಿಸಿದೆ. ಹಿಂದಿನ ಸಿನಿಮಾ ನಟಿಯರು ಮದುವೆ ಮರೆಮಾಚಬೇಕಿತ್ತು. ಪ್ರಸಿದ್ಧಿಯ ಉತ್ತುಂಗಕ್ಕೆ ಏರಿದ ಮೇಲೂ ಕೈಯಲ್ಲಿ ಕಾಸಿಲ್ಲದೆ, ವೈಯಕ್ತಿಕ ಬದುಕು ಮೂರಾಬಟ್ಟೆಯಾಗಿ ಆತ್ಮಹತ್ಯೆಗೆ ಶರಣಾಗುವುದಿತ್ತು. ಇಂದು ತಮ್ಮನ್ನು ನಿಭಾಯಿಸಿಕೊಳ್ಳುವ ವಿದ್ಯೆ ಕಲಿತಿದ್ದಾರೆ. ಹಾಗೆಯೇ ಇಂದು ಪೈಲಟ್‌ನಿಂದ ಹಿಡಿದು ಉಪಗ್ರಹ ಉಡಾವಣೆ ತನಕ ತನ್ನ ಆಸಕ್ತಿಯ ಕ್ಷೇತ್ರಕ್ಕೆ ನುಗ್ಗಬಹುದಾದ ಅವಕಾಶ ಕೆಲವರಿಗಾದರೂ ಇದೆ. ಇಂದು ಹೆಣ್ಣು ಒಬ್ಬಳೇ ದೇಶ ವಿದೇಶ ಸುತ್ತಬಹುದು. ಹೀಗೇ. ಇವೆಲ್ಲವೂ ಕೇಳುವುದಕ್ಕೆ ಬಹಳ ಖುಷಿ ಕೊಡುವ ಸಂಗತಿಗಳು. ಆದರೆ ನಮ್ಮ ಶಿಕ್ಷಣ, ಮನರಂಜನಾ ಮಾಧ್ಯಮ ಮುಂತಾದವುಗಳೆಲ್ಲ ಎಷ್ಟು ಚೆನ್ನಾಗಿ ಪಿತೃಪ್ರಧಾನತೆಯನ್ನು ನಮ್ಮ ಧಮನಿಗಳಲ್ಲಿ ತುಂಬಿದ್ದಾವೆಂದರೆ, ಈಗ ನಾವೇ ಅವರ ಏಜೆಂಟ್‌ಗಳಂತೆ ವರ್ತಿಸತೊಡಗಿದ್ದೀವಿ. ಇದು ಇಂದಿನ ಅತಿದೊಡ್ಡ ಸವಾಲು.

ತಮ್ಮ ಹಕ್ಕುಗಳಿಗಾಗಿ ಹೋರಾಡಿ, ಬಲಿದಾನ ಆದ ಮಹಿಳೆಯರಿಗಾಗಿ ಮಾಡುವ, ಮಾಡಬೇಕಾದ ಮಹಿಳಾ ದಿನಾಚರಣೆಯು ಇಂದು ಸೆಲೆಬ್ರೇಶನ್ ಆಗಿ ಬಂಡವಾಳಶಾಹಿಯ ಕೈವಶವಾಗಿ, ಜಿಲ್ಲಾಡಳಿತದ ಕಾರ್ಯಕ್ರಮಗಳ ಭಾಗವಾಗಿ ತಮ್ಮ ಹಿತಾಸಕ್ತಿಗಳನ್ನು ಪೂರೈಸಲು ಸಿಗುವ 'ಪ್ರೇಕ್ಷಕರ ತಂಗುದಾಣ'ವಾಗಿ ಬದಲಾಗಿದೆ. ಬಿಸಿಯೂಟ, ಅಂಗನವಾಡಿ, ಆಶಾ ಕಾರ್ಯಕರ್ತೆಯರ ಕನಿಷ್ಠ ಬೇಡಿಕೆಗಳಿಗೆ ಹಗಲೂ, ರಾತ್ರಿ ಹೋರಾಡಿ, ದೂಷಿಸಿಕೊಂಡು, ಹೊಡೆಸಿಕೊಂಡು, ಜೈಲುಸೇರಿ ಕೆಲಸ ಮಾಡುವವರು ಯಾರೋ. ತಮ್ಮ ಅಧಿಕಾರದ ಮೂಗಿನಡಿ ಮಾಡಿಸುವ ಕಾರ್ಯಕ್ರಮಗಳಿಗೆ ರಾಜಕೀಯ ಸಮಾವೇಶಗಳಿಗೆ– ತಾವೆಂದೂ ಅವರಿಗಾಗಿ ಕೆಲಸ ಮಾಡದೆಯೇ– ಅವರು ಕಡ್ಡಾಯವಾಗಿ ಮೆರವಣಿಗೆ ಸಭೆಗಳಿಗೆ 'ಸಂಖ್ಯೆ'ಗಳಾಗುವಂತೆ – ಆದೇಶ ಮಾಡುವವರು ಯಾರೋ ಅನ್ನುವ ಸ್ಥಿತಿ ನಮ್ಮ ಕಣ್ಣ ಮುಂದಿದೆ. ಅಂದರೆ, ಈ 'ಬಳಸುವಿಕೆಗೆ' ಇವತ್ತಿಗೂ ಸುಲಭವಾಗಿ ಸಿಕ್ಕುತ್ತಿರುವವಳು ಮಹಿಳೆಯೇ.

ಹಾಗಾದರೆ ಸವಾಲು ಎಲ್ಲಿದೆ? ಸವಾಲು ನಾವು ಪ್ರಾತಿನಿಧ್ಯವನ್ನಷ್ಟೇ ಸಾಧನೆ ಎಂದು ಭಾವಿಸಿದ್ದರಲ್ಲಿದೆ. ನಾವೀಗ ಎಲ್ಲೆಡೆ ಇದ್ದೇವೆ. ವ್ಯೋಮಾಕಾಶಗಳಲ್ಲಿ, ರಸ್ತೆ ರಸ್ತೆಗಳಲ್ಲಿ ನಾವು ಗಾಡಿ ಚಲಾವಣೆ ಮಾಡುತ್ತಿದ್ದೇವೆ. ಆದರೆ ನಾವೀಗ ಗಂಡಿನ ಬದಲಿಗೆ, ಅವನ ಜಾಗದಲ್ಲಿ, ಅವನೇ ಹಾಕಿಕೊಟ್ಟ ಪಥದಲ್ಲಿ ಚಲಾವಣೆ ಮಾಡುತ್ತಿದ್ದೇವೆ. ಹೀಗೆ ಮಾಡುವಾಗ ನಮ್ಮತನವನ್ನು ಬಿಟ್ಟುಕೊಟ್ಟು, ಅವನತನಕ್ಕೇ ಒಪ್ಪಿಗೆ ಕೊಟ್ಟು ಮುನ್ನಡೆದಿದ್ದೇವೆ. ಇದನ್ನು ಉದಾಹರಣೆಯೊಂದಿಗೆ ಗಮನಿಸೋಣ. ಮಂಡ್ಯದಲ್ಲಿ ಎರಡು ವರ್ಷಗಳ ಹಿಂದೆ ನಡೆದ ಎರಡು ಪ್ರಸಂಗಗಳನ್ನು ನೆನಪಿಸಿಕೊಳ್ಳೋಣ. ಒಂದನೆಯದು ಇಲ್ಲಿ ನಡೆದು ಹೋದ ಅವಮರ್ಯಾದಾ ಹತ್ಯೆಗೆ ಸಂಬಂಧಿಸಿದ್ದು. ಒಂದೆಡೆಯಿಂದ 'ನಾವೆಲ್ಲರೂ ಹಿಂದೂ ನಾವೆಲ್ಲರೂ ಒಂದು' ಎನ್ನುತ್ತಾ, ಅನ್ಯ ಕೋಮಿನ ವಿರುದ್ಧ ಹಿಂದೂಗಳನ್ನು ಧ್ರುವೀಕರಣ ಮಾಡಲಾಗುತ್ತದೆ. ಇನ್ನೊಂದೆಡೆಯಿಂದ ಹಿಂದೂ ಧರ್ಮಕ್ಕೆ ಸೇರಿರುವ ಬೇರೆ ಬೇರೆ ಜಾತಿಯ ಹುಡುಗಿಯನ್ನೋ, ಹುಡುಗನನ್ನೋ ನಮ್ಮ ಮಕ್ಕಳು ಪ್ರೀತಿಸಿ ಮದುವೆ ಆಗ್ತಾರೆ ಅಂದರೆ ಅವರನ್ನು

ಪುಟ 15 ಕ್ಕೆ



ವಿವೇಚನಾರಹಿತ 'ಅಭಿವೃದ್ಧಿ'ಗೆ ಜನರ ಬಲಿ

ಉತ್ತರಾಖಂಡ ದುರಂತದಿಂದ ಪಾಠ ಕಲಿಯಬೇಕು

ಇಂಥ ದುರಂತ ಸಂಭವಿಸಲು ಎರಡು ಅಂಶಗಳು ಕಾರಣವಾಗುತ್ತವೆ ಮತ್ತು ಅದಕ್ಕೆ ಕೊಡುಗೆ ನೀಡುತ್ತವೆ ಎಂಬುದು ಎದ್ದು ಕಾಣುತ್ತದೆ: ಒಂದು: ತಾಪಮಾನ ಬದಲಾವಣೆ ಎರಡು: ಈ ವಲಯದಲ್ಲಿ ಯೋಚನೆಯಿಲ್ಲದ ಮೂಲಸೌಕರ್ಯ ಹಾಗೂ ಇತರ ನಿರ್ಮಾಣ ಯೋಜನೆಗಳನ್ನು ಕೈಗೊಳ್ಳುವುದು. ಈ ಅಸ್ಥಿರವಾದ ವಲಯದಲ್ಲಿ ಪಟ್ಟಣಗಳು ಮತ್ತು ಜನವಸತಿ ಪ್ರದೇಶಗಳ ತಾಳಿಕೆಯ ಸಾಮರ್ಥ್ಯದ ಬಗ್ಗೆ ಕೂಡ ಸ್ವಲ್ಪವೂ ಚಿಂತನೆ ನಡೆಸಿಲ್ಲ. ಜನರ ಸುರಕ್ಷತೆಗಿಂತ ನಿರ್ಮಾಣ ಕಾರ್ಯದಲ್ಲಿ ತೊಡಗಿರುವ ಕಂಪೆನಿಗಳಿಗೆ ತ್ವರಿತವಾಗಿ ಲಾಭ ಮಾಡಿಕೊಡುವುದಕ್ಕೆ ಸರ್ಕಾರ ಆದ್ಯತೆ ನೀಡಿದಂತಿದೆ. ಉತ್ತರಾಖಂಡದ ಬೆಟ್ಟ ಪ್ರದೇಶಗಳ ಎಲ್ಲ ಪರಿಯೋಜನೆಗಳ ಸಂಪೂರ್ಣ ಸುರಕ್ಷತಾ ವ್ಯವಸ್ಥೆ ಮತ್ತು ಪಾರಿಸರಿಕ ಪರಿಶೀಲನೆ ನಡೆಸಬೇಕಾಗಿದೆ. ಪ್ರಸಕ್ತ ವಿನಾಶಕಾರಿ ಪಥವನ್ನು ಯಾವುದೇ ವಿಳಂಬವಿಲ್ಲದೆ ಬದಲಾಯಿಸುವುದು ಅಗತ್ಯ.



ಪ್ರಕಾಶ ಕಾರಟ್

ಉತ್ತರಾಖಂಡ ರಾಜ್ಯದ ಚಮೋಲಿ ಜಿಲ್ಲೆಯಲ್ಲಿ 2021 ಫೆಬ್ರವರಿ ಏಳರಂದು ಇಡೀ ದೇಶದ ಜನರ ಮನಕಲಕುವಂಥ ದುರಂತವೊಂದು ಸಂಭವಿಸಿದೆ. ಈ ಭೀಕರ ಅವಘಡದಲ್ಲಿ ಈಗಾಗಲೇ 30ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದು 150ಕ್ಕೂ ಅಧಿಕ ಮಂದಿ ನಾಪತ್ತೆಯಾಗಿದ್ದಾರೆ ಅಥವಾ ಸುರಂಗದಲ್ಲಿ ಸಿಲುಕಿಕೊಂಡಿದ್ದಾರೆ. ದುರಂತದ ಇನ್ನೂ ಆಘಾತಕಾರಿ ಸಂಗತಿಯೆಂದರೆ ಮೃತಪಟ್ಟವರಲ್ಲಿ ಹೆಚ್ಚಿನವರು ಮೂಲಸೌಕರ್ಯ ಹಾಗೂ ವಿದ್ಯುತ್ ಯೋಜನೆಗಳಲ್ಲಿ ದುಡಿಯುತ್ತಿದ್ದ ಕಾರ್ಮಿಕರು. ರೈಣಿ ಗ್ರಾಮದ ಹತ್ತಿರ ಋಷಿಗಂಗಾ ನದಿ ಮೇಲಿನ ಸಣ್ಣ 13.2 ಮೆಗಾವ್ಯಾಟ್ ವಿದ್ಯುತ್ ಯೋಜನೆ ಅದರಲ್ಲಿ ಒಂದಾಗಿದ್ದು ಅದು ಸಂಪೂರ್ಣವಾಗಿ ಕೊಚ್ಚಿಹೋಗಿದೆ. ಧೌಲಿಗಂಗಾ ನದಿಯ ಮೇಲಿನ 520 ಮೆಗಾವ್ಯಾಟ್ ತಪೋವನ ವಿದ್ಯುತ್ ಯೋಜನೆ ಇನ್ನೊಂದು ಪ್ರಮುಖ ಯೋಜನೆಯಾಗಿದೆ. ಅದಕ್ಕೂ ಭಾರಿ ಹಾನಿಯಾಗಿದ್ದು ಅದರ ಬಹಳಷ್ಟು ಕಾರ್ಮಿಕರು ಒಳಗಡೆ ಸಿಲುಕಿಕೊಂಡಿದ್ದಾರೆ. ಈ ಯೋಜನೆಗಳಿಂದ ಈ ವಲಯಕ್ಕೆ ಅನುಕೂಲ ಆಗಬೇಕಿತ್ತು. ಆದರೆ ದುರಂತಕ್ಕೆ ಬಲಿಯಾಗಿವೆ. ಇದು ನಿಜಕ್ಕೂ ವಿಪರ್ಯಾಸ. ಯಾಕೆಂದರೆ ಇಂತಹ ತೀರಾ ನಿರ್ಲಕ್ಷ್ಯದಿಂದ ಕೂಡಿದ 'ಅಭಿವೃದ್ಧಿ' ಚಟುವಟಿಕೆಗಳೇ ಈ ರೀತಿಯ ಮಹಾ ದುರಂತಗಳಿಗೆ ಪ್ರಮುಖ ಕಾರಣವಾಗುತ್ತವೆ. ಯಾವಾಗಲೂ ಅದೇ ಪ್ರಾಥಮಿಕ ಕಾರಣ ಆಗಿರಲಾರದು ಎನ್ನುವುದೇನೋ ಹೌದು.

ಪ್ರಸ್ತುತ ದುರಂತಕ್ಕೆ ನಿಜವಾದ ಕಾರಣ ಏನೆಂಬುದು ನಿಧಾನವಾಗಿ ಅನಾವರಣಗೊಳ್ಳುತ್ತಿದೆ. ಹಿಮಬಂಡೆಯ ಸ್ಫೋಟದಿಂದ ಈ ದುರಂತ ಸಂಭವಿಸಿದೆ ಎಂಬ ಊಹಾಪೋಹಗಳು ನಿಜವಾದ ಕಾರಣವಲ್ಲ ಎಂದನಿಸುತ್ತದೆ. ಬಂಡೆಯಿಂದ ಕೂಡಿದ ಬೆಟ್ಟದ ತುದಿ ಭಾಗದ ಒಂದು ದೊಡ್ಡ ವಿಭಾಗ ತುಂಡರಿಸಿದ್ದರಿಂದ ಸಂಭವಿಸಿರಬಹುದಾದ ಭಾರಿ ಭೂಕುಸಿತ, ಜತೆಗೆ ಇದರಿಂದಾಗಿ ಇತ್ತೀಚೆಗೆ ಸಂಗ್ರಹಗೊಂಡ ಹಿಮ ಮತ್ತು ಬಂಡೆಗಳ ಭಾರೀ ಪ್ರವಾಹದಿಂದಾಗಿ ಈ ದುರಂತ ಸಂಭವಿಸಿರಬಹುದೆಂದು ಭಾರತ ಮತ್ತು ವಿದೇಶಗಳ ಉಪಗ್ರಹ ಚಿತ್ರಗಳ ಅಧ್ಯಯನ, ಭಾರತೀಯ ತಜ್ಞರ ತಂಡದ ಪ್ರಾಥಮಿಕ ಅಧ್ಯಯನದಿಂದ ಕಾಣಬರುತ್ತಿದೆ. ಅಸ್ಥಿರವಾದ ಬಂಡೆಯ ಮೇಲ್ಮೈಮೇಲೆ ಒಂದು ಹಿಮನದಿಯ ಒಂದು ತುಂಡರಿಸಿದ ಭಾಗ ಬಿದ್ದುದು ಈ ಸಮಸ್ತ ಘಟನಾವಳಿಗಳಿಗೆ ಕಾರಣವಾಗಿದ್ದಿರಬಹುದು ಎಂಬ ಅನುಮಾನವೂ ಇದೆ.

ಎಚ್ಚರಿಕೆಗಳ ಪರಮ ನಿರ್ಲಕ್ಷ್ಯ

ನಿರ್ದಿಷ್ಟ ಕಾರಣಗಳು ಏನೇ ಇರಲಿ; ಎಲ್ಲ ಎಚ್ಚರಿಕೆಗಳನ್ನು ನಿರ್ಲಕ್ಷಿಸಿ ಮತ್ತು ಪರಿಣಾಮಗಳ ಬಗ್ಗೆ ಕಿಂಚಿತ್ತೂ ಚಿಂತಿಸದೆ ನಡೆಸಿದ ಯೋಚನಾರಹಿತ ಮಾನವ ನಿರ್ಮಿತ "ಅಭಿವೃದ್ಧಿ'ಯನ್ನು ಈ ದುರಂತ ನೆನಪಿಸುತ್ತದೆ ಎನ್ನುವುದು ಮಾತ್ರ ಸತ್ಯ. ಒಟ್ಟಾರೆಯಾಗಿ ಪರ್ವತ ಪ್ರದೇಶಗಳಲ್ಲಿ, ವಿಶೇಷವಾಗಿ ಪಶ್ಚಿಮ ಹಿಮಾಲಯಗಳಲ್ಲಿ ಇಂಥ ದುರಂತ ಸಂಭವಿಸಲು ಎರಡು ಅಂಶಗಳು ಕಾರಣವಾಗುತ್ತವೆ ಮತ್ತು ಅದಕ್ಕೆ ಕೊಡುಗೆ ನೀಡುತ್ತವೆ ಎಂಬುದು ಎದ್ದು ಕಾಣುತ್ತದೆ: ಒಂದು: ತಾಪಮಾನ ಬದಲಾವಣೆ ಅಂದರೆ ವಾತಾವರಣದ ಉಷ್ಣತೆ ಹೆಚ್ಚುವುದು. ಎರಡು: ಈ ವಲಯದಲ್ಲಿ ಯೋಚನೆಯಿಲ್ಲದ ಮೂಲಸೌಕರ್ಯ ಹಾಗೂ ಇತರ ನಿರ್ಮಾಣ ಯೋಜನೆಗಳನ್ನು ಕೈಗೊಳ್ಳುವುದು.

ಮಾನವ-ನಿರ್ಮಿತ ಜಾಗತಿಕ ತಾಪಮಾನ ಏರಿಕೆ (ಗ್ಲೋಬಲ್ ವಾರ್ಮಿಂಗ್) ಹಿಮಧಾರೆಗಳು (ಗ್ಲೇಷಿಯರ್) ಮತ್ತು ಧ್ರುವೀಯ ಹಿಮ ಆವರಣ ಕರಗುವಿಕೆಗೆ ಕಾರಣವಾಗುತ್ತದೆ ಎನ್ನುವುದು ಈಗ ಎಲ್ಲರಿಗೂ ಗೊತ್ತಿರುವ ವಿಷಯವೇ. ಅಂತಾರಾಷ್ಟ್ರೀಯವಾಗಿ ಮತ್ತು ಭಾರತದಲ್ಲಿಯೂ ಇತ್ತೀಚೆಗೆ ನಡೆಸಿದ ಅಧ್ಯಯನಗಳ ಪ್ರಕಾರ ಕಳೆದ ಕೆಲ ದಶಕಗಳಿಗಿಂತ ಈಗೀಗ ಮಂಜುಗಡ್ಡೆಗಳ ಕರಗುವಿಕೆಯ ದರ ಹೆಚ್ಚಾಗಿದೆ. ಭಾರತದಲ್ಲಿ, ಪೂರ್ವಕ್ಕಿಂತ ಪಶ್ಚಿಮ ಹಿಮಾಲಯ ವಲಯದಲ್ಲಿ ಗ್ಲೇಷಿಯರ್‌ಗಳು ಬಹಳ ವೇಗದಿಂದ ಕರಗುತ್ತಿವೆ. ಹಿಮಧಾರೆಗಳ ಕರಗುವಿಕೆಯಿಂದ ದೊಡ್ಡ ಕೆರೆಗಳು ಅಥವ 'ಹಿಮ ಸರೋವರ'ಗಳು ಉಂಟಾಗುತ್ತವೆ. ಕೆಲವೊಮ್ಮೆ ಇವುಗಳ ಕಟ್ಟೆಯೊಡೆದು ದೊಡ್ಡ ಪ್ರಮಾಣದಲ್ಲಿ ನೀರು ಕೆಳಕ್ಕೆ ಧುಮ್ಮಿಕ್ಕುತ್ತದೆ. ಪ್ರಸ್ತುತ ದುರಂತದಲ್ಲಿ ಹಾಗಾಗಿರಬಹುದು ಎಂದು ಮೊದಲಿಗೆ ಊಹಿಸಲಾಗಿತ್ತು. ಇದರಿಂದ, ವಿಶೇಷವಾಗಿ ಪಶ್ಚಿಮ ಹಿಮಾಲಯದಲ್ಲಿ ಅಸ್ಥಿರತೆ ಮತ್ತು ದಿಢೀರ್ ಪ್ರವಾಹದ ಸಂಭಾವ್ಯತೆ ಹೆಚ್ಚಾಗಿದೆ.

ಬೇಜವಾಬ್ದಾರಿ ಧಾವಂತದಿಂದ ಇನ್ನಷ್ಟು ಅಪಾಯ

ಈ ಸಮಸ್ಯೆಯು ಈ ವಲಯದಲ್ಲಿ ಹಲವು ರಸ್ತೆಗಳ ನಿರ್ಮಾಣ, ವಿದ್ಯುಚ್ಛಕ್ತಿ ಯೋಜನೆಗಳು ಮತ್ತಿತರ ಕಾಮಗಾರಿಗಳ ಬೇಜವಾಬ್ದಾರಿ ಧಾವಂತದಿಂದಾಗಿ ಉಲ್ಬಣಗೊಂಡಿದೆ. ಹಿಮಾಲಯವು ಒಂದು ಯುವ ಹಾಗೂ ಅಸ್ಥಿರವಾದ ಪರ್ವತ ಶ್ರೇಣಿಯಾಗಿದ್ದು ಪದೇ ಪದೇ ಭೂಕುಸಿತ, ಮೇಘಸ್ಫೋಟ ಮತ್ತು ದಿಢೀರ್ ಪ್ರವಾಹಗಳು ಉಂಟಾಗಿ ಟನ್‌ಗಟ್ಟಲೆ ಬಂಡೆ ಮತ್ತು ಇತರ ತ್ಯಾಜ್ಯಗಳು ಸಾಮಾನ್ಯ ಸನ್ನಿವೇಶದಲ್ಲಿ ಕೂಡ ಉರುಳಿ ಬರುತ್ತವೆ. ಬೆಟ್ಟ ಪ್ರದೇಶಗಳಲ್ಲಿ ಮಾನವ ವಸತಿಗಳನ್ನು ವಿಸ್ತರಿಸುತ್ತಿರುವುದರಿಂದ ಪ್ರಾದೇಶಿಕ ಪರಿಸರದ ಮೇಲೆ ಈಗಾಗಲೇ ಒತ್ತಡ ಹೆಚ್ಚುತ್ತಿದೆ. ರಸ್ತೆ ನಿರ್ಮಾಣ, ಜಲಮೂಲ ಕಡಿಮೆಯಾಗುವುದು, ಮರ ಕಡಿಯುವುದರಿಂದ ಮಣ್ಣಿನ ಸವಕಳಿ ಹೆಚ್ಚುವುದು ಹಾಗೂ ಬಂಡೆಗಳ ಹಿಡಿತದ ಬಲ ಕುಂದುವುದು ಭೂಕುಸಿತಕ್ಕೆ ಕಾರಣವಾಗುತ್ತವೆ. ಇವೆಲ್ಲವೂ ಒತ್ತಡಕ್ಕೆ ಕಾರಣ. ಮಳೆ ನೀರಿನಿಂದ ಸ್ಥಳೀಯ ನದಿ ಮತ್ತು ಹಳ್ಳ-ತೊರೆಗಳಲ್ಲಿ ಪ್ರವಾಹ ಉಂಟಾಗುತ್ತದೆ. ವಿಶೇಷವಾಗಿ ಪ್ರಸಕ್ತ ಸರ್ಕಾರದ ಅಡಿಯಲ್ಲಿ ವಿವೇಚನಾರಹಿತ ನಿರ್ಮಾಣ ಕಾರ್ಯಗಳ ಧಾವಂತ ಇಂಥ ವಿನಾಶಗಳು ಹೊಸ ಹಾಗೂ ಅಪಾಯಕಾರಿ ಮಟ್ಟಗಳಿಗೆ ಒಯ್ಯುತ್ತಿದೆ.

ಈ ವಲಯದಲ್ಲಿ ಭಾರಿ ಸಂಖ್ಯೆಯ ಜಲ ವಿದ್ಯುತ್ ಯೋಜನೆಗಳ ನಿರ್ಮಾಣ ಆಗುತ್ತಿದೆ. ಉತ್ತರಾಖಂಡ ರಾಜ್ಯದಲ್ಲಿ ಆಗಲೇ ಸುಮಾರು 100 ಅಣೆಕಟ್ಟುಗಳಿವೆ. ಇನ್ನೂ ಹಲವು ಡ್ಯಾಮ್‌ಗಳ ನಿರ್ಮಾಣ ಆಗುತ್ತದೆ. ಇವುಗಳಲ್ಲಿ ಅನೇಕ ಅಣೆಗಳು ನದಿ ಹರಿವಿನ ಯೋಜನೆಗಳು ಎಂದು ಹೇಳಲಾಗಿದ್ದರೂ, ' ಕೆಲವದರಲ್ಲಿ ನೀರನ್ನು ತಡೆದು ನಿಲ್ಲಿಸುವ ಹಾಗೂ ನಿರ್ಮಾಣ ಚಟುವಟಿಕೆಗಳೂ ಒಳಗೊಂಡಿವೆ. ಒಂದು ಅಂದಾಜಿನ ಪ್ರಕಾರ 450ಕ್ಕೂ ಹೆಚ್ಚು ಜಲ ವಿದ್ಯುತ್ ಯೋಜನೆಗಳ ಪ್ರಸ್ತಾಪನೆಯಿದೆ. ಅಂದರೆ ಕೆಲವೇ ಡಜನ್ ಕಿಲೋ ಮೀಟರ್‌ಗೆ ಒಂದು ಜಲವಿದ್ಯುತ್ ಯೋಜನೆ ಇರುತ್ತದೆ ಎಂದಾಯಿತು!. ಈ ಅಣೆಕಟ್ಟು ಮತ್ತು ಜಲ ವಿದ್ಯುತ್ ಯೋಜನೆಗಳಿಗಾಗಿ ಮರಗಳನ್ನು ಕೂಡ ಕಡಿಯಲಾಗುತದೆ. ಆದರೆ ಅದಕ್ಕೆ ಸರಿಸಮನಾಗಿ ಅರಣ್ಯೀಕರಣದ ಯೋಜನೆ ಸರ್ಕಾರದ ಬಳಿಯಿಲ್ಲ. ಡೈನಮೈಟ್ ಮತ್ತು ಇತರ ಕೆಲವು ಪ್ರಶ್ನಾರ್ಹ ತಂತ್ರಗಳನ್ನು ಬಳಸುತ್ತಿರುವುದರಿಂದ ಈಗಾಗಲೇ ಅಸ್ಥಿರವಾದ ವಲಯದಲ್ಲಿ ಹೆಚ್ಚಿನ ಅಪಾಯ ಉಂಟಾಗಲಿದ್ದು ಗ್ರಾಮಸ್ಥರು ಪ್ರತಿಭಟನೆಗಳನ್ನೂ ನಡೆಸುತ್ತಿದ್ದಾರೆ.

ನಿರ್ಮಾಣ ಕಾರ್ಯದ ತ್ಯಾಜ್ಯಗಳನ್ನು ಎಲ್ಲ ನಿಯಮಗಳನ್ನು ಗಾಳಿಗೆ ತೂರಿ ನದಿಗಳಿಗೆ ಸುರಿಯಲಾಗುತ್ತಿದೆ. ಅಥವಾ ರಸ್ತೆ ಬದಿ ರಾಶಿ ಹಾಕಲಾಗುತ್ತದೆ. ಅಂತಿಮವಾಗಿ ಅವು ಕೂಡ ನದಿಯ ಒಡಲು ಸೇರುತ್ತವೆ.

ಕುತಂತ್ರದ ಪರಿಸರ ಅನುಮತಿ

ಬೃಹತ್‌ಪ್ರಮಾಣದ ರಸ್ತೆ ನಿರ್ಮಾಣ ಕಾರ್ಯವೂ ನಡೆಯುತ್ತಿದೆ. ಉತ್ತರಾಖಂಡದಲ್ಲಿರುವ ನಾಲ್ಕು ಪ್ರಸಿದ್ಧ ಯಾತ್ರಾ ಸ್ಥಳಗಳನ್ನು ಸಂಪರ್ಕಿಸುವ 14,000 ಕೋಟಿ ರೂಪಾಯಿ ವೆಚ್ಚದ, 2016ರಲ್ಲಿ ಆರಂಭವಾದ ಚಾರ್ ಧಾಮ್ ಯೋಜನೆ ಅನ್ವಯ ಈ ರಸ್ತೆಗಳ ನಿರ್ಮಾಣ ಕಾರ್ಯ ಸಾಗಿದೆ. ಚಾರ್‌ಧಾಮ್ ಮಹಾಮಾರ್ಗ್ ಹೆದ್ದಾರಿ ಸಹಿತ 800 ಕಿಲೋಮೀಟರ್‌ಗೂ ಅಧಿಕ ಉದ್ದದ ರಸ್ತೆ, ಹೋಟೆಲ್‌ಗಳು ಮತ್ತಿತರ ಮೂಲಸೌಕರ್ಯ ಕಾರ್ಯಗಳನ್ನು ಕೈಗೆತ್ತಿಕೊಳ್ಳಲಾಗಿದೆ.

ಇಡೀ ಯೋಜನೆಯನ್ನು 100 ಕಿಲೋ ಮೀಟರ್‌ಗಿಂತ ಕಡಿಮೆ ಉದ್ದದ 53 ಯೋಜನೆಗಳಾಗಿ ವಿಭಜಿಸಿ ಕುತಂತ್ರದಿಂದ ಪರಿಸರ ಅನುಮತಿಯನ್ನು ಪಡೆಯಲಾಗಿದೆ. ಸಣ್ಣ ವಿಭಾಗಗಳಾಗಿ ಮಾಡಿದ್ದರಿಂದ ಪರಿಸರ ಇಲಾಖೆಯ ಅನುಮತಿ ಪಡೆಯುವುದು ಸುಲಭವಾಗಿತ್ತು. ಬೇಕಾದವರನ್ನೇ ತುಂಬಿಸಿದ್ದ ಪರಿಶೀಲನಾ ಸಮಿತಿ ಕೂಡ ರಸ್ತೆಗಳ ಅಗಲವನ್ನು 10 ಮೀಟರ್‌ಗೆ ಹೆಚ್ಚಿಸಿತ್ತು. ಇದರಿಂದಾಗಿ ಬೆಟ್ಟಗಳನ್ನು 24 ಮೀಟರ್‌ವರೆಗೆ ಕಡಿಯುವ ಅಗತ್ಯ ಉಂಟಾಗಿದೆ. ಡೈನಮೈಟ್ ಬಳಕೆ ಸಹಿತ ತುಂಬಾ ಒರಟು ರೀತಿಯಲ್ಲಿ ರಸ್ತೆ ಕಡಿಯುವ ಹಾಗೂ ಬೆಟ್ಟದ ಬದಿಗಳನ್ನು ಸವರುವ ಕೆಲಸ ನಡೆಸಲಾಗುತ್ತಿದ್ದು ತೀವ್ರ ಕಳವಳಕ್ಕೆ ಕಾರಣವಾಗಿದೆ. ಬೆಟ್ಟ ಸವರಿ ಇಳಿಜಾರುಗೊಳಿಸಿದ ಪ್ರದೇಶಗಳಲ್ಲಿ ಭೂಕುಸಿತವಾಗಲಿದೆ. ಅಲ್ಲಿ ಹೊಸದಾಗಿ ಮರಗಳನ್ನು ಬೆಳೆಸದಿರುವುದರಿಂದಲೂ ಅನಾಹುತಕ್ಕೆ ಎಡೆಯಾಗಲಿದೆ.

ಜನರ ಸುರಕ್ಷತೆಗಿಂತ ನಿರ್ಮಾಣ ಕಾರ್ಯದಲ್ಲಿ ತೊಡಗಿರುವ ಕಂಪೆನಿಗಳಿಗೆ ತ್ವರಿತವಾಗಿ ಲಾಭ ಮಾಡಿಕೊಡುವುದಕ್ಕೆ ಸರ್ಕಾರ ಆದ್ಯತೆ ನೀಡಿದಂತಿದೆ.

ಇವೆಲ್ಲವೂ ಈಗಾಗಲೇ ಅಸ್ಥಿರಗೊಂಡಿರುವ ವಲಯದಲ್ಲಿ ಆಗಿರುವ ನೇರ ಹಾನಿಯಲ್ಲದೆ, ಭವಿಷ್ಯದ ಪ್ರವಾಹಗಳಿಂದ ಹಾನಿಗಳನ್ನು ಇನ್ನಷ್ಟು ಹೆಚ್ಚಿಸಲಿವೆ. ತ್ಯಾಜ್ಯಗಳ ಸುರಿಯುವಿಕೆಯಿಂದ ನದಿ ತಳಗಳ ಎತ್ತರ ಹೆಚ್ಚಾಗಿ ಪ್ರವಾಹ ಉಂಟಾಗಿ ನದಿ ಬಳಿಯಿರುವ ಕಟ್ಟಡಗಳು ಹಾಗೂ ಊರುಗಳು ಮುಳುಗಡೆ ಆಗುವ ಅಪಾಯವಿದೆ. 2013ರಲ್ಲಿ ಸಂಭವಿಸಿದ ರೀತಿಯಲ್ಲೇ ದುರಂತ ಮರುಕಳಿಸಬಹುದು.

2013ರಲ್ಲಿ ವ್ಯಾಪಕವಾಗಿ ಹಾನಿಗೊಂಡ ಕೇದಾರನಾಥ ಪಟ್ಟಣವನ್ನು ಸುತ್ತಮುತ್ತಲಿನ ಪರಿಸರದ ಮೇಲೆ ಬೀರುವ ಪರಿಣಾಮವನ್ನು ಗಣನೆಗೆ ತೆಗೆದುಕೊಳ್ಳದೆ ಮರುನಿರ್ಮಾಣ ಮಾಡಲಾಗುತ್ತಿದೆ. 2013ರಲ್ಲಾದಂತೆ ಪಟ್ಟಣದಲ್ಲಿ ಮತ್ತೆ ಪ್ರವಾಹ ಸಂಭವಿಸೀತು ಎನ್ನುವುದನ್ನು ಕೂಡ ಗಣನೆಗೆ ತೆಗೆದುಕೊಳ್ಳಲಾಗಿಲ್ಲ.

ಈ ಅಸ್ಥಿರವಾದ ವಲಯದಲ್ಲಿ ಪಟ್ಟಣಗಳು ಮತ್ತು ಜನವಸತಿ ಪ್ರದೇಶಗಳ ತಾಳಿಕೆಯ ಸಾಮರ್ಥ್ಯದ ಬಗ್ಗೆ ಕೂಡ ಸ್ವಲ್ಪವೂ ಚಿಂತನೆ ನಡೆಸಿಲ್ಲ. ಕೆಳ ಪ್ರದೇಶಗಳಲ್ಲಿ ವಸತಿ ಮೂಲಸೌಕರ್ಯ ನಿರ್ಮಾಣ, ದೇವಸ್ಥಾನಕ್ಕೆ ಯಾತ್ರಿಗಳ ಸಂಖ್ಯೆ ನಿಯಂತ್ರಣ ಮೊದಲಾದ ಪರ್ಯಾಯ ಸಲಹೆಗಳನ್ನು ಆಡಳಿತ ನಡೆಸುವವರು ಕಿವಿ ಮೇಲೆ ಹಾಕಿಕೊಂಡೇ ಇಲ್ಲ.

ಈ ಪ್ರದೇಶದಲ್ಲಿ ತೀವ್ರ ಸ್ವರೂಪದ ಹವಾಮಾನ ಘಟನೆಗಳು, ಭೂಕುಸಿತಗಳು ಮತ್ತು ಇಳಿಜಾರಿನ ಅಸ್ಥಿರತೆ, ಅಲ್ಲದೆ ಹಿಮಧಾರೆಗಳ ನಿರೀಕ್ಷಣೆ ಮುಂತಾದವುಗಳ ಮೇಲೆ ನಿಗಾ ಮತ್ತು ಉಸ್ತುವಾರಿಗೆ ಸುಮಾರಾಗಿ ಯಾವ ವ್ಯವಸ್ಥೆಯೂ ಇಲ್ಲ.

ಉತ್ತರಾಖಂಡದ ಬೆಟ್ಟ ಪ್ರದೇಶಗಳ ಎಲ್ಲ ಪರಿಯೋಜನೆಗಳ ಸಂಪೂರ್ಣ ಸುರಕ್ಷತಾ ವ್ಯವಸ್ಥೆ ಮತ್ತು ಪಾರಿಸರಿಕ ಪರಿಶೀಲನೆ ನಡೆಸಬೇಕಾಗಿದೆ. ಪ್ರಸಕ್ತ ವಿನಾಶಕಾರಿ ಪಥವನ್ನು ಯಾವುದೇ ವಿಳಂಬವಿಲ್ಲದೆ ಬದಲಾಯಿಸುವುದು ಅಗತ್ಯ. ಇಲ್ಲದಿದ್ದರೆ ಭವಿಷ್ಯದಲ್ಲೂ ಇಂಥ ಅನಾಹುತಗಳು ಸಂಭವಿಸುವುದು ನಿಶ್ಚಿತ.

ಅನು: ವಿಶ್ವ

ಕೇರಳ ರಾಜ್ಯದ 2021–22 ರ ಬಜೆಟ್, ಮಹಾಸೋಂಕಿನ ನಂತರದ ನವ ಸಹಜತೆ ಒಡ್ಡುತ್ತಿರುವ ಸವಾಲುಗಳನ್ನು ಎದುರಿಸುವ ಮತ್ತು ಎಡ ಪರ್ಯಾಯವನ್ನು ವಿಸ್ತರಿಸುವ ಭಾಗವಾಗಿ ಹಲವು ಕ್ರಮಗಳನ್ನು ಕೈಗೊಂಡಿದೆ. ಹೆಚ್ಚು ಆದಾಯ ನೀಡುವ ಮೌಲ್ಯ–ಸರಣಿಯಲ್ಲಿ ಮೇಲುಹಂತದಲ್ಲಿರುವ ಉದ್ಯೋಗಗಳು ವಿದ್ಯಾವಂತ ಯುವ ಜನತೆಗೆ ನಿಲುಕುವಂತಾಗಲು ಉತ್ತಮ ಗುಣಮಟ್ಟದ ಸಾಂಸ್ಥಿಕ ವ್ಯವಸ್ಥೆಗಳನ್ನು ಸ್ಥಾಪಿಸುವುದು; ಮರಳಿ ಬಂದ ವಲಸೆ ಕಾರ್ಮಿಕರಿಗೆ ಸರಕಾರದ ವಿವಿಧ ವಿಭಾಗಗಳು ಮತ್ತು ಸ್ಥಳೀಯ ಸರ್ಕಾರಗಳು ನಡೆಸುವ ಹಲವು ಉದ್ಯೋಗ ಮತ್ತು ಉದ್ಯಮಶೀಲತೆಗೆ ಪ್ರೋತ್ಸಾಹ ನೀಡುವ ಯೋಜನೆಗಳು; 'ಹೆಚ್ಚು ಆಹಾರ ಬೆಳೆಯುವ ಯೋಜನೆ'ಯನ್ನು ಬಲಪಡಿಸಿ, ಅದನ್ನು ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯೊಂದಿಗೆ ಜೋಡಿಸುವುದು; ಅಯ್ಯಂಕಾಳಿ ಅವರ ಹೆಸರಿನಲ್ಲಿ ಸ್ಥಾಪಿಸಿರುವ ವಿಶಿಷ್ಟ ನಗರ ಉದ್ಯೋಗ ಯೋಜನೆಯನ್ನು ಬಲಪಡಿಸುವುದು; 'ನವಕೇರಳ ಮಿಷನ್'ಗಳನ್ನು ಮತ್ತು KIIFB ಹೂಡಿಕೆಯ ಮೂಲಕ ಮೂಲಸೌಕರ್ಯ ಯೋಜನೆಗಳನ್ನು ಮುಂದುವರೆಸುವ ಮತ್ತು ಬಲಪಡಿಸುವುದು–ಮುಂತಾದ ಕ್ರಮಗಳನ್ನು ಬಜೆಟ್ ಪ್ರಸ್ತಾವಗಳು ಹೊಂದಿವೆ.



ಕೇರಳ ಬಜೆಟ್: 'ನವ ಸಹಜತೆ' ಗೆ ಆರ್ಥಿಕತೆಯನ್ನು ತಯಾರಿ ಮಾಡುವತ್ತ......

– ಕೆ.ಎನ್. ಹರಿಲಾಲ್ (ಅನು: ಶ್ರೃ.ಶಂ.ನಾ.)

ಮಹಾಸೋಂಕು, ಪರಿಸರ ವಿನಾಶಗಳು ಮತ್ತು ಜಾಗತಿಕ ಆರ್ಥಿಕ ಬಿಕ್ಕಟ್ಟಿನಿಂದಾಗಿ ನಮ್ಮ ಜೀವನವನ್ನು ನಡೆಸುವ ವಿಧಾನಗಳು ವೇಗವಾಗಿ ಬದಲಾಗುತ್ತಿದೆ. ನಮಗಿಷ್ಟವಿರಲಿ, ಇಲ್ಲದಿರಲಿ ಜೀವನದ ಬಹುತೇಕ ಎಲ್ಲಾ ಆಯಾಮಗಳಲ್ಲಿ ಒಂದು ನವ ಸಹಜತೆಯು ಹೊಮ್ಮುತ್ತಿರುವುದನ್ನು ಕಾಣಬಹುದು. ಹಿಂದಿನ ಸಹಜತೆಗೆ ಹಿಂದಿರುಗುವ ಪ್ರಶ್ನೆಯೇ ಇಲ್ಲ. ಈ ಸಮಯದಲ್ಲಿ ಕೇರಳ ರಾಜ್ಯದ 2021–22 ರ ಬಜೆಟ್, ಮಹಾಸೋಂಕಿನ ನಂತರದ ನವ ಸಹಜತೆ ಒಡ್ಡುತ್ತಿರುವ ಸವಾಲುಗಳನ್ನು ಎದುರಿಸುವ ಪ್ರಬಲ ಪ್ರಯತ್ನವಾಗಿದೆ. ರಾಜ್ಯದ ಆರ್ಥಿಕತೆ ಮತ್ತು ಸಮಾಜವನ್ನು ಬದಲಾಗುತ್ತಿರುವ ಸಮಯ ಒಡ್ಡಿರುವ ಸವಾಲುಗಳನ್ನು ಎದುರಿಸುವಂತೆ ತಯಾರಿ ಮಾಡಲು ಮತ್ತು ಕೇರಳ ಮಾದರಿ ಅಭಿವೃದ್ಧಿಯ ಸಾಧನೆಗಳನ್ನು ಕಾಯ್ದುಕೊಂಡು ರಾಜ್ಯದ ಬೆಳವಣಿಗೆಯ ನಡಿಗೆಯನ್ನು ಮುಂದುವರಿಸಲು ಸ್ಪಷ್ಟ ರಣನೀತಿಗಳನ್ನು ಈ ಬಜೆಟ್ ತೆರೆದಿಟ್ಟಿದೆ.

ಮಹಾಸೋಂಕಿನ ನಂತರದ ಅವಧಿಯ ಕೇಂದ್ರ ಲಕ್ಷಣಗಳಲ್ಲಿ ಆರ್ಥಿಕತೆಯ ಡಿಜಿಟಲೀಕರಣ ಪ್ರಮುಖವಾದುದು. ಈ ಮಹಾಸೋಂಕಿನ ಮೊದಲೇ ನಿಜವಾದ ಆರ್ಥಿಕತೆ ಮತ್ತು ಡಿಜಿಟಲ್ ಆರ್ಥಿಕತೆಗಳ ನಡುವಿನ ಕಂದಕ ಸಾಕಷ್ಟಿತ್ತು. ಡಿಜಿಟಲ್ ಆರ್ಥಿಕತೆಯ ತಂತಜ್ಞಾನಗಳು ಆಗಲೇ ಬಳಕೆಯಲ್ಲಿದ್ದವು. ಆದರೆ ಮಹಾಸೋಂಕು ತಂತ್ರಜ್ಞಾನಗಳ ಹರಡುವಿಕೆಯನ್ನು ವೇಗವಾಗಿಸಿತು. ಹೀಗಾಗಿ, ಬೋಧನೆ, ಕಲಿಕೆ, ತರಬೇತಿ, ಸಭೆಗಳು, ವೈದ್ಯಕೀಯ ಸಮಾಲೋಚನೆಗಳು, ಶೇರು ವ್ಯವಹಾರಗಳು, ಬಂಡವಾಳ ಹೂಡಿಕೆ, ಮನರಂಜನೆ ಮತ್ತಿತರ ಹಲವು ದೈನಂದಿನ ಚಟುವಟಿಕೆಗಳನ್ನು ಈಗ ಆನ್–ಲೈನಿನಲ್ಲಿ ಮಾಡಬಹುದು. ಇದು ಕೆಲಸದ ವಿಧಾನಗಳ ಮೇಲೆ ಬಹಳ ಪರಿಣಾಮ ಬೀರುತ್ತಿದೆ. ದುಡಿಯುವ ಪ್ರಕ್ರಿಯೆಯು ಪೂರ್ಣವಾಗಿ ಅಥವಾ ಭಾಗಶಃ ಆನ್–ಲೈನ್ ವೇದಿಕೆಗಳಿಗೆ ಬದಲಾಯಿಸಲ್ಪಟ್ಟಿದೆ. 'ಮನೆಯಿಂದಲೇ ಕೆಲಸ' ಅಥವಾ 'ಸ್ಥಳೀಯ ಕೇಂದ್ರಗಳಿಂದ ಕೆಲಸ' ಸಂಸ್ಕೃತಿಯು ವೇಗವಾಗಿ ಹರಡುತ್ತಿದೆ. ಕೆಲವು ವೀಕ್ಷಕರು ಹೇಳುವಂತೆ ಮಹಾಸೋಂಕಿನ ನಂತರ ಈ ವಿಧಾನಗಳನ್ನು ಹಿಂಪಡೆಯಲಾಗುವುದಿಲ್ಲ, ಬದಲಾಗಿ ಇನ್ನಷ್ಟು ಕೆಲಸಗಳು ಈ ವಿಧಾನಕ್ಕೆ ಸೇರ್ಪಡೆಯಾಗಬಹುದು. ಕೇರಳ ಬಜೆಟ್ ಈ ಸವಾಲನ್ನು ಒಂದು ಅವಕಾಶವಾಗಿ ಮಾರ್ಪಡಿಸಲು ಮುಂದಾಗಿದೆ. ವಿದ್ಯಾವಂತ ಯುವಜನತೆಯ ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸಲು ದುಡಿಮೆಯ ಹೊಸ ವಿಧಾನಗಳನ್ನು ಬಳಸಿಕೊಳ್ಳುವ ಉದೇಶವನ್ನು ಇದು ಹೊಂದಿದೆ. ರಾಜ್ಯವು ವಿದ್ಯಾವಂತ ಯುವ ಜನತೆಯ ಹೆಚ್ಚಿನ ಮಟ್ಟದ ನಿರುದ್ಯೋಗ ಪ್ರಮಾಣ ಮತ್ತು ಕೆಲಸದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯ ಕಡಿಮೆ ಪ್ರಮಾಣವನ್ನು ಹೊಂದಿದೆ. ಆನ್‌ಲೈನ್ ಸೇವಾ ಕ್ಷೇತ್ರಗಳನ್ನು ಬಳಸಿಕೊಂಡು ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸಬಹುದು.

ಈ ಯೋಜನೆ ಸಫಲವಾಗಬೇಕಿದ್ದಲ್ಲಿ ಮನೆಯಿಂದ ಅಥವಾ ಸ್ಥಳೀಯ ಕೇಂದ್ರಗಳಿಂದ ಕೆಲಸ ಮಾಡಲು ಅಗತ್ಯವಿರುವ ಸೌಲಭ್ಯಗಳು ಇರಬೇಕು. ಉಚಿತ ಮತ್ತು ಅನಿರ್ಬಂಧಿತ ನೆಟ್ ಸಂಪರ್ಕ, ಕಂಪ್ಯೂಟರ್‌ಗಳ ವಿತರಣೆ, ಸ್ಥಳೀಯ ಕೆಲಸದ ಕೇಂದ್ರಗಳ ಸುಧಾರಣೆ ಮತ್ತು ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಪ್ಯಾಕೇಜ್ ಅನ್ನು ಕೇರಳ ಬಜೆಟ್ ಘೋಷಿಸಿದೆ. ಅವಶ್ಯವಿರುವ ಕೌಶಲ್ಯದ ತರಬೇತಿ ಒದಗಿಸಲು ಸಹ ಬಜೆಟ್ ಕ್ರಮಗಳನ್ನು ಘೋಷಿಸಿದೆ. ಹಾಗೆಯೇ ಉದ್ಯೋಗದಾತರು ಮತ್ತು ಉದ್ಯೋಗ ಬಯಸುವವರ ನಡುವೆ ನಿರಂತರ ಮಾಹಿತಿ ಹರಿಯುವಂತೆ ಮಾಡಲು ಸಹ ಈ ಯೋಜನೆ ಮುಂದಾಗಿದೆ ಮತ್ತು ಇದಕ್ಕಾಗಿ ಉತ್ತಮ ಗುಣಮಟ್ಟದ ಸಾಂಸ್ಥಿಕ ವ್ಯವಸ್ಥೆಗಳನ್ನು ರೂಪಿಸಿದೆ. ಈ ಉದ್ದೇಶವು ದತ್ತಾಂಶ ದಾಖಲಿಸುವ ಆಪರೇಟರ್‌ಗಳಂತಹ ಕಡಿಮೆ ಆದಾಯದ ಮೌಲ್ಯ–ಸರಣಿಯಲ್ಲಿ (ವ್ಯಾಲ್ಯೂ ಚೈನ್) ಕೆಳಹಂತದಲ್ಲಿರುವ ಕೆಲಸದಲ್ಲಿ ಪರಿಣತಿ ನೀಡುವುದನ್ನು ಹೊಂದಿರದೆ, ಹೆಚ್ಚು ಆದಾಯ ನೀಡುವ ಮೌಲ್ಯ–ಸರಣಿಯಲ್ಲಿ ಮೇಲುಹಂತದಲ್ಲಿರುವ ಉದ್ಯೋಗಗಳು ವಿದ್ಯಾವಂತ ಯುವ ಜನತೆಗೆ ನಿಲುಕುವಂತಾಬೇಕು ಎಂಬ ಆಶಯ ಹೊಂದಿದೆ. ಇದಾಗಬೇಕಾದರೆ ಉದ್ಯೋಗಾಕಾಂಕ್ಷಿಗಳ ಅಥವಾ ಭಾಗವಹಿಸುವ ಉದ್ದಿಮೆಗಳ ಜ್ಞಾನ ಕೌಶಲ್ಯ ಮಟ್ಟವನ್ನು ಹೆಚ್ಚಿಸಬೇಕು. ಆದ್ದರಿಂದಲೇ ರಾಜ್ಯವನ್ನು ಒಂದು ಜ್ಞಾನ–ಆರ್ಥಿಕತೆಯ ರಾಜ್ಯವಾಗಿ ಪರಿವರ್ತಿಸುವ ತಂತ್ರವನ್ನು ಬಜೆಟ್ ರೂಪಿಸಿದೆ. ಜ್ಞಾನ–ಆರ್ಥಿಕತೆಯ ಸ್ಥಾಪನೆಯು ದೀರ್ಘ ಕಾಲೀನ ಪ್ರಕ್ರಿಯೆ ಹೊಂದಿದೆ ಎನ್ನುವುದು ನಿಜವೇ. ಈ ದಿಸೆಯಲ್ಲಿ 30 ಶ್ರೇಷ್ಠ ಕೇಂದ್ರಗಳ ಸ್ಥಾಪನೆ, ವಿಶ್ವವಿದ್ಯಾನಿಲಯಗಳಿಗೆ ನೀಡುವ ಸಂಪನ್ಮೂಲದಲ್ಲಿ ಹೆಚ್ಚಳ ಮತ್ತು ನೂರಾರು ಹೊಸ ಬೋಧನಾ ಸ್ಥಾನಗಳು ಮತ್ತು ಸಂಶೋಧನಾ ಫೆಲೋಶಿಪ್‌ಗಳನ್ನು ಸ್ಥಾಪಿಸುವ ನೀಲನಕ್ಷೆಯನ್ನು ಬಜೆಟ್ ಹೊಂದಿದೆ.

ಮತ್ತೊಂದು ಅಷ್ಟೇ ಮಹತ್ವದ ಯೋಜನೆಯಾಗಿ ಮರಳಿ ಬಂದ ವಲಸಿಗರಿಗೆ ಪುನರ್ ಸೌಲಭ್ಯ ಒದಗಿಸುವ ಘೋಷಣೆಯನ್ನು ಈ ಬಜೆಟ್ ಮಾಡಿದೆ. ಜಾಗತಿಕ ಹಿನ್ನಡೆತ ಮತ್ತು ಮಹಾಸೋಂಕುಗಳಿಂದಾಗಿ ವಲಸಿಗರ ವಾಪಸಾತಿಯಲ್ಲಿ ಹೆಚ್ಚಳವಾಗಿದ್ದು, ಸರಿಸುಮಾರು ನಾಲ್ಕು ಲಕ್ಷ ವಲಸಿಗರು ವಿದೇಶದ ತಮ್ಮ ಕೆಲಸಗಳನ್ನು ಕಳೆದುಕೊಂಡಿದ್ದಾರೆ. ಇವರು ಪುನರ್ವಸಿತರಾಗಬೇಕು. ದುರದೃಷ್ಟವೆಂದರೆ ನಮ್ಮ ದೇಶಕ್ಕೆ ಮೌಲ್ಯಯುತ ವಿದೇಶಿ ವಿನಿಮಯ ಗಳಿಸಿಕೊಟ್ಟಿದ್ದ ವಲಸಿಗ ಕಾರ್ಮಿಕರನ್ನು ಪುನರ್ವಸತಿಗೊಳ್ಳಬೇಕೆಂಬ ಅಗತ್ಯತೆಯನ್ನು ಕೇಂದ್ರ ಸರ್ಕಾರವು ಒಪ್ಪುತ್ತಲೇ ಇಲ್ಲ. ಅನಿವಾಸಿ ಭಾರತೀಯ ಕೆಲಸಗಾರರು ಹಣ ರವಾನಿಸುವ ಮೊತ್ತದ ದೇಶಗಳ ಪಟ್ಟಿಯಲ್ಲಿ ಭಾರತವು ವಿಶ್ವದಲ್ಲಿಯೇ ಪ್ರಥಮ ಸ್ಥಾನದಲ್ಲಿದೆ ಎನ್ನುವುದು ಗಮನಾರ್ಹ.


ಆದರೆ ಕೇರಳ ರಾಜ್ಯದ ಎಲ್.ಡಿ.ಎಫ್ ಸರ್ಕಾರವು ಕಾರ್ಮಿಕರ ಸಮಸ್ಯೆಗಳಿಗೆ ಕೇಂದ್ರ ಸರಕಾರದಂತಹ ವಿಮುಖ ಧೋರಣೆ ಹೊಂದಲಾಗುವುದಿಲ್ಲ. ಈ ನಿಟ್ಟಿನಲ್ಲಿ ಸ್ಥಳೀಯ ಸರ್ಕಾರಗಳು ಮತ್ತು ಸರ್ಕಾರಿ ಇಲಾಖೆಗಳನ್ನು ಒಳಗೊಂಡು ಒಂದು ಬೃಹತ್ ಪ್ರಮಾಣದ ಯೋಜನೆಯನ್ನು ಜಾರಿ ಮಾಡಲು ಮುಂದಾಗುತ್ತಿದೆ. ವಿವಿಧ ಏಜೆನ್ಸಿಗಳ ನಡುವೆ ಹೊಂದಾಣಿಕೆಗಾಗಿ ಬಜೆಟ್‌ನಲ್ಲಿ ರೂ. 100 ಕೋಟಿ ಎತ್ತಿಡಲಾಗಿದೆ. ಮರಳಿ ಬಂದ ವಲಸೆ ಕಾರ್ಮಿಕರಿಗೆ ವಿವಿಧ ವಿಭಾಗಗಳು ಮತ್ತು ಸ್ಥಳೀಯ ಸರ್ಕಾರಗಳು ನಡೆಸುವ ಹಲವು ಉದ್ಯೋಗ ಮತ್ತು ಉದ್ಯಮಶೀಲತೆಗೆ ಪ್ರೋತ್ಸಾಹ ನೀಡುವ ಯೋಜನೆಗಳ ನೆರವು ಪಡೆಯಲು ವಿಶೇಷ ಸಹಾಯ ಒದಗಿಸಲಾಗುತ್ತದೆ. ಬಜೆಟ್‌ನಲ್ಲಿ ಹೊಸದಾಗಿ ಘೋಷಿಸುವ ಆನ್‌ಲೈನ್ ಮತ್ತು ವರ್ಚುವಲ್ ಕ್ಷೇತ್ರದ ಉದ್ಯೋಗ ಯೋಜನೆಗಳನ್ನು ಸೇರುವಂತೆಯೂ ಇವರುಗಳಿಗೆ ಪ್ರೋತ್ಸಾಹಿಸಲಾಗುತ್ತದೆ.


ಮಹಾಸೋಂಕಿನ ಆರಂಭದ ದಿನಗಳಲ್ಲಿ ಆಹಾರ ದರಗಳ ಹೆಚ್ಚಳ ಮತ್ತು ಆಹಾರ–ವಾಣಿಜ್ಯ ಸರಣಿಗಳಲ್ಲಿ ವ್ಯತ್ಯಯದಿಂದಾಗಿ ಆಹಾರ ಕೊರತೆ ಉಂಟಾಗಬಹುದೆಂಬ ಮುಂದಾಲೋಚನೆಯಿಂದ 'ಸುಭಿಕ್ಷ ಕೇರಳಂ'ನ ಭಾಗವಾಗಿ ಆರಂಭಿಸಿದ್ದ 'ಹೆಚ್ಚು ಆಹಾರ ಬೆಳೆಯುವ ಯೋಜನೆ'ಯನ್ನು ಇನ್ನಷ್ಟು ಬಲಪಡಿಸಲು ಬಜೆಟ್ ಮುಂದಾಗಿದೆ. ಸ್ಥಳೀಯ ಸರ್ಕಾರಗಳು ಮತ್ತು ಯುವ ಜನಾಂಗದ ಪಾಲ್ಗೊಳ್ಳುವಿಕೆಯಿಂದಾಗಿ ಈ ಯೋಜನೆಯು ಹೆಚ್ಚಿಸುವುದು. ಜೊತೆಗೆ ಇವನ್ನು ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯೊಂದಿಗೆ ಜೋಡಿಸಬಹುದು.

ಕೇರಳ ರಾಜ್ಯವು ಉದ್ಯೋಗ ಯೋಜನೆಗಳ ಜಾರಿಯಲ್ಲಿ ಅತ್ಯದ್ಭುತ ಸಾಧನೆ ಮಾಡಿದೆ. ಮಹಾತ್ಮ ಅಯ್ಯಂಕಾಳಿ ಅವರ ಹೆಸರಿನಲ್ಲಿ ಸ್ಥಾಪಿಸಿರುವ ವಿಶಿಷ್ಟ ನಗರ ಉದ್ಯೋಗ ಯೋಜನೆಗೆ ನಿಗದಿಪಡಿಸಿರುವ ಮೊತ್ತವನ್ನು ಈ ಬಜೆಟ್ ಹೆಚ್ಚಿಸಿದೆ.

ವಿಶ್ವದಾದ್ಯಂತ ಈ ಮಹಾಸೋಂಕಿನಿಂದಾದ ಬಹಳ ಮಹತ್ವದ ದುಷ್ಪರಿಣಾಮವೆಂದರೆ ಅಸಮಾನತೆಯು ಇನ್ನಷ್ಟು ಕೆಟ್ಟದಾಗಿ ವಿಸ್ತರಿಸಿರುವುದು. ಕೋವಿಡ್–19 ವೈರಾಣುವಿಗಿಂತಲೂ ಕೆಟ್ಟ ಪರಿಣಾಮ ಈ ಅಸಮಾನತೆಯಿಂದಾಗಿದೆ ಎಂಬ ದಿಗಿಲು ಉಂಟಾಗಿದೆ. ಹೆಚ್ಚು ಉದ್ಯೋಗಾವಕಾಶಗಳನ್ನು, ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ, ಕಲ್ಪಿಸಲು ಒತ್ತು ನೀಡಿದಲ್ಲಿ ಅಸಮಾನತೆ ಮತ್ತು ಅವಕಾಶ ವಂಚನೆಯ ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯವಾಗಬಹುದು. ಸಾಮಾಜಿಕ ನ್ಯಾಯ ಮತ್ತು ಸಾಮಾಜಿಕ ಕಲ್ಯಾಣಗಳನ್ನು ಬಲಪಡಿಸುವ ಹಿನ್ನೆಲೆಯಲ್ಲಿ ಇದನ್ನು ಗಮನಿಸಬೇಕು. ಕೇರಳದ ಎಲ್.ಡಿ.ಎಫ್ ಸರ್ಕಾರಗಳು 1957 ರಿಂದಲೂ ಈ ಅಂಶಕ್ಕೆ ಒತ್ತು ಕೊಟ್ಟಿದ್ದು ಇದು ಎಲ್ಲರ ಗಮನ ಸೆಳೆದ ಪ್ರಮುಖ ಗುಣಲಕ್ಷಣವಾಗಿದೆ. ಸಾಮಾಜಿಕ ನ್ಯಾಯದ ಜಾಲವನ್ನು ವಿಸ್ತಾರಗೊಳಿಸಲು ಈ ಬಜೆಟ್ ವಿಶೇಷ ಶ್ರಮ ವಹಿಸಿದೆ. ಉದಾ: ಸುಮಾರು 60 ಲಕ್ಷ ಜನರಿಗೆ ನೆರವಾಗುವ ಕಲ್ಯಾಣ ಪಿಂಚಣಿಯನ್ನು ಪ್ರತಿ ತಿಂಗಳಿಗೆ ರೂ. 1600 ಕ್ಕೆ ಹೆಚ್ಚಿಸಿದೆ. ಆಶಾ ಕಾರ್ಯಕರ್ತೆಯರೂ ಅಂಗನವಾಡಿ ಸಹಾಯಕಿಯರು ಮತ್ತು ಶಿಕ್ಷಕರು, ಕುಟುಂಬಶ್ರೀ ಕಾರ್ಯಕರ್ತರು ಮುಂತಾದವರಿಗೆ ನೀಡುವ ಗೌರವ ಧನದಲ್ಲಿ ಗಣನೀಯ ಹೆಚ್ಚಳವನ್ನು ಬಜೆಟ್ ನೀಡಿದೆ.

ಕೇರಳ ರಾಜ್ಯವು ಪ್ರಜಾಸತ್ತಾತ್ಮಕ ವಿಕೇಂದ್ರೀಕರಣಕ್ಕೆ ತನ್ನ ಪುಟ 10 ಕ್ಕೆ







ಸಂಸತ್ತಿನಲ್ಲಿ ಪ್ರಧಾನಿ ಮಾಡಿದ ಒಂದೂವರೆ ಗಂಟೆಯ ದೀರ್ಘ ಭಾಷಣದಲ್ಲಿ ಎಂದಿನ ಟೊಳ್ಳು ದಾವೆಗಳು, ಅಸಂಬದ್ಧ ಹೇಳಿಕೆಗಳಲ್ಲದೆ ರೈತರನ್ನು, ಅವರನ್ನು ಬೆಂಬಲಿಸುತ್ತಿರುವವರನ್ನು 'ಆಂದೋಲನ ಜೀವಿಗಳು', 'ಪರಜೀವಿಗಳು' ಎಂದರು, 'ವಿದೇಶಿ ವಿಧ್ವಂಸಕಾರೀ ತತ್ವಸಿದ್ಧಾಂತ'ಗಳಿಗೆ ಬಲಿಯಾದವರು ಎಂದರು..

ನಮ್ಮ ಅನ್ನದಾತರಾಗಿರುವ ನಮ್ಮ ರೈತರಿಗೆ ಇದಕ್ಕಿಂತ ದೊಡ್ಡ ಅವಮಾನ ಇರಲಿಕ್ಕಿಲ್ಲ. ಅವರು ಉತ್ಪಾದಿಸುವ ಧಾನ್ಯಗಳನ್ನು ತಿಂದು ಪ್ರಧಾನ ಮಂತ್ರಿಗಳೂ ಸೇರಿದಂತೆ ನಾವೆಲ್ಲ ಬದುಕುತ್ತಿದ್ದೇವೆ. ಇಂತಹ ಅನ್ನದಾತರನ್ನು ಪ್ರಧಾನ ಮಂತ್ರಿಗಳು 'ಆಂದೋಲನ ಜೀವಿ'ಗಳು ಮತ್ತು 'ಪರಜೀವಿ'ಗಳು ಎಂದು ಹೆಸರಿಸುತ್ತಿದ್ದಾರೆ. ನಿಜವಾಗಿಯೂ 'ಪರಜೀವಿಗಳು ಅಥವ ಪರಾನ್ನ ಜೀವಿಗಳು ನಮ್ಮ ಅನ್ನದಾತರು ಬೆಳೆದು ಕೊಡುವ ಉತ್ಪನ್ನಗಳ ಮೇಲೆಯೇ ಬದುಕುತ್ತಿರುವವರು.

ಮೋದಿಯ ಸಂಸತ್ ಭಾಷಣ

ಹೋರಾಟದಲ್ಲಿರುವ ರೈತರ ವಿರುದ್ಧ ಪ್ರಧಾನಿಯ ಕಪಟಭರಿತ ಆರೋಪಣೆಗಳು

ಸೀತಾರಾಮ್ ಯೆಚುರಿ

ಸಂಸತ್ತಿನ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾಡಿದ ರಾಷ್ಟ್ರಪತಿಗಳ ಭಾಷಣಕ್ಕೆ ಧನ್ಯವಾದ ಠರಾವಿಗೆ ಉತ್ತರ ಕೊಡುತ್ತ ಪ್ರಧಾನಿ ಮಾಡಿದ ಒಂದೂವರೆ ಗಂಟೆಯ ದೀರ್ಘ ಭಾಷಣದಲ್ಲಿ ಬಹಳಷ್ಟು ಸಮಯವನ್ನು ಅವರು ರಾಷ್ಟ್ರಪತಿಗಳ ಭಾಷಣವನ್ನು ಹೊಗಳುತ್ತ ತನ್ನ ಮತ್ತು ತನ್ನ ಸರಕಾರದ ಬೆನ್ನನ್ನು ತಟ್ಟಿಕೊಳ್ಳುವದರಲ್ಲೇ ಕಳೆದರು. ನಿಜಸಂಗತಿಯೆಂದರೆ, ರಾಷ್ಟ್ರಪತಿಗಳ ಭಾಷಣ ಎಂಬುದು ಕೇಂದ್ರ ಸಂಪುಟ ಪ್ರಧಾನಿಯ ಅಧ್ಯಕ್ಷತೆಯಲ್ಲಿ ತಯಾರಿಸುವ ಭಾಷಣ. ಅದನ್ನು ರಾಷ್ಟ್ರಪತಿಗಳು ಓದಿ ಹೇಳುತ್ತಾರೆ. ಆದ್ದರಿಂದ ಮೋದಿಯವರು ತನ್ನ ಸಂಪುಟ ಬರೆದ ಭಾಷಣವನ್ನು ತಾನೇ ಹೊಗಳಿದ್ದಾರಷ್ಟೇ.

ಭಾರತ ಮಹಾಸೋಂಕನ್ನು ನಿಭಾಯಿಸಿದ ವೈಖರಿಯನ್ನು ಜಗತ್ತು ಮೆಚ್ಚಿಕೊಂಡಿದೆ ಎಂದು ಪ್ರಶಂಸಿಸುತ್ತ ಮೋದಿ ತನ್ನ ಸರಕಾರ ಕೊವಿಡ್ ಮಹಾಸೋಂಕನ್ನು ಮತ್ತು ಇದ್ದಕ್ಕಿದ್ದಂತೆ, ಯಾವುದೇ ಯೋಜನೆಯಿಲ್ಲದ, ಸಿದ್ಧತೆಯಿಲ್ಲದ ರಾಷ್ಟ್ರೀಯ ಲಾಕ್‌ಡೌನ್ ಹೇರಿದ ಸಂಕಟಗಳನ್ನು ಹೇಗೆ ನಿಭಾಯಿಸಿತು ಎಂಬ ಬಗ್ಗೆ ಒಂದು ವಿಮರ್ಶಾತ್ಮಕ ಕಣ್ನೋಟ ಬೀರಲು ನಿರಾಕರಿಸಿದರು. ಈ ಲಾಕ್‌ಡೌನ್ ಅದಾಗಲೇ ವೇಗವಾಗಿ ಏರುತ್ತಿದ್ದ ನಿರುದ್ಯೋಗದೊಂದಿಗೆ ಮುಳುಗಲಾರಂಭಿಸಿದ್ದ ಭಾರತೀಯ ಅರ್ಥವ್ಯವಸ್ಥೆಯನ್ನು ಧ್ವಂಸ ಮಾಡಿತು. ಇದರೊಂದಿಗೇ ಹಸಿವು ಮತ್ತು ಅಪೌಷ್ಟಿಕತೆ, ನಿರ್ದಿಷ್ಟವಾಗಿ ನಮ್ಮ ಮಕ್ಕಳು ಮತ್ತು ಅವರ ತಾಯಂದಿರದ್ದು, ಬೆಳೆದಿದೆ. ಭಾರತ ಜಗತ್ತಿನಲ್ಲೇ ಎರಡನೇ ಅತಿ ಹೆಚ್ಚು ಕೊವಿಡ್ ಸೋಂಕಿತರನ್ನು ಹೊಂದಿದೆ, 1.5ಲಕ್ಷ ಜನ ಸತ್ತಿದ್ದಾರೆ. ಅದೇ ರೀತಿಯಲ್ಲಿ ಲಕ್ಷಾಂತರ ವಲಸೆ ಕಾರ್ಮಿಕರ ಬಗ್ಗೆ ಒಂದಾದರೂ ಉಲ್ಲೇಖವಿಲ್ಲ.

ಪ್ರಧಾನಿಗಳ ಪ್ರತಿಯೊಂದು ದಾವೆಯನ್ನೂ ಸರಿಯಾದ್ದಲ್ಲ ಎಂದು ನಿರಾಕರಿಸಬಹುದು ಮತ್ತು ಟೊಳ್ಳು ಎಂದು ತೋರಿಸಬಹುದು. ಆದರೆ ಅವರು ಮಾತಾಡಿದ ಹಲವಾರು ವಿಷಯಗಳಲ್ಲಿ, ಕೆಲವು ಪ್ರಶ್ನೆಗಳನ್ನು ಕೇಳಬೇಕಾಗುತ್ತದೆ.

'ಆಂದೋಲನ ಜೀವಿಗಳು'...

ನಮ್ಮ ರೈತರ ಹೋರಾಟದ ಬಗ್ಗೆ ಮಾತಾಡುತ್ತ , ತನ್ನ ಸರಕಾರದ ಕಳೆದ ಆರು ವರ್ಷಗಳಲ್ಲಿ ಭಾರತೀಯ ಕೃಷಿಗೆ ಮತ್ತು ರೈತರಿಗೆ ಹೆಚ್ಚಿನ ಪ್ರಯೋಜನಗಳನ್ನು ಕೊಡಲಾಗಿದೆ ಎಂದು ಅವರು ಹೇಳಿದರು. ಈ ಹೋರಾಟದಲ್ಲಿ 200ಕ್ಕೂ ಹೆಚ್ಚು ರೈತರು ಪ್ರಾಣ ಕಳಕೊಂಡಿರುವ ಬಗ್ಗೆ ಯಾವುದೇ ಪರಿತಾಪವನ್ನು ವ್ಯಕ್ತಪಡಿಸಲು ಅವರು ನಿರಾಕರಿಸಿದರು.

ತದ್ವಿರುದ್ಧವಾಗಿ, ಈ ಐತಿಹಾಸಿಕ ಹೋರಾಟದಲ್ಲಿರುವವರ ವಿರುದ್ಧ 'ಆಂದೋಲನ ಜೀವಿ'ಗಳೆಂಬ ಹಣೆಪಟ್ಟಿ ಹಚ್ಚಿ ಆರೋಪಣೆಗಳನ್ನು ಎಸೆದರು. ಪ್ರತಿಭಟನಾಕಾರರು 'ಪರಜೀವಿಗಳು' ಎಂಬ ವಿಧಕ್ಕೆ ಸೇರಿದವರು ಎನ್ನುವ ವರೆಗೂ ಹೋದರು.

ಭಾರತ ಸ್ವತಂತ್ರವಾದದ್ದು ಜನಗಳ(ಆಂದೋಲನ ಜೀವಿಗಳ) ಒಂದು ಮಹಾನ್ ಸ್ವಾತಂತ್ರ್ಯ ಹೋರಾಟದ ಮೂಲಕ. ಈ ಹೋರಾಟದಿಂದಲೇ , 'ನಾವು, ಜನತೆ' ನಮ್ಮ ಸಂವಿಧಾನವನ್ನು ಅಂಗೀಕರಿಸಿ ನಮಗೆ ಒಂದು ಜಾತ್ಯತೀತ, ಪ್ರಜಾಸತ್ತಾತ್ಮಕ ಗಣರಾಜ್ಯವನ್ನು ಮತ್ತು ಒಂದು ಸಂಸದೀಯ ಪ್ರಜಾಪ್ರಭುತ್ವವನ್ನು ಕೊಟ್ಟುಕೊಂಡಿದ್ದೇವೆ. ಇದರಿಂದಾಗಿಯೇ ಮೋದಿಯವರು ಇಂದು ಭಾರತದ ಪ್ರಧಾನ ಮಂತ್ರಿಯಾಗಿದ್ದಾರೆ.

ಈ ಸ್ವಾತಂತ್ರ್ಯ ಹೋರಾಟದಲ್ಲಿ ಲಕ್ಷಾಂತರ ಮಂದಿ ಹುತಾತ್ಮರಾಗಿದ್ದಾರೆ. ಆದರೆ ಆರೆಸ್ಸೆಸ್/ಬಿಜೆಪಿ ಪರಿವಾರದಿಂದ ಒಬ್ಬರನ್ನಾದರೂ ದೇಶದ ಸ್ವಾತಂತ್ರ್ಯಕ್ಕಾಗಿ ಮತ್ತು ಆಧುನಿಕ ಭಾರತದ ಅಭಿವೃದ್ಧಿಗಾಗಿ ತಮ್ಮ ಪ್ರಾಣತ್ಯಾಗ ಮಾಡಿದವರ ಸಾಲಿನಲ್ಲಿ ಗಣಿಸಲು ಸಾಧ್ಯವಿಲ್ಲ. ಆರೆಸ್ಸೆಸ್ ರಾಷ್ಟ್ರೀಯ ಆಂದೋಲನದಿಂದ ದೂರವೇ ನಿಂತಿತ್ತು, ಕೆಲವೊಂದು ಸಂದರ್ಭಗಳಲ್ಲಿ ಬ್ರಿಟಿಶರೊಂದಿಗೆ ಶಾಮೀಲು ಕೂಡ ಆಯಿತು ಎಂಬುದೊಂದು ಸಾಬೀತಾಗಿರುವ ಸತ್ಯ ಸಂಗತಿ. ಬಿಜೆಪಿ ಹರಿಯಬಿಟ್ಟ ಪ್ರತಿಭಟನಾ ಆಂದೋಲನಗಳಿಂದಾಗಿ ಭಾರತದ ಪ್ರಧಾನ ಮಂತ್ರಿಯ ಸ್ಥಾನಕ್ಕೇರಿರುವ ಒಬ್ಬ ವ್ಯಕ್ತಿ ಹೀಗೆ ಹೇಳುವುದು ಪ್ರತಿಭಟನಾಕಾರರನ್ನು 'ಆಂದೋಲನ ಜೀವಿ'ಗಳೆಂದು ಛೀಮಾರಿ ಹಾಕುವುದು ಒಂದು ಉದ್ದೇಶಪೂರ್ವಕ ನಡೆಯಾಗಿದೆ. ಇದು ಪೂರ್ತಿಯಾಗಿ ನಮ್ಮ ಜನತೆಯನ್ನು ಅರಾಜಕೀಯಕರಣಗೊಳಿಸುವ, ಈ ಮೂಲಕ, ಆರೆಸ್ಸೆಸ್‌ನ ಕಥನವನ್ನು, ಒಂದು ಉನ್ಮತ್ತ ಅಸಹಿಷ್ಣು ಫ್ಯಾಸಿಸ್ಟ್ ತೆರನ 'ಹಿಂದೂರಾಷ್ಟ್ರ'ವನ್ನು ಯಾವುದೇ ಪ್ರತಿಭಟನೆಯಿಲ್ಲದೆ ಸ್ಥಾಪಿಸುವ ಪ್ರಯತ್ನವಾಗಿದೆ.

ಪ್ರತಿಭಟನೆಗಳಲ್ಲಿ ಎರಡು ವಿಧಗಳಿವೆ. ಒಂದು, ಭಾರತವನ್ನು, ಜನಗಳ ಬದುಕುಗಳನ್ನು ಮತ್ತು ಜೀವನಾಧಾರಗಳನ್ನು ಉತ್ತಮಗೊಳಿಸಲಿಕ್ಕಾಗಿ ಬದಲಿಸಿದ ಪ್ರತಿಭಟನೆಗಳು ಮತ್ತು ಹೋರಾಟಗಳು. ಇಂತಹ ಸಕಾರಾತ್ಮಕ ಹೋರಾಟಗಳು ಇಂದು ಕೂಡ ಭಾರತೀಯ ಸಂವಿಧಾನದ ರಕ್ಷಣೆಗೆ ಎದ್ದು ನಿಂತು, ನಮ್ಮ ಸಂವಿಧಾನಿಕ ವ್ಯವಸ್ಥೆಯನ್ನು ಮತ್ತು ಅದರ ಸಂಸ್ಥೆಗಳನ್ನು ನಾಶಪಡಿಸುವ ಈ ಸರಕಾರದ ಪ್ರಯತ್ನಗಳನ್ನು ಪ್ರತಿಭಟಿಸುವಲ್ಲಿ ಕೊಡುಗೆ ನೀಡುತ್ತಿವೆ.

....ಮತ್ತು 'ಪರಜೀವಿಗಳು'

ಪ್ರತಿಭಟನಾಕಾರರ ಇನ್ನೊಂದು ವಿಧವೆಂದರೆ, ದ್ವೇಷ ಮತ್ತು ಹಿಂಸಾಚಾರವನ್ನು ಹರಡಿಸಲು ಹಾಗೂ ನಮ್ಮ ಸಮಾಜವನ್ನು ಅಸ್ಥಿರಗೊಳಿಸಲು ನಮ್ಮ ಜನಗಳನ್ನು ಒಡೆಯುವ ವಿಷಯಗಳನ್ನು ಎತ್ತುವವರದ್ದು. ಉದಾಹರಣೆಗೆ, 1990ರ ದಶಕದಲ್ಲಿ ಬಿಜೆಪಿಯ 'ರಥಯಾತ್ರೆ' ತಾನು ಹೋದೆಡೆಗಳಲ್ಲೆಲ್ಲಾ ರಕ್ತಪಾತ ಮತ್ತು ಕೋಮುಗಲಭೆಗಳ ಜಾಡನ್ನೇ ಬಿಡುತ್ತ ಹೋಯಿತು. ಇದರಲ್ಲಿ ಸಾವಿರಾರು ಮಂದಿ ಪ್ರಾಣ ಕಳಕೊಂಡರು. ಅಂತಿಮವಾಗಿ ಇದು ಬಾಬ್ರಿ ಮಸೀದಿಯ ಧ್ವಂಸಕ್ಕೆ, ಭಾರತದ ಜಾತ್ಯತೀತ ಪ್ರಜಾಪ್ರಭುತ್ವದ ಬುನಾದಿಗೆ ಒಂದು ಕಪ್ಪು ಚುಕ್ಕೆ ಹಚ್ಚುವುದಕ್ಕೆ ದಾರಿ ಮಾಡಿ ಕೊಟ್ಟಿತು. ಈ ಹಲವಾರು ದಶಕಗಳಲ್ಲಿ ನಡೆದ ವಿಭಿನ್ನ ಕೋಮುಗಲಭೆಗಳನ್ನು ಕುರಿತ ನ್ಯಾಯಾಂಗ ತನಿಖಾ ಸಮಿತಿಗಳ ಪ್ರತಿಯೊಂದು ವರದಿಯೂ ಕೋಮುಗಲಭೆಗಳನ್ನು ಪ್ರಚೋದಿಸುವಲ್ಲಿ, ಆ ಮೂಲಕ ಭೀಷಣ ಕೋಮುಗಲಭೆಗಳಲ್ಲಿ ಪ್ರಾಣಹಾನಿಗಳೆಲ್ಲದರಲ್ಲೂ ಆರೆಸ್ಸೆಸ್‌ನ ಪಾತ್ರದತ್ತವೇ ಬೊಟ್ಟು ಮಾಡಿ ತೋರಿಸಿದೆ. ಈ ವಿಧದ 'ಆಂದೋಲನ ಜೀವಿ'ಗಳ ಬಗ್ಗೆಯೇ ದೇಶ ಮತ್ತು ಜನತೆ ಎಚ್ಚರದಿಂದಿರಬೇಕು.

ಲಕ್ಷಾಂತರ ರೈತರು, ಕಾರ್ಮಿಕರು, ದುಡಿಯುವ ಜನಗಳು, ವಿದ್ಯಾರ್ಥಿಗಳು, ಯುವಜನರು,

ಪುಟ 10 ನೋಡಿ




ಆರೆಸ್ಸೆಸ್ ರಾಷ್ಟ್ರೀಯ ಆಂದೋಲನದಿಂದ ದೂರವೇ ನಿಂತಿತ್ತು, ಕೆಲವೊಂದು ಸಂದರ್ಭಗಳಲ್ಲಿ ಬ್ರಿಟಿಶರೊಂದಿಗೆ ಶಾಮೀಲು ಕೂಡ ಆಯಿತು ಎಂಬುದೊಂದು ಸಾಬೀತಾಗಿರುವ ಸತ್ಯ ಸಂಗತಿ. ಬಿಜೆಪಿ ಹರಿಯಬಿಟ್ಟ ಪ್ರತಿಭಟನಾ ಆಂದೋಲನಗಳಿಂದಾಗಿ ಭಾರತದ ಪ್ರಧಾನ ಮಂತ್ರಿಯ ಸ್ಥಾನಕ್ಕೇರಿರುವ ಒಬ್ಬ ವ್ಯಕ್ತಿ ಹೀಗೆ ಹೇಳುವುದು ಪ್ರತಿಭಟನಾಕಾರರನ್ನು 'ಆಂದೋಲನ ಜೀವಿ'ಗಳೆಂದು ಛೀಮಾರಿ ಹಾಕುವುದು ಒಂದು ಉದ್ದೇಶಪೂರ್ವಕ ನಡೆಯಾಗಿದೆ.

ಆಂದೋಲನ ಜೀವಿಗಳು ಹಾ....ಹಾ....
ಕೃಪೆ: @ಪೆನ್ಸಿಲಾಶನ್

ಈ ಕಾಯ್ದೆಗಳನ್ನು ಪ್ರತಿಪಾದಿಸುವವರು ಮತ್ತು ಬೆಂಬಲಿಸುವವರು ಭಾರತೀಯ ಕೃಷಿಯನ್ನು, ನಮ್ಮ ಉತ್ಪನ್ನಗಳು ಮತ್ತು ನಮ್ಮ ಮಾರುಕಟ್ಟೆಗಳನ್ನು ಕಾರ್ಪೊರೇಟ್‌ಗಳು ತಮ್ಮ ಸುಲಿಗೆಕೋರ ಗರಿಷ್ಟ ಲಾಭ ಗಳಿಕೆಗಾಗಿ ಲೂಟಿ ಹೊಡೆಯಲು ಅನುಕೂಲ ಮಾಡಿಕೊಡುವವರು. ಈ ಕಾರ್ಪೊರೇಟ್‌ಗಳು ಯಾರು ಎಂಬುದನ್ನೂ ನಮ್ಮ ಅನ್ನದಾತರು ನಿಸ್ಸಂದಿಗ್ಧವಾಗಿ ಗುರುತಿಸಿದ್ದಾರೆ.

ವ್ಯಂಗ್ಯಚಿತ್ರ ಕೃಪೆ: ಪಿ.ಮಹಮ್ಮದ್



ಪುಟ 9 ರಿಂದ

ಪ್ರಧಾನಿಯ ಕಪಟಭರಿತ ಆರೋಪಣೆಗಳು

ಮಹಿಳೆಯರು, ದಲಿತರು, ಆದಿವಾಸಿಗಳು ಇಂದು ಈ ಸರಕಾರದ ಅಡಿಯಲ್ಲಿ ದೇಶವನ್ನು ಬಿಗಿದಿರುವ ಅತ್ಯಾಚಾರಗಳ ಹೆಚ್ಚಳದ ವಿರುದ್ಧ ಮತ್ತು ಸಂವಿಧಾನ ಖಾತ್ರಿಪಡಿಸಿರುವ ಹಕ್ಕುಗಳ ಹನನದ ವಿರುದ್ಧ ಹೋರಾಟಗಳ ದಾರಿಯಲ್ಲಿದ್ದಾರೆ. ಇದಕ್ಕೆ ಬಿಜೆಪಿ ಸರಕಾರದ ಉತ್ತರ ಕೋಮು ಧ್ರುವೀಕರಣವನ್ನು ಮತ್ತಷ್ಟು ತೀಕ್ಷ್ಣಗೊಳಿಸುವುದು, ಜನಗಳನ್ನು ಒಡೆಯುವುದು, ಕರಾಳ ಶಾಸನಗಳ ಅಡಿಯಲ್ಲಿ ಮಾನವ ಹಕ್ಕುಗಳು ಮತ್ತು ನಾಗರಿಕ ಸ್ವಾತಂತ್ರ್ಯಗಳ ಹೋರಾಟಗಾರರನ್ನು ಬಂಧಿಸುವುದು, ಜೈಲಿಗಟ್ಟುವುದು. ಪ್ರಜಾಪ್ರಭುತ್ವವನ್ನು ವೇಗವಾಗಿ ಜನಗಳ ಹಕ್ಕುಗಳ ಧ್ವಂಸಕ್ರಿಯೆಯಾಗಿ ಮತ್ತು ಫ್ಯಾಸಿಸ್ಟ್ ತೆರನ ಅಸಹಿಷ್ಣುತೆ ಮತ್ತು ಹಿಂಸಾಚಾರದ ಪ್ರದರ್ಶನವಾಗಿ ಮಾರ್ಪಡಿಸಲಾಗುತ್ತಿದೆ.

ನಮ್ಮ ಸಂವಿಧಾನವನ್ನು, ಪ್ರಜಾಪ್ರಭುತ್ವ ಮತ್ತು ಜನಗಳ ಹಕ್ಕುಗಳನ್ನು ಧ್ವಂಸ ಮಾಡುವ ಪ್ರಯತ್ನದಿಂದ ನಡೆಸುವ ಹೋರಾಟಗಳ ಅಲೆಗಳ ಬೆನ್ನೇರಿ ಅಧಿಕಾರ ಗಳಿಸಿದ ಮಂದಿಯೇ ದೇಶವನ್ನು ಮತ್ತು ಜನಗಳ ಹಕ್ಕುಗಳನ್ನು ನುಂಗಿ ನೀರು ಕುಡಿಯುತ್ತಿರುವ ಪರಾನ್ನಜೀವಿಗಳು. ದೇಶ ಮತ್ತು ಜನತೆ ಇಂತಹ ಮಂದಿಗಳ ಬಗ್ಗೆಯೇ ಎಚ್ಚರದಿಂದಿರಬೇಕಾಗಿದೆ.

ವಿದೇಶಿ ವಿಧ್ವಂಸಕಾರೀ ತತ್ವಸಿದ್ಧಾಂತ

ನಮ್ಮ ಸಂವಿಧಾನಿಕ ವ್ಯವಸ್ಥೆಯ ರಕ್ಷಣೆಯ ಜನತ ಹೋರಾಟಗಳ ಹಿಂದೆ "ವಿದೇಶಿ ಕೈ"ಗಳಿವೆ ಎಂದು ಆಪಾದಿಸುವ ಭಾರತೀಯ ಆಳುವ ವರ್ಗಗಳ ಚಾಳಿಯಂತೆ, ಪ್ರಧಾನಿ ಮೋದಿ ಈ ಐತಿಹಾಸಿಕ ಹೋರಾಟಗಳನ್ನು, ಮುಖ್ಯವಾಗಿ ರೈತ ಹೋರಾಟವನ್ನು, ವಿದೇಶಿ ವಿಧ್ವಂಸಕಾರೀ ತತ್ವಸಿದ್ಧಾಂತದ(ಅವರ' ಎಫ್.ಡಿ.ಐ.ಯ) ಉತ್ಪನ್ನಗಳು ಎಂದು ವರ್ಣಿಸುವ ಮಟ್ಟಕ್ಕೆ ಹೋಗಿದ್ದಾರೆ. ನಮ್ಮ ಸಂವಿಧಾನ, ಪ್ರಜಾಪ್ರಭುತ್ವ, ನಮ್ಮ ಸಂಸ್ಥೆಗಳು ಮತ್ತು ತಮ್ಮ ಸ್ವಂತ ಹಕ್ಕುಗಳ ರಕ್ಷಣೆಗೆ ಜನಗಳು ಎದ್ದು ನಿಲ್ಲುವುದರಲ್ಲಿ 'ವಿದೇಶಿ'ಯೆಂಬುದು ಏನೂ ಇಲ್ಲ. ಬಹುಶಃ ಪ್ರಧಾನಿಗಳು ಈ ರೈತ ಹೋರಾಟವನ್ನು ಈ ಸರಕಾರ ದಮನ ಮಾಡುತ್ತಿರುವ ವೈಖರಿಯ ವಿರುದ್ಧ ವ್ಯಕ್ತವಾಗುತ್ತಿರುವ ಅಂತರ್ರಾಷ್ಟ್ರೀಯ ಆಕ್ರೋಶದ ಬಗ್ಗೆ ಹೀಗೆ ಹೇಳುತ್ತಿರಬಹುದು. ನಮ್ಮ ಅನ್ನದಾತರಾಗಿರುವ ನಮ್ಮ ರೈತರಿಗೆ ಇದಕ್ಕಿಂತ ದೊಡ್ಡ ಅವಮಾನ ಇರಲಿಕ್ಕಿಲ್ಲ. ಅವರು ಉತ್ಪಾದಿಸುವ ಧಾನ್ಯಗಳನ್ನು ತಿಂದು ಪ್ರಧಾನ ಮಂತ್ರಿಗಳೂ ಸೇರಿದಂತೆ ನಾವೆಲ್ಲ ಬದುಕುತ್ತಿದ್ದೇವೆ. ಇಂತಹ ಅನ್ನದಾತರನ್ನು ಪ್ರಧಾನ ಮಂತ್ರಿಗಳು 'ಆಂದೋಲನ ಜೀವಿ'ಗಳು ಮತ್ತು 'ಪರಜೀವಿ'ಗಳು ಎಂದು ಹೆಸರಿಸುತ್ತಿದ್ದಾರೆ. ನಿಜವಾಗಿಯೂ 'ಪರಜೀವಿಗಳು ಅಥವ ಪರಾನ್ನ ಜೀವಿಗಳು ನಮ್ಮ ಅನ್ನದಾತರು ಬೆಳೆದು ಕೊಡುವ ಉತ್ಪನ್ನಗಳ ಮೇಲೆಯೇ ಬದುಕುತ್ತಿರುವವರು.

ಟೊಳ್ಳು ದಾವೆಗಳು

ಮೋದಿ ಕಳೆದ ಆರು ವರ್ಷಗಳ ತನ್ನ ನಾಯಕತ್ವದ ಅಡಿಯಲ್ಲಿ ಭಾರತೀಯ ಕೃಷಿ ಮತ್ತು ನಮ್ಮ ರೈತರ ಗಳಿಕೆಗಳು ಅಭೂತಪೂರ್ವ ಎಂದು ಹೇಳಿಕೊಂಡಿದ್ದಾರೆ. ಚರಣ ಸಿಂಗ್ ರವರನ್ನು ಉಲ್ಲೇಖಿಸುತ್ತ, ಅವರ ಅಂದಾಜಿನಂತೆ 51ಶೇ. ದಷ್ಟಿದ್ದ(ಈಗ ಅದು 70ಶೇ. ದಾಟಿದೆ ಎಂಬುದು ಮೋದಿಯ ದಾವೆ) ಸಣ್ಣ ಮತ್ತು ಅಂಚಿನಲ್ಲಿರುವ ರೈತರ ಬದುಕುಗಳನ್ನು ಉತ್ತಮಪಡಿಸಲು ನೆರವಾಗುವಲ್ಲಿ ತನ್ನ ಸರಕಾರ ಬಹಳಷ್ಟು ಕ್ರಮಗಳನ್ನು ಕೈಗೊಂಡಿರುವುದಾಗಿ ಪ್ರಧಾನಿಗಳು ಹೇಳಿದರು. ತನ್ನ ಧೋರಣೆಗಳು ಈ ವಿಭಾಗದ ಮೇಲೆ ಗುರಿಯಿಟ್ಟು ಅವರ ಬದುಕನ್ನು ಉತ್ತಮಪಡಿಸಿವೆ ಎಂಬುದು ಅವರ ದಾವೆ.

ಗ್ರಾಮೀಣ ಭಾರತದ ಈ ವಿಭಾಗದ ಬದುಕುಗಳನ್ನು ಉತ್ತಮಪಡಿಸಲೆಂದೇ ಎಡಪಂಥೀಯರು ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ರೂಪಿಸಬೇಕು ಎಂದು ಆಗ್ರಹಿಸಿದ್ದು ಮತ್ತು ಅಂತಿಮವಾಗಿ ಯುಪಿಎ ಸರಕಾರ ಅದನ್ನು ಜಾರಿ ಮಾಡುವಂತಾದ್ದು.ಸೀ ಯೋಜನೆಯನ್ನು ಮೋದಿ ಪ್ರತಿಪಕ್ಷದಲ್ಲಿದ್ದಾಗ ಅಪಹಾಸ್ಯಮಾಡುತ್ತಿದ್ದರು ಮತ್ತು ಕಳೆದ ಆರು ವರ್ಷಗಳಲ್ಲಿ ವ್ಯವಸ್ಥಿತವಾಗಿ ಕಡಿತಗೊಳಿಸುತ್ತ ಬಂದಿದ್ದಾರೆ.

ಕಳೆದ ಆರು ವರ್ಷಗಳಲ್ಲಿ ರೈತರ ಆತ್ಮಹತ್ಯೆಗಳು ಎಗ್ಗಿಲ್ಲದೆ ಮುಂದುವರೆಯುತ್ತಿವೆ. ಹಸಿರು ಕ್ರಾಂತಿಯಿಂದ ಬಹಳಷ್ಟು ಗಳಿಸಿರುವ ಅತ್ಯಂತ ಹೆಚ್ಚು ಸಮೃದ್ಧವಾಗಿರುವ ಪಂಜಾಬಿನಲ್ಲಿ ಕೂಡ ಎನ್.ಎಸ್.ಎಸ್. ದತ್ತಾಂಶಗಳ ಪ್ರಕಾರ ಒಂದು ಬೇಸಾಯ ಕುಟುಂಬದ ಸರಾಸರಿ ತಿಂಗಳ ಆದಾಯ ರೂ.18,059, ತಲಾ ಆದಾಯ ರೂ.3,450. ಹರ್ಯಾಣದಲ್ಲಿ ಇದು ಅನುಕ್ರಮವಾಗಿ ರೂ. 14,434 ಮತ್ತು ರೂ. 2,450.

ನಾವು ಈ ಐತಿಕಾಸಿಕ ರೈತ ಹೋರಾಟದಲ್ಲಿ ಈ ಮೂರು ಕೃಷಿ ಕಾಯ್ದೆಗಳ ವಿರುದ್ಧ ಸಮಸ್ತ ರೈತಾಪಿಗಳು ಒಂದಾಗಿರುವುದನ್ನು ನೋಡುತ್ತಿದ್ದೇವೆ. ಇವನ್ನು ರದ್ದು ಮಾಡಬೇಕು ಎನ್ನುವುದು ಮೂಲಭೂತ ಬೇಡಿಕೆ.

ಇದ್ಯಾವ ವಿಧದ ಕೃಷಿ ಸುಧಾರಣೆಗಳು?

ಪ್ರತಿಪಕ್ಷಗಳೆಲ್ಲವೂ ಕೃಷಿ ಸುಧಾರಣೆಗಳನ್ನು ಬಯಸುತ್ತವೆ, ಆದರೆ ತನ್ನ ಸರಕಾರ ಇದನ್ನು ತಂದಿರುವುದಕ್ಕಾಗಿಯೇ ಅವನ್ನು ವಿರೋಧಿಸುತ್ತಿವೆ ಎಂದು ಪ್ರಧಾನ ಮಂತ್ರಿಗಳು ಆರೋಪಿಸಿದ್ದಾರೆ. ಇದಕ್ಕಿಂತ ಸತ್ಯದೂರವಾದ ಮಾತು ಬೇರೆ ಇರಲಾರದು.

ಆದರೆ ಯಾವ ವಿಧದ ಸುಧಾರಣೆಗಳು? ಸಿಪಿಐ(ಎಂ) ಭಾರತೀಯ ಕೃಷಿಯನ್ನು ಬಲಪಡಿಸುವ, ದೇಶದಲ್ಲಿ ಆಹಾರ ಭದ್ರತೆಯನ್ನು ಖಾತ್ರಿಪಡಿಸುವ ಮತ್ತು ರೈತರಿಗೆ ಒಂದು ಪ್ರತಿಫಲದಾಯಕ ಬೆಲೆಯನ್ನು ಕೊಡುತ್ತಲೇ ಜನಗಳಿಗೆ ಕೈಗೆಟಕುವ ವೆಚ್ಚದಲ್ಲಿ ಆಹಾರವನ್ನು ಒದಗಿಸುವ ಸುಧಾರಣೆಗಳನ್ನು ತರಬೇಕು ಎಂದು ಆಗ್ರಹಿಸುತ್ತ ಬಂದಿದೆ.

ತದ್ವಿರುದ್ಧವಾಗಿ, ಈಗ ತಂದಿರುವ ಕೃಷಿ ಕಾಯ್ದೆಗಳು ಭಾರತೀಯ ಕೃಷಿಯನ್ನು ಧ್ವಂಸ ಮಾಡುತ್ತವೆ, ನಮ್ಮ ರೈತರನ್ನು ದೇಶಿ ಮತ್ತು ವಿದೇಶಿ ಕಾರ್ಪೊರೇಟ್‌ಗಳ ಮರ್ಜಿಗೆ ಒಳಪಡಿಸುತ್ತವೆ, ಮತ್ತು ಆಹಾರ ಭದ್ರತೆಗೆ ಗಂಡಾಂತರ ತರುತ್ತವೆ. ಆದ್ದರಿಂದಲೇ ಈ ಮೂರು ಕಾಯ್ದೆಗಳಿಗೆ ಈ ವಿರೋಧ. ಇದನ್ನು ಸಿಪಿಐ(ಎಂ) ಸಂಸತ್ತಿನಲ್ಲೂ, ಹೊರಗೂ ದಾಖಲಿಸಿದೆ.

ಕನಿಷ್ಟ ಬೆಂಬಲ ಬೆಲೆ

"ಎಂಎಸ್‌ಪಿ ಇದೆ, ಎಂಎಸ್‌ಪಿ ಇತ್ತು, ಎಂಎಸ್‌ಪಿ ಇರುತ್ತದೆ" ಎಂದು ಪ್ರಧಾನ ಮಂತ್ರಿಗಳು ಹೇಳಿದರು. ಇದಕ್ಕೆ ಮೊದಲು ಅವರು ಸ್ವಾಮಿನಾಥನ್ ಆಯೋಗದ ಶಿಫಾರಸುಗಳನ್ನು ಜಾರಿಗೆ ತಂದ ಮೊದಲ ಸರಕಾರ ತಮ್ಮದು ಎಂದು ಹೇಳಿಕೊಂಡಿದ್ದರು. ಇಲ್ಲಿಯೂ ಸತ್ಯದೂರವಾದದ್ದು ಬೇರೆ ಇರಲಿಕ್ಕಿಲ್ಲ.

ಸ್ವಾಮಿನಾಥನ್ ಆಯೋಗ ಸಿ2+50% ಎಂಎಸ್‌ಪಿಯನ್ನು ಶಿಫಾರಸು ಮಾಡಿತ್ತು. ಈ ಸರಕಾರ ಕೊಡುತ್ತಿರುವುದು ಹೆಚ್ಚೆಂದರೆ, ಎ2+50% ಮಾತ್ರ. ಈ ಎರಡರ ನಡುವಣ ವ್ಯತ್ಯಾಸ ಗಮನಾರ್ಹವಾಗಿದೆ. ಎ2 ವಾಸ್ತವಿಕವಾಗಿ ತೆತ್ತ ವೆಚ್ಚವಾದರೆ, ಸಿ2 ನಲ್ಲಿ ಸ್ವಂತ ಜಮೀನಿನ ಬಾಡಿಗೆ ಮೌಲ್ಯ ಮತ್ತು ಸ್ವಂತ ಸ್ಥಿರ ಬಂಡವಾಳ ಆಸ್ತಿಗಳ ಮೌಲ್ಯದ ಮೇಲಿನ ಬಡ್ಡಿ ಸೇರಿರುತ್ತದೆ. ಹೀಗೆ, ಕೇಂದ್ರ ಸರಕಾರ ಸ್ವಾಮಿನಾಥನ್ ಆಯೋಗದ ಇತರ ಎಲ್ಲ ಸಲಹೆಗಳನ್ನು ಉಪೇಕ್ಷಿಸಿದೆ ಮಾತ್ರವಲ್ಲ, ಎಂಎಸ್‌ಪಿ ಕುರಿತ ಶಿಫಾರಸನ್ನು ಕೂಡ ನಿರಾಕರಣೆ ಮಾಡಿದೆ.

ಸಿಪಿಐ(ಎಂ)ನ 2019ರ ಚುನಾವಣಾ ಪ್ರಣಾಳಿಕೆಯಲ್ಲಿ 'ಕೃಷಿ ಸುಧಾರಣೆಗಳು' ಎಂಬ ವಿಭಾಗವಿತ್ತು. ಅದರಲ್ಲಿ ಮೊದಲ ಅಂಶವೆಂದರೆ, ಎಲ್ಲ ರೈತರಿಗೆ ಕನಿಷ್ಟ ಬೆಂಬಲ ಬೆಲೆಗಳಲ್ಲಿ ಮಾರುವ ಕಾನೂನಾತ್ಮಕ ಹಕ್ಕು ಬೇಕೆಂಬ ಆಗ್ರಹ. ಕನಿಷ್ಟ 2017ರಿಂದಲೇ ಸಿಪಿಐ(ಎಂ) ಸದಸ್ಯರು ಸಂಸತ್ತಿನಲ್ಲಿ ಈ ಆಗ್ರಹವನ್ನು ಎತ್ತುತ್ತ ಬಂದಿದ್ದಾರೆ. ಆದರೆ ಇದುವರೆಗೂ ಕೇಂದ್ರ ಸರಕಾರ ಇಂತಹುದೊಂದು ಕಾಯ್ದೆಯನ್ನು ರೂಪಿಸಿಲ್ಲ. ಪ್ರಸ್ತುತ ಎಂಎಸ್‌ಪಿ ಕೇವಲ 6 ಶೇಕಡಾ ರೈತರಿಗೆ ಮಾತ್ರ ಸಿಗುತ್ತಿದೆ. ಅಲ್ಲದೆ, ದಕ್ಷ ಸಂಗ್ರಹ ವ್ಯವಸ್ಥೆ ಇಲ್ಲದ ಎಂಎಸ್‌ಪಿ ಕೂಡ ಅರ್ಥಹೀನ. ಆದ್ದರಿಂದ ಸಾರ್ವಜನಿಕ ಮತ್ತು ಖಾಸಗಿ ಖರೀದಿ ವ್ಯವಸ್ಥೆಯನ್ನು ದೇಶಾದ್ಯಂತ ಸಾರ್ವತ್ರಿಕಗೊಳಿಸಬೇಕು.

ಪ್ರಚಂಡ ದಾವೆಗಳ ಚಾಳಿ

ಎಂದಿನ ತನ್ನ ಚಾಳಿಯಂತೆ, ಪ್ರಧಾನಿಗಳು ಕೆಲವು ಪ್ರಚಂಡ ಹುಸಿದಾವೆಗಳನ್ನು ಮಾಡಿದ್ದಾರೆ. ಪಶ್ಚಿಮ ಬಂಗಾಲದ ಚುನಾವಣೆಗಳ ಮೇಲೆ ಕಣ್ಣಿಟ್ಟು ಅವರು "ಭಾರತ ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ಮಾತ್ರವೇ ಅಲ್ಲ, ಪ್ರಜಾಪ್ರಭುತ್ವದ ಮಾತೆ" ಎಂದು ನೇತಾಜಿ ಸುಭಾಷ್ ಚಂದ್ರ ಬೋಸ್ ರವರು ಹೇಳಿದ್ದರು ಎಂದರು. ಭಾರತೀಯ ಸಂವಿಧಾನದ ಅಡಿಯಲ್ಲಿ ನಾವು ಬಳಸುವ ಅರ್ಥದಲ್ಲಿ ಪ್ರಜಾಪ್ರಭುತ್ವವನ್ನು ಸ್ಥಾಪಿಸಿದ್ದು 1950ರಲ್ಲಷ್ಟೇ ಮತ್ತು ಮೊದಲ ಸಾರ್ವತ್ರಿಕ ಚುನಾವಣೆಗಳು ನಡೆದದ್ದು 1952ರಲ್ಲಿ. ಭಾರತದ ಸಂಸದೀಯ ಪ್ರಜಾಪ್ರಭುತ್ವದ ಆಧುನಿಕ ಜಾತ್ಯತೀತ ಪ್ರಜಾಸತ್ತಾತ್ಮಕ ವ್ಯವಸ್ಥೆ ಸ್ಥಾಪನೆಯಾಗುವ ಮೊದಲು ನೇತಾಜಿಯವರು ಈ ಬಗ್ಗೆ ಇಂತದ್ದೇನಾದರೂ ಹೇಳಿರುವ ಸಾಧ್ಯತೆ ಬಹುಮಟ್ಟಿಗೆ ಇಲ್ಲ. ಇದೇ ರೀತಿ, ಹಸಿರು ಕ್ರಾಂತಿಯನ್ನು ಪ್ರಧಾನಿ ಲಾಲ್ ಬಹಾದ್ದುರ್ ಶಾಸ್ತ್ರಿಯವರು ಆರಂಭಿಸಿದ್ದು ಎಂದರು. ಅದು ನಡೆದದ್ದು 1966ರಲ್ಲಿ ಪ್ರಧಾನಿ ಇಂದಿರಾ ಗಾಂಧಿಯವರ ಅಡಿಯಲ್ಲಿ. ಈ ಹಿಂದಿನಂತೆ, ತಾನು ಏನು ಬೇಕಾದರೂ, ಅಸಂಬದ್ಧವಾದುದನ್ನಾದರೂ ಹೇಳಿದರೂ ನಡೆಯುತ್ತದೆ ಎಂಬ ಆತ್ಮವಿಶ್ವಾಸ ಪ್ರಧಾನಿ ಮೋದಿಗೆ ಇದ್ದಂತಿದೆ.

ಈ ಕೃಷಿ ಕಾಯ್ದೆಗಳ ವಿರುದ್ಧ ಪ್ರತಿಭಟನೆಗಳಲ್ಲಿ ಏನೂ ಹುರುಳಿಲ್ಲ, ಪ್ರತಿಯೊಬ್ಬರೂ ಪ್ರತಿಭಟನೆಗಳ ಬಗ್ಗೆ ಮಾತಾಡುತ್ತಾರೆ, ಆ ಪ್ರತಿಭಟನೆಗಳ ಹಿಂದಿರುವ ಕಾರಣಗಳ ಬಗೆಗೆ ಅಲ್ಲ ಎನ್ನುತ್ತಾರೆ ಪ್ರಧಾನಿಗಳು. ಪ್ರತಿಭಟನೆಗಳ ಹಿಂದಿರುವ ಕಾರಣಗಳು ಸ್ವಯಂವೇದ್ಯ, ಇವನ್ನು ಪ್ರಧಾನಿಗೆ ಮತ್ತು ಅವರ ಸರಕಾರಕ್ಕೆ ಅದೆಷ್ಟೋ ಬಾರಿ ತಿಳಿಸಿ ಸುಸ್ತಾಗಿದೆ. ಈ ಕೃಷಿ ಕಾಯ್ದೆಗಳ ಪರಿಣಾಮಗಳನ್ನು ಎಳೆಎಳೆಯಾಗಿ ವಿಶ್ಲೇಷಿಸಲಾಗಿದೆ, ಅವೆಲ್ಲವೂ ಸಾರ್ವಜನಿಕರ ಮುಂದಿವೆ.

ಈ ಕೃಷಿ ಕಾಯ್ದೆಗಳನ್ನು ವಿರೋಧಿಸುವವರು ಭಾರತೀಯ ಕೃಷಿಯ ಮತ್ತು ಅನ್ನದಾತರಾದ ರೈತರ ಸಮೃದ್ಧಿಯನ್ನು ಎತ್ತಿ ಹಿಡಿಯುವವರು. ಈ ಕಾಯ್ದೆಗಳನ್ನು ಪ್ರತಿಪಾದಿಸುವವರು ಮತ್ತು ಬೆಂಬಲಿಸುವವರು ಭಾರತೀಯ ಕೃಷಿಯನ್ನು, ನಮ್ಮ ಉತ್ಪನ್ನಗಳು ಮತ್ತು ನಮ್ಮ ಮಾರುಕಟ್ಟೆಗಳನ್ನು ಕಾರ್ಪೊರೇಟ್‌ಗಳು ತಮ್ಮ ಸುಲಿಗೆಕೋರ ಗರಿಷ್ಟ ಲಾಭ ಗಳಿಕೆಗಾಗಿ ಲೂಟಿ ಹೊಡೆಯಲು ಅನುಕೂಲ ಮಾಡಿಕೊಡುವವರು.

ಈ ಕಾರ್ಪೊರೇಟ್‌ಗಳು ಯಾರು ಎಂಬುದನ್ನೂ ನಮ್ಮ ಅನ್ನದಾತರು ನಿಸ್ಸಂದಿಗ್ಧವಾಗಿ ಗುರುತಿಸಿದ್ದಾರೆ. ಹೀಗೆ ಈ ಐತಿಹಾಸಿಕ ಪ್ರತಿಭಟನೆಗಳಿಗೆ ಕಾರಣಗಳು ಸ್ವಯಂವೇದ್ಯ– ಭಾರತೀಯ ಕೃಷಿಯನ್ನು, ಭಾರತೀಯ ಜನತೆಯನ್ನು ಮತ್ತು ಭಾರತದ ಆಹಾರ ಭದ್ರತೆಯನ್ನು ಉಳಿಸುವುದು.

ಈ ಮೂರು ಕಾಯ್ದೆಗಳನ್ನು ರದ್ದು ಮಾಡಬೇಕು. ತದನಂತರ ಸರಕಾರ ಕೃಷಿ ಸುಧಾರಣೆಗಳನ್ನು ನಮ್ಮ ರೈತರು, ತಮ್ಮ ಕಾರ್ಪೊರೇಟ್ ಬಂಟರು ಮತ್ತು ಇತರ ಎಲ್ಲ ಭಾಗೀದಾರರೊಂದಿಗೆ ಚರ್ಚಿಸಬೇಕು ಹಾಗೂ ಹೊಸ ಪ್ರಸ್ತಾವಗಳೇನಾದರೂ ಇದ್ದರೆ, ಅವುಗಳನ್ನು ಸಂಸತ್ತಿನ ಮುಂದೆ ತಪಾಸಣೆ ಮತ್ತು ಚರ್ಚೆಗಳಿಗೆ ತರಬೇಕು ಮತ್ತು ನಂತರವೇ ಶಾಸನವನ್ನು ತರಬೇಕು. ಇದೀಗ ಅತ್ಯಂತ ವಿವೇಚನಾಪೂರ್ಣ ಪ್ರಸ್ತಾವನೆ. ಪ್ರಧಾನಿ ಮೋದಿ ತನ್ನ ಮೊಂಡುತನವನ್ನು ಬಿಡಬೇಕು ಮತ್ತು ಈ ಕಾಯ್ದೆಗಳನ್ನು ರದ್ದು ಮಾಡಬೇಕು.

ಈ ಕೃಷಿ ಕಾಯ್ದೆಗಳ ವಿರುದ್ಧ ಪ್ರತಿಭಟನೆಗಳಲ್ಲಿ ಏನೂ ಹುರುಳಿಲ್ಲ, ಪ್ರತಿಯೊಬ್ಬರೂ ಪ್ರತಿಭಟನೆಗಳ ಬಗ್ಗೆ ಮಾತಾಡುತ್ತಾರೆ, ಆ ಪ್ರತಿಭಟನೆಗಳ ಹಿಂದಿರುವ ಕಾರಣಗಳ ಬಗೆಗೆ ಅಲ್ಲ ಎನ್ನುತ್ತಾರೆ ಪ್ರಧಾನಿಗಳು. ಪ್ರತಿಭಟನೆಗಳ ಹಿಂದಿರುವ ಕಾರಣಗಳು ಸ್ವಯಂವೇದ್ಯ, ಇವನ್ನು ಪ್ರಧಾನಿಗೆ ಮತ್ತು ಅವರ ಸರಕಾರಕ್ಕೆ ಅದೆಷ್ಟೋ ಬಾರಿ ತಿಳಿಸಿ ಸುಸ್ತಾಗಿದೆ. ಈ ಕೃಷಿ ಕಾಯ್ದೆಗಳ ಪರಿಣಾಮಗಳನ್ನು ಎಳೆಎಳೆಯಾಗಿ ವಿಶ್ಲೇಷಿಸಲಾಗಿದೆ, ಅವೆಲ್ಲವೂ ಸಾರ್ವಜನಿಕರ ಮುಂದಿವೆ.

ಕೇರಳ ಬಜೆಟ್: 'ನವ ಸಹಜತೆ' ಗೆ.......

ಪುಟ 8 ರಿಂದ

ಬದ್ಧತೆಯನ್ನು ಎಂದಿನಿಂದಲೂ ಪ್ರತಿಪಾದಿಸುತ್ತಾ ಬಂದಿದೆ. ಇತ್ತೀಚೆಗೆ ಸ್ಥಳೀಯ ಸರ್ಕಾರಗಳಿಗೆ ನಡೆದ ಚುನಾವಣೆಗಳಲ್ಲಿ ಇದು ಪ್ರತಿಫಲನಗೊಂಡಿದೆ. ಹಿಂದಿನ ಸ್ಥಳೀಯ ಆಡಳಿತಗಳಿಗೆ ಚುನಾವಣಾ ತೀರ್ಪು ನೀಡಿದ ಗೆಲುವು ಸ್ಥಳೀಯ ಮಟ್ಟದಲ್ಲಿ ನಡೆಸುತ್ತಿರುವ ಉತ್ತಮ ಕೆಲಸಕ್ಕೆ ನೀಡಿರುವ ಮನ್ನಣೆಯಾಗಿದೆ. ರಾಜ್ಯ ಸರ್ಕಾರವು ಆರನೇ ರಾಜ್ಯ ಹಣಕಾಸು ಆಯೋಗ ನೀಡಿರುವ ಶಿಫಾರಸ್ಸನ್ನು ಇತ್ತೀಚೆಗೆ ಅಂಗೀಕರಿಸಿದೆ. ಹಾಗೂ ಸ್ಥಳೀಯ ಸರ್ಕಾರಗಳಿಗೆ ನಿಗದಿಪಡಿಸುವ ಯೋಜನಾ ಮತ್ತು ಯೋಜನಾ ರಹಿತ ಹಂಚಿಕೆಯನ್ನು ಗಣನೀಯವಾಗಿ ಹೆಚ್ಚಿಸಿದೆ.

ಕೇರಳದ ರಾಜ್ಯದ ಆರೋಗ್ಯ ವ್ಯವಸ್ಥೆ(ಆರ್ದ್ರಂ), ಶಿಕ್ಷಣ (ಪೊತುವಿದ್ಯಾಭ್ಯಾಸ ಯುಜ್ಞಂ), ಬಡವರಿಗೆ ವಸತಿ **(LIFE)** ಮತ್ತು ಪರಿಸರ ಹಾಗೂ ತ್ಯಾಜ್ಯ ನಿರ್ವಹಣೆ (ಹರಿತ ಕೇರಳಂ) ಕ್ಷೇತ್ರಗಳಲ್ಲಿ 'ನವಕೇರಳ ಮಿಷನ್' ಗಳನ್ನು ಮುಂದುವರೆಸುವ ಮತ್ತು ಬಲಪಡಿಸುವ ರಾಜ್ಯ ಸರ್ಕಾರದ ಬದ್ಧತೆಯನ್ನು ಸಹ ಬಜೆಟ್ ವ್ಯಕ್ತಪಡಿಸುತ್ತದೆ. ಸ್ವಾರಸ್ಯವೆಂದರೆ ತಾವು ಈ ಮಿಷನ್ ಕಾರ್ಯಕ್ರಮಗಳನ್ನು ರದ್ದು ಮಾಡುತ್ತೇವೆ ಎಂದು ಘೋಷಿಸಿದ್ದ ಯುಡಿಎಫ್ ನಾಯಕತ್ವವು ಸ್ಥಳೀಯ ಸರ್ಕಾರಗಳ ಚುನಾವಣೆಗಳ ನಂತರ ಈ ರೀತಿಯ ಹೇಳಿಕೆಗಳನ್ನು ಹಿಂಪಡೆಯಬೇಕಾಯಿತು. ಹಾಗೆಯೇ, ರಾಜ್ಯದ ಬೃಹತ್ ಮಟ್ಟದ ಮೂಲಭೂತ ಸೌಕರ್ಯ ಅಭಿವೃದ್ಧಿ ಯೋಜನೆಯ ಕುರಿತು ತಾವು ನೀಡಿದ್ದ ವಿರೋಧದ ಹೇಳಿಕೆಗಳನ್ನು ಸಹ ಯುಡಿಎಫ್ ಹಿಂಪಡೆಯಬೇಕಾಯಿತು. ಕೇರಳ ಮೂಲಭೂತ ಸೌಕರ್ಯ ಹೂಡಿಕೆ ನಿಧಿ ನಿಗಮ (KIIFB)ದ ಸಹಾಯದೊಂದಿಗೆ ಪ್ರಾರಂಭಿಸಿದ ಈ ಯೋಜನೆ ಉತ್ತಮ ಬೆಳವಣಿಗೆ ತೋರಿಸುತ್ತಿದೆ. ಮೇಲಾಗಿ, ಸಾರ್ವಜನಿಕ ಅಭಿಪ್ರಾಯವು KIIFB ಹಾಗೂ ಅಭಿವೃದ್ಧಿ ಮಿಷನ್‌ಗಳ ಪರವಾಗಿಯೇ ಇದೆ. ನವ ಉದಾರವಾದಿ ಗೊಡ್ಡುಧೋರಣೆಗಳನ್ನು ಎದುರಿಸಲು ಈ ಯೋಜನೆಗಳು ಹಲವು ವಿಶಿಷ್ಟ ವಿಧಾನಗಳನ್ನು ಹೊಂದಿವೆ. ಮಾರುಕಟ್ಟೆ ಮೂಲಭೂತವಾದಿಗಳು ಸಣ್ಣ ಸರ್ಕಾರಗಳು ಮತ್ತು ಕನಿಷ್ಟ ಸಾರ್ವಜನಿಕ ಕಾರ್ಯಾಚರಣೆಯ ಪರವಾಗಿವೆ. ಆದರೆ ಇದಕ್ಕೆ ವಿರುದ್ಧವಾದ ಮಾರ್ಗದಲ್ಲಿ ಮುನ್ನಡೆಯಲು ಬದ್ಧವಾಗಿರುವ ಎಲ್.ಡಿ.ಎಫ್ ಸರ್ಕಾರವು ಅಗತ್ಯವಿದ್ದಾಗಲೆಲ್ಲ ಸಾರ್ವಜನಿಕ ಕ್ರಮ ಕೈಗೊಳ್ಳುತ್ತದೆ.

ಕೇರಳದ ಇತ್ತೀಚಿನ ಬಜೆಟ್ ಮಹಾಸೋಂಕಿನ ನಂತರದ ಜಗತ್ತಿನ ನವ ಸಹಜತೆ ಒಡ್ಡಿರುವ ಸವಾಲುಗಳನ್ನು ಎದುರಿಸಲು ಎಡ ಪರ್ಯಾಯವನ್ನು ವಿಸ್ತರಿಸುವ ಒಂದು ಪ್ರಯತ್ನವಾಗಿದೆ.

ಭಾರತದ ಪ್ರಥಮ ಕೇಂದ್ರ ಕಾರ್ಮಿಕ ಸಂಘಟನೆಯ ಸ್ಥಾಪನೆ

ಭಾರತದ ಕಾರ್ಮಿಕ ಆಂದೋಲನ -ಶತಮಾನದ ನೋಟ-13



ಐ.ಎಲ್.ಒ. ನಲ್ಲಿನ ಪ್ರಾತಿನಿಧ್ಯದ ಪ್ರಶ್ನೆಯು 1920ರಲ್ಲಿ ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ ಸ್ಥಾಪನೆಗೆ ತಕ್ಷಣದ ಪ್ರಚೋದನೆಯಾಗಿರಬಹುದು, ಆದರೆ ಆಳವಾಗಿ ಪರಿಶೀಲಿಸಿದಾಗ, ಭಾರತದ ಕಾರ್ಮಿಕ ವರ್ಗದ ಈ ಮೊದಲ ಕೇಂದ್ರ ಸಂಘಟನೆಯ ಜನನ ಒಂದು ಐತಿಹಾಸಿಕ ಅವಶ್ಯಕತೆಯಾಗಿತ್ತು ಎಂದು ಗಮನಕ್ಕೆ ಬರುತ್ತದೆ. ಮೊದಲ ಮಹಯುದ್ಧಾನಂತರದ ಅವಧಿಯಲ್ಲಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸ್ಥರದಲ್ಲಿ ಸಾಮ್ರಾಜ್ಯಶಾಹಿ ಮತ್ತು ಬಂಡವಾಳಶಾಹಿ ಶೋಷಣೆಯ ವಿರುದ್ಧ ಭಾರತದ ಕಾರ್ಮಿಕ ವರ್ಗವು ನಡೆಸಿದ ವರ್ಗ ಹೋರಾಟದ ಅಭೂತಪೂರ್ವ ಆಯಾಮವು ಕಾರ್ಮಿಕರ ವರ್ಗರಾಜಕೀಯ ಪ್ರಜ್ಞೆಯ ದೃಷ್ಟಿಕೋನದಲ್ಲಿ ಹೆಚ್ಚು ಮಹತ್ವವನ್ನು ಹೊಂದಿದೆ. ಆದ್ದರಿಂದ ಭಾರತದ ಶ್ರಮಜೀವಿಗಳ ಕೇಂದ್ರ ವರ್ಗ ಸಂಘಟನೆಯ ಜನನವು ರಾಷ್ಟ್ರೀಯ–ರಾಜಕೀಯ ಜಾಗೃತಿ ಮತ್ತು ವಿಶ್ವವನ್ನೇ ಅಲುಗಾಡಿಸಿದ ಘಟನೆಗಳ ಹಿನ್ನೆಲೆಯ ಅನುರೂಪ ಕ್ಷಣದಲ್ಲಿ ಸಂಭವಿಸಿತು.

ಮೂಲ ಲೇಖಕರು: **ಸುಕೋಮಲ್ ಸೆನ್** ಸಂಗ್ರಹ-ಅನುವಾದ: ಸಿ.ಆರ್. ಶಾನಭಾಗ

ರಾಷ್ಟ್ರೀಯ ಮಟ್ಟದಲ್ಲಿ ಭಾರತದ ಕಾರ್ಮಿಕ ವರ್ಗದ ಮೊದಲ ಸಂಘಟನೆಯಾದ ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್, ಯುದ್ಧದ ಮತ್ತು ವಿಶೇಷವಾಗಿ ಅಕ್ಟೋಬರ್ ಸಮಾಜವಾದಿ ಕ್ರಾಂತಿಯ ನಂತರದ ಅವಧಿಯಲ್ಲಿ ಭಾರಿ ಪ್ರಮಾಣದ ಕಾರ್ಮಿಕ–ವರ್ಗದ ಮತ್ತು ಜನತೆಯ ಹೋರಾಟದ ಹಿನ್ನೆಲೆಯಲ್ಲಿ ಜನಿಸಿತು.

ಪ್ರಥಮ ಮಹಾಯುದ್ಧದ ಮೂಲಕ, ಭಾರತದ ರಾಷ್ಟ್ರೀಯ ಬೂರ್ಜ್ವಾ ವರ್ಗ ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಮೊದಲಿಗಿಂತ ಬಲವಾದ ಶಕ್ತಿಯಾಗಿ ಹೊರಹೊಮ್ಮಿತು. ಯುದ್ಧದ ಅಂತ್ಯ, ಅಕ್ಟೋಬರ್ ಕ್ರಾಂತಿಯ ಯಶಸ್ಸು ಮತ್ತು ಬಂಡವಾಳಶಾಹಿಯ ಮೊದಲ ಸಾರ್ವತ್ರಿಕ ಬಿಕ್ಕಟ್ಟಿನ ನೋಟವು ಭಾರತದಲ್ಲಿ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟಕ್ಕೆ ಹೊಸ ಶಕ್ತಿ ಮತ್ತು ಸ್ಫೂರ್ತಿಯನ್ನು ನೀಡಿತು. ಈ ಪರಿಸ್ಥಿತಿಯು ಭಾರತದ ರಾಷ್ಟ್ರೀಯ ವಿಮೋಚನೆಗೆ ಹೊಸ ಭರವಸೆಗಳು ಮತ್ತು ಸಾಧ್ಯತೆಗಳನ್ನು ತೆರೆಯಿತು. ಈ ಉದ್ದೇಶವನ್ನು ಸಾಧಿಸಲು ಬೆಳೆದು ಬರುತ್ತಿದ್ದ ದೂರಗಾಮಿ ಹೋರಾಟದಲ್ಲಿ ಭಾರತದ ಕಾರ್ಮಿಕ ವರ್ಗವೂ ತನ್ನದೇ ಆದ ಸ್ಥಾನವನ್ನು ಪಡೆದುಕೊಳ್ಳುವಲ್ಲಿ ಹಿಂದೆ ಬೀಳಲಿಲ್ಲ. ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ 1920 ರಲ್ಲಿ ಸಾಮ್ರಾಜ್ಯಶಾಹಿ ಪ್ರಾಬಲ್ಯ ಮತ್ತು ಬಂಡವಾಳದ ಆಳ್ವಿಕೆಯ ವಿರುದ್ಧ ತಮ್ಮ ಹೋರಾಟವನ್ನು ನಡೆಸಲು ಭಾರತದ ಶ್ರಮಜೀವಿಗಳ ಒಂದು ಐಕ್ಯ ವೇದಿಕೆಯಾಗಿ ಹೊರಹೊಮ್ಮಿತು.

ಮುಂಬಯಿಯ ಕಾರ್ಮಿಕರೊಂದಿಗೆ ಈಗಾಗಲೇ ಸಂಪರ್ಕ ಹೊಂದಿದ್ದ ಬಾಲ ಗಂಗಾಧರ ತಿಳಕರು ಇಂಗ್ಲೆಂಡಿನಲ್ಲಿದ್ದಾಗ ಹೆಚ್ಚು ವಿಶಾಲವಾದ ದೃಷ್ಟಿಕೋನವನ್ನು ಪಡೆದರು. ಅಲ್ಲಿ ಅವರಿಗೆ ಬ್ರಿಟಿಶ್ ಟ್ರೇಡ್ ಯೂನಿಯನ್ ಕಾಂಗ್ರೆಸ್ ಮತ್ತು ಲೇಬರ್ ಪಾರ್ಟಿಯೊಂದಿಗೆ ಪರಿಚಯವಾಯಿತು ಮತ್ತು ಅವರು ವಿವಿಧ ಕಾರ್ಮಿಕ ಸಂಘಗಳ ಚಟುವಟಿಕೆಗಳನ್ನು ಗಮನಿಸಿದರು. ಬ್ರಿಟಿಶ್ ಕಾರ್ಮಿಕ ಚಳವಳಿಯಿಂದ ಪ್ರಭಾವಿತರಾದ ಅವರು ಭಾರತದಲ್ಲಿ ಇದೇ ರೀತಿಯ ಸಂಘಟನೆ ಮತ್ತು ಚಳುವಳಿಯನ್ನು ನಿರ್ಮಿಸುವ ಅವಶ್ಯಕತೆಯಿದೆ ಎಂದು ಭಾವಿಸಿದರು. ಈ ಹೊಸ ಭಾವನೆಯಿಂದ ಹೊರಹೊಮ್ಮಿದ ಅವರ ಚಟುವಟಿಕೆಗಳು ಮತ್ತು ಮುಂಬಯಿಯ ಕಾರ್ಮಿಕರ ನಡುವೆ ಅವರ ಜನಪ್ರಿಯತೆಯು ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್‌ಗೆ ಅಡಿಪಾಯ ಹಾಕುವಲ್ಲಿ ಅನುಕೂಲಕರ ಪಾತ್ರ ವಹಿಸಿದವು.

ಯುದ್ಧದ ನಂತರ ವಿಶೇಷವಾಗಿ ಯುರೋಪಿನಲ್ಲಿನ ಕಾರ್ಮಿಕ ವರ್ಗದ ಚಳವಳಿಯ ಉಬ್ಬರವನ್ನು, ವರ್ಸೈಲ್ಸ್‌ನ ಒಪ್ಪಂದಕ್ಕೆ, ಸಂಪೂರ್ಣವಾಗಿ ನಿರ್ಲಕ್ಷಿಸಲಾಗಲಿಲ್ಲ, ಬದಲಾಗಿ ಅದನ್ನು ಗುರುತಿಸಲೇ ಬೇಕಾಯಿತು. ಕಾರ್ಮಿಕ ಸಂಘಗಳು ಅಭೂತಪೂರ್ವ ಸಂಖ್ಯೆಯಲ್ಲಿ ಸದಸ್ಯತ್ವವನ್ನು ಪಡೆದುಕೊಂಡವು; ಈ ಚಳವಳಿಯ ವಿಸ್ತಾರವನ್ನು ಸಾಮಾಜಿಕ ಮತ್ತು ರಾಜಕೀಯ ಅಂಶವಾಗಿ ಪರಿಗಣಿಸ ಬೇಕಾಗಿ ಬಂದಿತ್ತು. ಆದ್ದರಿಂದ ಸದಸ್ಯ ರಾಷ್ಟ್ರಗಳ ಸಾಮಾಜಿಕ ಮತ್ತು ರಾಜಕೀಯ ಜೀವನದಲ್ಲಿ ಕಾರ್ಮಿಕ ಸಂಘಗಳ ಮಹತ್ವವನ್ನು ಗುರುತಿಸಿ, ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆ(ಐ.ಎಲ್.ಒ.)ಯನ್ನು 1919 ರಲ್ಲಿ ಲೀಗ್ ಆಫ್ ನೇಶನ್ಸ್‌ನ ಅಂಗಸಂಸ್ಥೆಯಾಗಿ ಸ್ಥಾಪಿಸಲಾಯಿತು. ಐ.ಎಲ್.ಒ. ತ್ರಿಪಕ್ಷೀಯ ಸಂಸ್ಥೆಯಾಗಿದ್ದು, ಸದಸ್ಯ ರಾಷ್ಟ್ರಗಳ ಪ್ರತಿನಿಧಿಗಳನ್ನು ಹೊಂದಿತ್ತು. ಅವರು ಕಾರ್ಮಿಕ ಸಮಸ್ಯೆಗಳನ್ನು ಚರ್ಚಿಸಲು ಭೇಟಿಯಾಗಿ ಕಾರ್ಮಿಕರ ಸಾಮಾಜಿಕ ಸುಧಾರಣೆಗಳು ಮತ್ತು ಶಾಸನಗಳ ಬಗ್ಗೆ ಚರ್ಚಿಸಿದರು. ಐ.ಎಲ್.ಒ. ಚಾರ್ಟರ್ ಮಾನವೀಯತೆ ಮತ್ತು ಸಾಮಾಜಿಕ ನ್ಯಾಯದ ತತ್ವಗಳನ್ನು ಆಧರಿಸಿದೆ. ಇದು ಕಾರ್ಮಿಕರಿಗಾಗಿ ಸಾಮಾಜಿಕ ಸುಧಾರಣೆಗಳನ್ನು ಚರ್ಚಿಸಬಹುದು ಮತ್ತು ಶಿಫಾರಸು ಮಾಡಬಹುದು, ಆದರೆ ಸದಸ್ಯ ರಾಷ್ಟ್ರಗಳು ಅದರ ಅನುಷ್ಠಾನವನ್ನು ಮಾಡುವಂತೆ ನೋಡಿಕೊಳ್ಳಲು ಯಾವುದೇ ಕಾರ್ಯನಿರ್ವಾಹಕ ಅಧಿಕಾರವನ್ನು ಹೊಂದಿರಲಿಲ್ಲ. ಅಸ್ತಿತ್ವದಲ್ಲಿರುವ ಶಾಸನಗಳನ್ನು ಅನುಷ್ಠಾನಗೊಳಿಸುವುದೇ ದೊಡ್ಡ ಸಮಸ್ಯೆಯಾಗಿದ್ದ ಭಾರತದಂತಹ ದೇಶಗಳ ವಿಷಯದಲ್ಲಿ, ಐ.ಎಲ್.ಒ. ಒಡಂಬಡಿಕೆಗಳನ್ನು ಅಂಗೀಕರಿಸುವುದು ಮತ್ತು ಕಾರ್ಮಿಕರ ಪರವಾಗಿ ಅನ್ವಯಿಸುವ ಪ್ರಶ್ನೆಯು ದೂರದ ಮಾತೇ ಆಗಿತ್ತು. ವಸಾಹತುಶಾಹಿ ಆಳ್ವಿಕೆಯಲ್ಲಿ ಭಾರತದ ಕೈಗಾರಿಕೀಕರಣದ ಬಗ್ಗೆ ಉತ್ಪ್ರೇಕ್ಷಿತ ದೃಷ್ಟಿಕೋನವನ್ನು ಪ್ರಸ್ತುತಪಡಿಸುವ ಉದ್ದೇಶದಿಂದ, ಬ್ರಿಟಿಶ್ ಸರ್ಕಾರವು ಭಾರತವನ್ನು ಐ.ಎಲ್.ಒ. ಸ್ಥಾಪಕ ದೇಶಗಳಲ್ಲಿ ಒಂದಾಗಿ ಪರಿಚಯಿಸಿತು ಮತ್ತು ಈ ಸಂಘಟನೆಯ ಮೊದಲ ಸಮ್ಮೇಳನದಲ್ಲಿ ಬಿ.ಪಿ. ವಾಡಿಯಾ ಅವರನ್ನು ಭಾರತದ ಕಾರ್ಮಿಕರನ್ನು ಪ್ರತಿನಿಧಿಸಲು ನಾಮಕರಣ ಮಾಡಿತು..

1920 ರಲ್ಲಿ ಎನ್.ಎಂ.ಜೋಶಿಯನ್ನು ಐ.ಎಲ್.ಒ. ನ ವಾಷಿಂಗ್ಟನ್ ಸಮ್ಮೇಳನದಲ್ಲಿ ಭಾರತವನ್ನು ಪ್ರತಿನಿಧಿಸಲು ಭಾರತ ಸರ್ಕಾರವು ನಾಮನಿರ್ದೇಶನ ಮಾಡಿತು ಮತ್ತು ತಿಳಕರನ್ನು ಅವರ ಸಲಹೆಗಾರರನ್ನಾಗಿ ನೇಮಿಸಲಾಯಿತು. ಜೋಶಿಯವರ ನಾಮನಿರ್ದೇಶನದ ಹೊರತಾಗಿಯೂ, ಮುಂಬಯಿ ಕಾರ್ಮಿಕರು ಇಂಗ್ಲೆಂಡ್‌ನಿಂದ ಹಿಂದಿರುಗಿದ, ತಿಳಕರನ್ನು ವಾಷಿಂಗ್ಟನ್ ಕಾರ್ಮಿಕ ಸಮ್ಮೇಳನಕ್ಕೆ ತಮ್ಮ ಪ್ರತಿನಿಧಿಯಾಗಿ ಆಯ್ಕೆ ಮಾಡಿಕೊಂಡರು ಎಂಬುದು ಸರ್ಕಾರದ ರಹಸ್ಯ ವರದಿಯಿಂದ ಕಂಡುಬರುತ್ತದೆ. ಕಾರ್ಮಿಕರಿಂದ ತಾವು ಪ್ರತಿನಿಧಿಯಾಗಿ ಆಯ್ಕೆಯಾದ ಕಾರಣ, ಸರ್ಕಾರದಿಂದ ಆಯ್ಕೆಯಾದ ವ್ಯಕ್ತಿಗೆ ಸಹಾಯಕರಾಗಿ ಹೋಗಲು ನಿರಾಕರಿಸಿ ತಿಳಕರು ವಾಷಿಂಗ್ಟನ್ ಸಮ್ಮೇಳನದಲ್ಲಿ ಭಾಗವಹಿಸಲಿಲ್ಲ.

ಐ.ಎಲ್.ಒ. ವನ್ನು ರಚಿಸಿದ, ವರ್ಸೈಲ್ಸ್ ಒಪ್ಪಂದದ 389 ನೇ ವಿಧಿ ಪ್ರಕಾರ "ಸರ್ಕಾರೇತರ ಪ್ರತಿನಿಧಿಗಳು ಮತ್ತು ಸಲಹೆಗಾರರನ್ನು, ಅಂತಹ ಸಂಸ್ಥೆಗಳು ಅಸ್ತಿತ್ವದಲ್ಲಿದ್ದರೆ ಆ ಕೈಗಾರಿಕಾ ಸಂಘಟನೆಯೊಂದಿಗೆ ಒಪ್ಪಂದದಲ್ಲಿ ಆಯ್ಕೆಯಾದ ಪ್ರತಿನಿಧಿಗಳನ್ನೇ ನಾಮನಿರ್ದೇಶನ ಮಾಡಲು ಸದಸ್ಯ ದೇಶಗಳಿಗೆ ಆದೇಶಿಸುತ್ತದೆ. ಈ ಕಲಂ ನ ನಿಬಂಧನೆಗಳ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುತ್ತಾ, ಮುಂಬಯಿಯ ಕಾರ್ಮಿಕರು 1920 ರ ಜುಲೈ 7 ರಂದು ಪರೆಲ್ ನಲ್ಲಿ ನಡೆದ ಸಭೆಯಲ್ಲಿ ಈ ನಿರ್ಣಯವನ್ನು ಅಂಗೀಕರಿಸಿದರು:

"ಸಭೆಯು ಕಾರ್ಮಿಕರು ತಮ್ಮದೇ ಆದ ಪ್ರತಿನಿಧಿಗಳು ಮತ್ತು ಸಲಹೆಗಾರರನ್ನು ಆಯ್ಕೆ ಮಾಡುವ ವಿಶಿಷ್ಟ ಹಕ್ಕನ್ನು ಪ್ರತಿಪಾದಿಸುತ್ತದೆ. ಕಾರ್ಮಿಕರಿಗೆ ನೀಡಿರುವ ಹಕ್ಕನ್ನು ಅನುಸರಿಸಿ ಈ ಸಭೆಯು ಶ್ರೀ ಎನ್. ಎಂ.ಜೋಶಿ ಅವರ ನಾಮನಿರ್ದೇಶನವನ್ನು ಹಿಂತೆಗೆದುಕೊಳ್ಳುವಂತೆ ಮತ್ತು ಬದಲಿಗೆ ಭಾರತದ ಸಂಘಟಿತ ಕಾರ್ಮಿಕರ ಸರಿಯಾಗಿ ಚುನಾಯಿತ ಪ್ರತಿನಿಧಿಯನ್ನು ಕಳುಹಿಸುವಂತೆ ಸರ್ಕಾರವನ್ನು ಒತ್ತಾಯಿಸುತ್ತದೆ.

ಈ ಸಭೆಯು ಮುಂಬಯಿಯೆಯಲ್ಲಿ ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ ಸ್ಥಾಪನಾ ಅಧಿವೇಶನ ನಡೆಸಲು ನಿರ್ಧರಿಸುತ್ತದೆ ಮತ್ತು ಲಾಲಾ ಲಜಪತ್ ರಾಯ್ ಅವರನ್ನು ಮೊದಲ ಅಧ್ಯಕ್ಷರನ್ನಾಗಿ ಆಯ್ಕೆ ಮಾಡುತ್ತದೆ."

ಐ.ಎಲ್.ಒ. ನಲ್ಲಿ ಪ್ರಾತಿನಿಧ್ಯಕ್ಕೆ ಸಂಬಂಧಿಸಿದ ಈ ಘಟನೆಯನ್ನು ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್‌ನ ಸ್ಥಾಪನೆಯ ಮೂಲ ಕಾರಣ ಎಂದು ಕೆಲವರು ವಿವರಿಸುತ್ತಾರೆ. ಆದರೆ ಇದು ಖಂಡಿತವಾಗಿಯೂ ಇಡೀ ವ್ಯವಹಾರವನ್ನು ನೋಡುವ ತಪ್ಪಾದ ಮಾರ್ಗವಾಗಿದೆ. ಐ.ಎಲ್.ಒ.ನಲ್ಲಿನ ಪ್ರಾತಿನಿಧ್ಯದ ಪ್ರಶ್ನೆಯು ಅದರ ಸ್ಥಾಪನೆಗೆ ತಕ್ಷಣದ ಪ್ರಚೋದನೆಯಾಗಿರಬಹುದು, ಆದರೆ ಆಳವಾಗಿ ಪರಿಶೀಲಿಸಿದಾಗ ಭಾರತದ ಕಾರ್ಮಿಕ ವರ್ಗದ ಈ ಮೊದಲ ಕೇಂದ್ರ ಸಂಘಟನೆಯ ಜನನ ಒಂದು ಐತಿಹಾಸಿಕ ಅವಶ್ಯಕತೆಯಾಗಿತ್ತು ಎಂದು ಗಮನಕ್ಕೆ ಬರುತ್ತದೆ. ಈ ವರ್ಷಗಳಲ್ಲಿ ಭಾರತದ ರಾಜಕೀಯ ಮತ್ತು ಆರ್ಥಿಕ ಹೋರಾಟಗಳ ಹಾದಿಯಲ್ಲಿ ಈ ಸಂಘಟನೆಯ ಉದಯವನ್ನು ನೋಡಬೇಕು.

ಯುದ್ಧಾನಂತರದ ಅವಧಿಯಲ್ಲಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸ್ಥರದಲ್ಲಿ ಸಾಮ್ರಾಜ್ಯಶಾಹಿ ಮತ್ತು ಬಂಡವಾಳಶಾಹಿ ಶೋಷಣೆಯ ವಿರುದ್ಧ ಭಾರತದ ಕಾರ್ಮಿಕ ವರ್ಗವು ನಡೆಸಿದ ವರ್ಗ ಹೋರಾಟದ ಅಭೂತಪೂರ್ವ ಆಯಾಮವು ಕಾರ್ಮಿಕರ ವರ್ಗರಾಜಕೀಯ ಪ್ರಜ್ಞೆಯ ದೃಷ್ಟಿಕೋನದಲ್ಲಿ ಹೆಚ್ಚು ಮಹತ್ವವನ್ನು ಹೊಂದಿದೆ. ಆದ್ದರಿಂದ ಭಾರತದ ಶ್ರಮಜೀವಿಗಳ ಕೇಂದ್ರ ವರ್ಗ ಸಂಘಟನೆಯ ಜನನವು ರಾಷ್ಟ್ರೀಯ–ರಾಜಕೀಯ ಜಾಗೃತಿ ಮತ್ತು ವಿಶ್ವವನ್ನೇ ಅಲುಗಾಡಿಸಿದ ಘಟನೆಗಳ ಹಿನ್ನೆಲೆಯ ಅನುರೂಪ ಕ್ಷಣದಲ್ಲಿ ಸಂಭವಿಸಿತು.

ಸ್ಥಾಪಕರ ಸಾಮಾಜಿಕ ನೆಲೆ ಮತ್ತು ರಾಜಕೀಯ ಸಿದ್ಧಾಂತ

ಕಾರ್ಮಿಕ ವರ್ಗದ ಈ ಕೇಂದ್ರ ಸಂಘಟನೆಯ ಸ್ಥಾಪಕರು ಮತ್ತು ನಂತರ ಅದನ್ನು ಮುನ್ನಡೆಸಿದ ಅನೇಕರು ರಾಷ್ಟ್ರೀಯ ಚಳವಳಿಯ ನಾಯಕರಾಗಿದ್ದರು. ರಾಜಕೀಯವಾಗಿ, ರಾಷ್ಟ್ರೀಯ ಚಳವಳಿಯ ನಾಯಕತ್ವವು ಸುಧಾರಣಾವಾದಿ ಬೂರ್ಜ್ವಾಗಳ ಕೈಯಲ್ಲಿತ್ತು. ದೃಷ್ಟಿಕೋನದಲ್ಲಿ ಹೆಚ್ಚು ತೀವ್ರವಾದಿಯಾಗಿದ್ದ, ಬಾಲ ಗಂಗಾಧರ ತಿಳಕರು ಆ ಸಮಯದ ಭಾರತದ ರಾಷ್ಟ್ರೀಯ ಚಳವಳಿಯ ಪ್ರಮುಖ ನಾಯಕರಲ್ಲಿ ಒಬ್ಬರಾಗಿದ್ದರು.. ಅವರು ಕಾರ್ಮಿಕ ವರ್ಗದೊಂದಿಗೆ ಸಂಪರ್ಕ ಹೊಂದಿದ್ದರೂ, ಅವರಿಗೆ ಕಾರ್ಮಿಕರ ಸಮಸ್ಯೆಗಳನ್ನು ಯಾವುದೇ ವರ್ಗ–ಪ್ರಜ್ಞೆಯಿಂದ ನೋಡಲಾಗಲಿಲ್ಲ, ಬದಲಿಗೆ ಸಾಮಾಜಿಕ ನ್ಯಾಯ ಮತ್ತು ಧಾರ್ಮಿಕ ಮಾನವೀಯತೆಯ ಅಮೂರ್ತ ಕಲ್ಪನೆಯು ಅವರನ್ನು ಬಳಲುತ್ತಿರುವ ಕಾರ್ಮಿಕರಿಗೆ ಸಹಾಯ ಮಾಡಲು ಪ್ರೇರೇಪಿಸಿತು.

ಅವರು ಇಂಗ್ಲೆಂಡ್‌ನಂದ ಹಿಂದಿರುಗಿದ ನಂತರ 29 ನವೆಂಬರ್ 1919 ರಂದು ಮುಂಬಯಿ ಕಾರ್ಮಿಕರ ಸಭೆಯಲ್ಲಿ ಮಾಡಿದ ಭಾಷಣವು ಕಾರ್ಮಿಕ ಸಮಸ್ಯೆಗಳ ಬಗ್ಗೆ ಅವರ ದೃಷ್ಟಿಕೋನದ ಒಂದು ಶ್ರೇಷ್ಠ ಅಭಿವ್ಯಕ್ತಿಯಾಗಿದೆ. "ನಾನು ಇಂಗ್ಲೆಂಡಿನ ದುಡಿಯುವ ವರ್ಗಗಳಿಂದ ಭಾರತದ ಕಾರ್ಮಿಕರಿಗೆ ಸಂದೇಶವನ್ನು ತಂದಿದ್ದೇನೆ, ಅದೆಂದರೆ ನೀವು ಟ್ರೇಡ್ ಯೂನಿಯನ್‌ಗಳನ್ನು ರಚಿಸಿಕೊಳ್ಳಬೇಕು; ಮತ್ತು ಅವು ಬಲವಾದಷ್ಟು ಬೇಗ ನೀವು ನಮ್ಮ ಹಕ್ಕುಗಳನ್ನು ಪಡೆಯುತ್ತೀರಿ. ಈ ವಿಷಯದಲ್ಲಿ ವಿರೋಧದಿಂದ ನೀವು ವಿಚಲಿತರಾಗಬಾರದು" ಎಂದು ಹೇಳಿದರು.

1920 ರ ಜುಲೈ 7 ರಂದು ನಡೆದ ಕಾರ್ಮಿಕರ ಸಭೆಗೆ ಕೆಲವೇ ತಿಂಗಳುಗಳ ಹಿಂದೆಯೇ ತಿಳಕ್ ಈ ಭಾಷಣ ಮಾಡಿದ್ದು ಅತ್ಯಂತ ಗಮನಾರ್ಹವಾದುದು, ಅದರಲ್ಲಿ ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್(ಎಐಟಿಯುಸಿ) ಅಧಿವೇಶನ ನಡೆಸಲು ತೀರ್ಮಾನಿಸಲಾಯಿತು. ಎಐಟಿಯುಸಿ ಯ ಉದ್ಘಾಟನಾ ಅಧಿವೇಶನದ ಅಧ್ಯಕ್ಷತೆಯನ್ನು ಲಾಲಾ ಲಜಪತ್ ರಾಯ್ ವಹಿಸಿದ್ದರು. ಆ ಅಧಿವೇಶನದಲ್ಲಿ ಅವರ ಅಧ್ಯಕ್ಷೀಯ ಭಾಷಣವು ಕಾರ್ಮಿಕರ ಬಗ್ಗೆ ಸ್ಪಷ್ಟವಾದ ದೃಷ್ಟಿಕೋನವನ್ನು ಬಹಿರಂಗಪಡಿಸಿತು.

ಇತರ ಕಾಂಗ್ರೆಸ್ ನಾಯಕರಲ್ಲಿ, ಇಬ್ಬರು ಪ್ರಮುಖರಾದ, ಮೋತಿಲಾಲ್ ನೆಹರು ಮತ್ತು ವಿಠ್ಠಲ್‌ಭಾಯ್ ಪಟೇಲ್ ಅವರು ಸಮ್ಮೇಳನವನ್ನು ತಮ್ಮ ಉಪಸ್ಥಿತಿಯೊಂದಿಗೆ ಅಲಂಕರಿಸಿದರು.

ಕಾಂಗ್ರೆಸ್ ನಾಯಕರಲ್ಲದೆ, ಇತರ ಅನೇಕ ಗಮನಾರ್ಹ ವ್ಯಕ್ತಿಗಳು ಸಮ್ಮೇಳನದಲ್ಲಿ ಉಪಸ್ಥಿತರಿದ್ದರು. ಅವರಲ್ಲಿ ಮದ್ರಾಸ್ ಲೇಬರ್ ಯೂನಿಯನ್‌ನ ಬಿ. ಪಿ. ವಾಡಿಯಾ, ಥಿಯೊಸಾಫಿಕಲ್ ಸೊಸೈಟಿಯ ಅನ್ನಿ ಬೆಸೆಂಟ್, ಕ್ರಿಶ್ಚಿಯನ್ ಮಿಷನರಿ ರೆವರೆಂಡ್ ಸಿ. ಎಫ್. ಆಂಡ್ರ್ಯೂಸ್, ಬಿ. ಜಿ. ಹಾರ್ನಿಮನ್ ಮತ್ತು 'ಬಾಂಬೆ ಕ್ರಾನಿಕಲ್'ನ ಸೈಯದ್ ಅಬ್ದುಲ್ಲಾ ಬ್ರೆಲ್ವಿ ಮತ್ತು ಯುವ ಕ್ರಾಂತಿಕಾರಿ ಪಾರ್ಸಿ ಕೆ. ಎಫ್.ನಾರಿಮನ್ ಪ್ರಮುಖರು. ಸಮ್ಮೇಳನದಲ್ಲಿ ಪಾಲ್ಗೊಂಡಿದ್ದ ಪ್ರಗತಿಪರ ಮಹಿಳಾ ಗಣ್ಯವ್ಯಕ್ತಿಗಳಲ್ಲಿ ವೈದ್ಯರಾದ ನಾಗುತಾಯಿ ಜೋಶಿ ಮತ್ತು ಸಮಾಜ ಸೇವಕ ಅಬಾಂತಿಕಾಬಾಯಿ ಗೋಖಲೆ ಅವರ ಹೆಸರುಗಳನ್ನು ವಿಶೇಷವಾಗಿ ಉಲ್ಲೇಖಿಸಬಹುದು. ಜಿನ್ನಾ ಜೊತೆಗೆ ಅವರ ಪತ್ನಿ ಕೂಡ ಉಪಸ್ಥಿತರಿದ್ದರು.

ವ್ಯಾಪಾರ ಮತ್ತು ಕೈಗಾರಿಕೆದೊಂದಿಗೆ ಸಂಪರ್ಕ ಹೊಂದಿದ ಶ್ರೀಮಂತ ಪುರುಷರು ಸಹ ಸಂಪೂರ್ಣವಾಗಿ ದೂರವಿರಲಿಲ್ಲ. ಅವರಲ್ಲಿ ಲಲ್ಲುಭಾಯ್ ಸಮಲ್ದಾಸ್, ಲಾಲ್ಜಿ ನರ್ಸೈಜ್ಜ, ಹನ್ಸರಾಜ್ ಪಿ. ಠಾಕರ್ಸಿ ಮತ್ತು ಲಲ್ಲುಭಾಯ್ ಡಿ. ಜವೇರಿ ಉಪಸ್ಥಿತರಿದ್ದರು. ಅಂದಿನ ದೇಶದ ರಾಜಕೀಯ ಚಳವಳಿಯೊಂದಿಗೆ ಸ್ವಲ್ಪ ಮಟ್ಟಿನ ಸಂಪರ್ಕ ಮಾತ್ರ ಹೊಂದಿದ್ದ ಇನ್ನೂ ಕೆಲವು ಶ್ರೀಮಂತರು ಸಹ ಹಾಜರಿದ್ದರು. ಲಕ್ಷ್ಮೀದಾಸ್ ರಂಜಿ ಅವರಲ್ಲಿ ಒಬ್ಬರು, ನಂತರ ಎಐಟಿಯುಸಿಯ ಖಜಾಂಚಿಯಾಗಿ ಆಯ್ಕೆಯಾದರು. ಸಮ್ಮೇಳನದಲ್ಲಿ ಭಾಗವಹಿಸಿದ ಇನ್ನೊಬ್ಬ ಶ್ರೀಮಂತ, ಮಾಲ್ವಿ ಗೋವಿಂದ್ಜಿ, ತಿಳಕರ ಸಹವರ್ತಿಯಾಗಿದ್ದರು ಮತ್ತು ಮುಂಬಯಿಯ ಪರೆಲ್ ಪ್ರದೇಶದಲ್ಲಿ ಕಾರ್ಮಿಕರ ಸಭೆಯನ್ನುದ್ದೇಶಿಸಿ ಮಾತನಾಡಿದರು. ಸಾಮ್ರಾಜ್ಯಶಾಹಿ ವಿರೋಧಿ ಚಳವಳಿಯ ಬಗ್ಗೆ ಸಹಾನುಭೂತಿ ಹೊಂದಿದ್ದ ಗಿರಣಿ ಮಾಲೀಕ ಸುಭಾನ ಇದ್ದರು. ಸಮ್ಮೇಳನದ ನಡಾವಳಿಯಲ್ಲಿ ದೊಡ್ಡ ಮರದ ವ್ಯಾಪಾರಿ ಮತ್ತು ಸಾಮಿಲ್ ಮಾಲೀಕರಾದ ಮಿಯಾಂ ಮುಹಮ್ಮದ್ ಹಾಜಿ ಜಾನ್ ಮುಹಮ್ಮದ್ ಚೋಟಾನಿ ಅವರು ಎಐಟಿಯುಸಿ ಅಧಿವೇಶನಕ್ಕೆ 500 ರೂ. ದೇಣಿಗೆ ನೀಡಿದ ಬಗ್ಗೆ ಪ್ರಸ್ತಾಪವಿದೆ.

ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದವರು ಶ್ರೀಮಂತ ನ್ಯಾಯವಾದಿ ಜೋಸೆಫ್ ಬ್ಯಾಪ್ಟಿಸ್ಟಾ. ಗ್ರೇಟ್ ಬ್ರಿಟನ್‌ನ ಸ್ವತಂತ್ರ ಲೇಬರ್ ಪಾರ್ಟಿಯ ಸಿದ್ಧಾಂತದಿಂದ ಅವರು ಪ್ರಭಾವಿತರಾಗಿದ್ದರು ಮತ್ತು ಭಾರತದಲ್ಲಿ ಫ್ಯಾಬಿಯನ್ ಸಮಾಜವಾದವನ್ನು ಸ್ಥಾಪಿಸಲು ಬಯಸಿದ್ದರು. ಕಾರ್ಮಿಕ ಚಳವಳಿಯಲ್ಲಿ ಭಾಗಿಯಾಗಿದ್ದ ಮತ್ತು ಎಐಟಿಯುಸಿ ರಚನೆಯಲ್ಲಿ ಪ್ರಮುಖ ಪಾತ್ರ ವಹಿಸಿದ ದಿವಾನ್ ಚಮನ್ ಲಾಲ್ ಇದ್ದರು. **ಪುಟ 13 ನೋಡಿ**

ಮೂರು ಕೃಷಿಕಾಯ್ದೆಗಳ ವಿರುದ್ಧ ರೈತರ ಐತಿಹಾಸಿಕ ಹೋರಾಟ ೮೦ದಿನಗಳನ್ನು ದಾಟುತ್ತಿದ್ದಂತೆ ಅದಕ್ಕೆ ಮೋದಿ ಸರಕಾರದ ಪ್ರತಿಕ್ರಿಯೆ ಹೆಚ್ಚೆಚ್ಚು ಅಪಹಾಸ್ಯಕ್ಕೆ ಒಳಗಾಗುತ್ತಿದೆ. ಮುಳ್ಳುತಂತಿಬೇಲಿಗಳು, ಕಾಂಕ್ರಿಟ್ ತಡೆಗೋಡೆಗಳು, ಜಲಫಿರಂಗಿಗಳು ಸಾಲಲಿಲ್ಲವೆಂದು, ನಂತರ ರೈತರ ವಿರುದ್ಧ ಅಪಪ್ರಚಾರ, ಅದೂ ಸಾಗದಾದಾಗ ಹೆದ್ದಾರಿಗಳಿಗೆ ಮೊಳೆ ಜಡಿದ ನಂತರ ಈಗ ಅಂತರ್ರಾಷ್ಟ್ರೀಯ ಪಿತೂರಿಯ ಬೊಬ್ಬೆ-ಪಿತೂರಿ ಭೂಮಂಡಲವನ್ನು ದಾಟಿ ನಾಳೆ ನಭೋಮಂಡಲದಲ್ಲಿ ಇವರಿಗೆ ಕಾಣಿಸಿದರೆ ನಾನೇನೂ ಅಪಹಾಸ್ಯ ಮಾಡಲಾರೆ 'ಎಂದು ಪ್ರಖ್ಯಾತ ಪತ್ರಕರ್ತ ಪಿ.ಸಾಯಿನಾಥ್ ಹೇಳಿದರೆ, ಗಾಜಿಪುರದ ರಸ್ತೆಯಲ್ಲಿ ನೆಟ್ಟ ಮೊಳೆಗಳು ಬಿಜೆಪಿಯ ಶವಪೆಟ್ಟಿಗೆಗೆ ಹೊಡೆಯುವ ಮೊಳೆಗಳಾಗಬಹುದು, ಮುದ್ದು ಮಾಡಿ ಬೆಳೆಸಿದ ಮತ್ತು ತಾತ್ಸಾರ ಮನೋಭಾವ ಹೊಂದಿರುವ ದೆಹಲಿಯ ಮೇಲ್ಮಧ್ಯಮ ವರ್ಗಗಳು ಈಗ ಶಾಂತಿಯಿಂದ ಬದುಕಬಹುದು – ಯುದ್ಧವನ್ನು ಅವರಿಂದ ಬೇರೆಯವರು ವಹಿಸಿಕೊಂಡಿದ್ದಾರೆ, ಅವರು ಇನ್ನು ಮುಂದೆ ಲೆಕ್ಕಕ್ಕಿಲ್ಲ ಎನ್ನುತ್ತಾರೆ ನಿವೃತ್ತ ಐಎಎಸ್ ಅಧಿಕಾರಿ ಅವಾಯ್ ಶುಕ್ಲ (ಕೃಪೆ: ದಿ ವೈರ್, ಫೆಬ್ರುವರಿ 6)

—ಸಂಗ್ರಹ-ಅನುವಾದ: **ಕೆ.ಎಂ. ನಾಗರಾಜ್**

ಶ್ರೀಮಂತ ರೈತರೂ, ಜಾಗತಿಕ ಪಿತೂರಿಗಳೂ ಮತ್ತು ಸ್ಥಳೀಯ ಮೂರ್ಖತನವೂ

ಪಿ. ಸಾಯಿನಾಥ್

ಲಕ್ಷಾಂತರ ಮನುಷ್ಯರಿಗೆ ನೀರು ಮತ್ತು ವಿದ್ಯುತ್ ಸಂಪರ್ಕಗಳನ್ನು ನಿಲ್ಲಿಸಿ ಅವರ ಆರೋಗ್ಯವನ್ನು ಅಪಾಯಕ್ಕೆ ಒಡ್ಡುವುದು, ಅವರ ಬಿಡಾರದ ಸುತ್ತ ಅಪಾಯಕಾರಿ ಮಟ್ಟದ ಅನೈರ್ಮಲ್ಯ ಉಂಟಾಗಿ ಅಲ್ಲಿಂದ ಆಚೆ ಹೋಗದಂತೆ ಪೊಲೀಸರು ಬಿಡಾರದಲ್ಲಿದ್ದವರನ್ನು ಪ್ರತಿಬಂಧಿಸುವುದು, ಮತ್ತು ದೇಹದ ಉಷ್ಣತೆ ಇಳಿದ ಕಾರಣದಿಂದ ಕಳೆದ ಎರಡು ತಿಂಗಳಲ್ಲಿ ತಮ್ಮ ಕಣ್ಣಮುಂದೆಯೇ 200 ಮಂದಿ ಸತ್ತಿರುವುದನ್ನು ಈಗಾಗಲೇ ಕಂಡಿರುವ ಪ್ರತಿಭಟನಾ ನಿರತ ರೈತರನ್ನು ಭೇಟಿ ಮಾಡುವುದು ಮಾಧ್ಯಮಗಳಿಗೆ ಅಸಾಧ್ಯವಾಗುವಂತೆ ಮಾಡುವುದು, ಇಂತಹ ವಿದ್ಯಮಾನಗಳನ್ನು ಜಗತ್ತಿನ ಯಾವುದೇ ಭಾಗದಲ್ಲಿ ಅನಾಗರಿಕ ಮತ್ತು ಮಾನವ ಹಕ್ಕುಗಳ ಮತ್ತು ಘನತೆಯ ಮೇಲಿನ ದಾಳಿ ಎಂದು ಪರಿಗಣಿಸಲಾಗುತ್ತದೆ.

ಆದರೆ, ಭೂಮಿಯ ಮೇಲಿನ ಮಹಾನ್ ರಾಷ್ಟ್ರವನ್ನು ಅವಮಾನಿಸುವ ಜಾಗತಿಕ ಭಯೋತ್ಪಾದಕಿಯರಾದ ರಿಹಾನಾ ಮತ್ತು ಗ್ರೆಟಾ ಥುನ್‌ಬರ್ಗ್ ಇವರ ಸಂಚನ್ನು ಪುಡಿ ಪುಡಿ ಮಾಡುವುದು ಹೇಗೆ ಎಂಬ ಆತಂಕದಲ್ಲಿ ನಮ್ಮ ಸರ್ಕಾರವು ಪುರಸೊತ್ತಿಲ್ಲದೆ ತೊಳಲಾಡುತ್ತಿದೆ. ಒಂದು ಕಲ್ಪನೆಯಾಗಿಯೂ ಸಹ, ಇದು ಬುದ್ಧಿಗೇಡಿಕುಚೋದ್ಯವೇ. ಒಂದು ವಾಸ್ತವವಾಗಿ, ಬುದ್ಧಿಗೇಡಿ ಕೃತ್ಯವೇ.

ಈ ವಿದ್ಯಮಾನಗಳು ಆಘಾತಕಾರಿಯೇ. ಆದರೆ, ಆಶ್ಚರ್ಯಪಡಬೇಕಾದ್ದಿಲ್ಲ. ಕಳವಳಪಡಬೇಕಾದ ವಿಷಯವೆಂದರೆ, ಬೇರೆ ಎಲ್ಲಾ ವಿಷಯಗಳ ಬಗ್ಗೆ ಅರಳು ಹುರಿದಂತೆ ಮಾತನಾಡುವ ಹಲವರು ರೈತರ ಪ್ರತಿಭಟನೆಯ ಬಗ್ಗೆ ವಹಿಸಿರುವ ಜಾಣ ಮೌನ. ಕೇಂದ್ರ ಸಂಪುಟದ ಪ್ರತಿಯೊಬ್ಬ ಸಚಿವರಿಗೂ ರೈತರ ಪ್ರತಿಭಟನೆಗೆ ನಿಜವಾದ ಕಾರಣ ಏನು ಎಂಬುದು ಗೊತ್ತಿದೆ. ಕೃಷಿಯು ರಾಜ್ಯಗಳ ಅಧಿಕಾರದ ವ್ಯಾಪ್ತಿಯಲ್ಲಿದ್ದರೂ ಸಹ, ಈ ಕಾನೂನುಗಳನ್ನು ರೂಪಿಸುವಲ್ಲಿ ರಾಜ್ಯ ಸರ್ಕಾರಗಳ ಜೊತೆ ಸಮಾಲೋಚನೆ ಮಾಡಿಯೇ ಇಲ್ಲ ಎಂಬುದು ಅವರಿಗೆ ಗೊತ್ತಿದೆ. ರೈತರೊಂದಿಗಾಗಲಿ ಅಥವಾ ವಿರೋಧ ಪಕ್ಷಗಳೊಂದಿಗಾಗಲಿ ಅಥವಾ ಸಂಸತ್ತಿನ ಒಳಗೂ ಚರ್ಚೆ ಮಾಡಿಲ್ಲ ಎಂಬುದೂ ಅವರಿಗೆ ಗೊತ್ತಿದೆ. ಈ ಎಲ್ಲವೂ ಬಿಜೆಪಿ ನಾಯಕರಿಗೂ ಗೊತ್ತಿವೆ. ಅವರೊಂದಿಗೂ ರೈತರ ವಿಷಯವನ್ನು ಚರ್ಚಿಸಿಯೇ ಇಲ್ಲ, ಈ ವಿಷಯ ಮಾತ್ರವಲ್ಲ ಇನ್ನೂ ಅನೇಕ ಪ್ರಮುಖ ವಿಷಯಗಳನ್ನೂ ಚರ್ಚಿಸಿಲ್ಲ, ಎಂಬುದೂ ಅವರಿಗೆ ಗೊತ್ತಿದೆ. ಅವರ ಕೆಲಸ ಏನಿದ್ದರೂ, ಉಕ್ಕೇರಿ ಬರುತ್ತಿರುವ ಸಮುದ್ರದ ಅಲೆಗಳನ್ನು ತಮ್ಮ ನಾಯಕ ಆಜ್ಞೆ ಮಾಡಿದಾಗ ಹಿಮ್ಮೆಟ್ಟಿಸುವುದು ಮಾತ್ರ.

ಉತ್ತರ ಪ್ರದೇಶದಲ್ಲಿ ದೈತ್ಯ ಪ್ರತಿಭಟನೆಗಳು ನಡೆಯುತ್ತಿವೆ. ಸರ್ಕಾರವು ರಾಕೇಶ್ ಟಿಕಾಯಿತ್ ಅವರನ್ನು ಹೆಡೆಮುರಿ ಕಟ್ಟಿ ಬಿಸಾಡುವ ಪ್ರಯತ್ನಗಳ ಮೊದಲು ವಾಮನನಂತಿದ್ದ ಅವರ ವ್ಯಕ್ತಿತ್ವ ಇಂದು ತ್ರಿವಿಕ್ರಮನಂತಿದೆ. ಮಹಾರಾಷ್ಟ್ರ, ರಾಜಸ್ಥಾನ, ಆಂಧ್ರಪ್ರದೇಶ, ಕರ್ನಾಟಕ ಮತ್ತಿತರ ರಾಜ್ಯಗಳಲ್ಲಿ ಭಾರೀ ಪ್ರತಿಭಟನೆಗಳು ನಡೆದಿವೆ. ಹರಿಯಾಣ ರಾಜ್ಯ ಸರ್ಕಾರವು ಏದುಸಿರು ಬಿಡುತ್ತಿದೆ. ಅಲ್ಲಿನ ಸಾರ್ವಜನಿಕ ಸಭೆಗಳಲ್ಲಿ ಮುಖ್ಯ ಮಂತ್ರಿಗಳು ಸ್ವತಃ ಭಾಗವಹಿಸಲು ಸಾಧ್ಯವಾಗುತ್ತಿಲ್ಲ. ಅಷ್ಟು ಮಟ್ಟಿಗೆ ಜನರು ಸಿಡಿದೆದ್ದಿದ್ದಾರೆ. ಪಂಜಾಬಿನಲ್ಲಿ, ಪ್ರತಿ ಮನೆಯೂ ಪ್ರತಿಭಟನೆಯೊಂದಿಗೆ ಗುರುತಿಸಿಕೊಂಡಿದೆ. ಇನ್ನೂ ಅನೇಕ ಮಂದಿ ಯುವಕರು ಪ್ರತಿಭಟನಾ ಕ್ಯಾಂಪ್ ಸೇರಿಕೊಳ್ಳಲು ಚಡಪಡಿಸುತ್ತಿದ್ದಾರೆ. ಪಂಜಾಬಿನಲ್ಲಿ ನವೆಂಬರ್ 14ರಂದು ನಡೆಯಲಿರುವ ಸ್ಥಳೀಯ ನಗರ ಸಂಸ್ಥೆಯ ಚುನಾವಣೆಯಲ್ಲಿ ಸ್ಪರ್ಧಿಸಲು ಬಿಜೆಪಿಗೆ ಅಭ್ಯರ್ಥಿಗಳೇ ಸಿಗುತ್ತಿಲ್ಲ.

ಈ ಸರ್ಕಾರದ ಒಂದು ವಿಸ್ಮಯಕರ ಸಾಧನೆಯೆಂದರೆ, ರೈತರು ಮತ್ತು ಕಮಿಷನ್ ಏಜೆಂಟ್‌ರಂತಹ ಕೆಲವು ಸಾಂಪ್ರದಾಯಿಕ ವಿರೋಧಿಗಳೂ ಸೇರಿದಂತೆ, ಸಾಮಾಜಿಕ ಶಕ್ತಿಗಳ ಒಂದು ಬೃಹತ್ ಮತ್ತು ಅಸಂಭವನೀಯ ಸಮುದಾಯವನ್ನು ಒಗ್ಗೂಡಿಸಿದೆ. ಅದರಾಚೆಗೆ, ಸಿಖ್ಖರು, ಹಿಂದೂಗಳು, ಮುಸ್ಲಿಮರು, ಜಾಟರು ಮತ್ತು ಜಾಟೇತರರನ್ನು, ಖಾಪ್ ಪಂಚಾಯತ್‌ಗಳನ್ನು ಮತ್ತು ಖಾನ್ ಮಾರ್ಕೆಟ್ ಗಿರಾಕಿಗಳೆಂಬ ಅವಹೇಳನಕ್ಕೆ ಒಳಗಾಗಿದ್ದವರನ್ನು– ಈ ಎಲ್ಲರನ್ನೂ ಒಗ್ಗೂಡಿಸಿದೆ.

ಇದು ತಮಾಷೆಯಾಗಿ ಕಾಣುತ್ತದೆ – ಮಾಧ್ಯಮಗಳಲ್ಲಿ ಏರು ದನಿಯಲ್ಲಿ ಭಕ್ತರು ಹೇಳುತ್ತಾರೆ: ದಿಲ್ಲಿಯ ಗಡಿಗಳಲ್ಲಿ ಸುಧಾರಣೆಗಳನ್ನು ವಿರೋಧಿಸುತ್ತಿರುವವರು, ಲೋಹದ ತಳ್ಳುಗಾಡಿಗಳಲ್ಲಿ 2 ಡಿಗ್ರಿ ಅಥವಾ ಅದಕ್ಕೂ ಕೆಳಗಿನ ತಾಪಮಾನದಲ್ಲಿ ಮಲಗಿರುವವರು, 5–6 ಡಿಗ್ರಿಯ ಛಳಿಯಲ್ಲಿ ಬಯಲಿನಲ್ಲಿ ಸ್ನಾನ ಮಾಡುವವರು ಈ ಎಲ್ಲರೂ "ಶ್ರೀಮಂತ ರೈತರು" ಎಂದು. ಎಂತಹ ಮೋಹಕ ಮಾತು! ಕಳೆದ ಎನ್.ಎಸ್.ಎಸ್ ಸಮೀಕ್ಷೆಯ ಪ್ರಕಾರ, ಪಂಜಾಬ್‌ನ ಕೃಷಿ ಕುಟುಂಬವೊಂದರ ಸರಾಸರಿ ಮಾಸಿಕ ಆದಾಯವು 18,059 ರೂ ಇತ್ತು. ಪ್ರತಿ ಕೃಷಿ ಕುಟುಂಬದ ಸದಸ್ಯರ ಸರಾಸರಿ ಸಂಖ್ಯೆಯು 5.24, ಅಂದರೆ ಮಾಸಿಕ ತಲಾ ಆದಾಯವು ಸುಮಾರು 3,450 ರೂ ಆಗುತ್ತದೆ. ಇದು, ಸಂಘಟಿತ ವಲಯದ ಅತಿ ಕಡಿಮೆ ವೇತನ ಪಡೆಯುವ ಉದ್ಯೋಗಿಗಿಂತಲೂ ಕಡಿಮೆ.


ಆಹಾ! ಅವರ ಬಳಿ ಇಷ್ಟೊಂದು ಸಂಪತ್ತು!. ಪಂಜಾಬಿನ ಬಗ್ಗೆ ತಿಳಿಸಿದ ಇದೇ ಅಂಕಿ-ಅಂಶಗಳನ್ನು ಹರಿಯಾಣಕ್ಕೆ ಅನ್ವಯಿಸಿ ಹೇಳುವುದಾದರೆ, ಪ್ರತಿ ಕೃಷಿ ಕುಟುಂಬದ ಸದಸ್ಯರ ಸರಾಸರಿ ಸಂಖ್ಯೆ – 5.9; ಸರಾಸರಿ ಮಾಸಿಕ ಆದಾಯ 14,434 ರೂ; ತಲಾ ಆದಾಯ 2,450 ರೂಗಳು.

ಇಂತಹ ಆದಾಯ ಸಂಖ್ಯೆಗಳೂ ಭಾರತದ ಇತರ ರಾಜ್ಯಗಳ ರೈತರ ಆದಾಯಗಳಿಗೆ ಹೋಲಿಸಿದಾಗ ಉತ್ತಮವಾಗಿಯೇ ಕಾಣುತ್ತವೆ.

ಗುಜರಾತ್‌ನಲ್ಲಿ ಕೃಷಿ ಕುಟುಂಬದ ಸರಾಸರಿ ಮಾಸಿಕ ಆದಾಯ 7,926 ರೂಗಳು; ಕುಟುಂಬದ ಸದಸ್ಯರ ಸರಾಸರಿ ಸಂಖ್ಯೆ 5.2; ಕುಟುಂಬದ ತಲಾ ಮಾಸಿಕ ಆದಾಯ 1,524 ರೂಗಳು.

ಅಖಿಲ ಭಾರತದ ಮಟ್ಟದಲ್ಲಿ, ರೈತ ಕುಟುಂಬದ ಸರಾಸರಿ ಮಾಸಿಕ ಆದಾಯ 6,426 ರೂಗಳು; ತಲಾ ಮಾಸಿಕ ಆದಾಯ ಸುಮಾರು

➡ ಮುಂದಿನ ಪುಟಕ್ಕೆ



ವ್ಯಂಗ್ಯಚಿತ್ರಕೃಪೆ: ಪಂಜು ಗಂಗೊಳ್ಳಿ

ರೈತರಿಗೆ ಈಗ ದೆಹಲಿ ಲೆಕ್ಕಕ್ಕೇ ಇಲ್ಲ ಎಂದೀಗ ಆಸ್ಥಾನಿಕರು ತಲೆ ಕೆಡಿಸಿಕೊಳ್ಳಬೇಕಾಗಿದೆ

ಅವಾಯ್ ಶುಕ್ಲ

ತನ್ನ ಪರಾಕ್ರಮ-ಪ್ರತಾಪಗಳಲ್ಲೇ ಮುಳುಗಿರುವ ಸರ್ಕಾರಕ್ಕೆ ಇದೊಂದು ವಿಪರ್ಯಾಸ ಎಂಬುದೇ ಅರ್ಥವಾಗುತ್ತಿಲ್ಲ: ಟಿಕ್ರಿ, ಗಾಜಿಪುರ್ ಅಥವಾ ಸಿಂಘು ಗಡಿ ಭಾಗದ ರಸ್ತೆಗಳಲ್ಲಿ ಬ್ಯಾರಿಕೇಡ್ ಅಳವಡಿಸಲು ನೆಡುತ್ತಿರುವ ಪ್ರತಿ ಮೊಳೆಯೊಂದಿಗೂ, ಈಗ ಜರುಗುತ್ತಿರುವ ಘಟನೆಗಳು ಮತ್ತು ಬಹುಶಃ ಭಾರತದಲ್ಲಿ ಭವಿಷ್ಯದಲ್ಲಿ ನಡೆಯಬಹುದಾದ ಘಟನಾವಳಿಗಳಿಗೆ ದೆಹಲಿಯು ತನ್ನನ್ನು ಕ್ರಮೇಣವಾಗಿ ತಾನೇ ಅನವಶ್ಯಕವಾಗಿಸಿಕೊಳ್ಳುತ್ತಿದೆ. ನಿಂತ ನೆಲದಡಿಯಲ್ಲೇ ನಿಧಾನವಾಗಿ ಒಂದು ಸುನಾಮಿ ನಿರ್ಮಾಣವಾಗುತ್ತಿದೆ ಎಂಬುದರ ಬಗ್ಗೆ ಅಧಿಕಾರದ ಅತಿರಥ-ಮಹಾರಥರು, ಮುದ್ದುಮಾಡಿ ಬೆಳೆಸಿದ ಮಧ್ಯಮ ವರ್ಗ ಮತ್ತು ರಾಜಧಾನಿಯ ಕುತಂತ್ರಿಗಳು ಕಿಂಚಿತ್ತೂ ಅರಿವಿಲ್ಲದವರಾಗಿದ್ದಾರೆ.

ಬದುಕುಳಿಯಲು ರೈತರಿಗೆ ದೆಹಲಿ ಬೇಕಾಗಿಲ್ಲ. ಅವರು ಮಣ್ಣಿನ ಮಕ್ಕಳು. ಅಂದರೆ, ಮಣ್ಣು, ಗಾಳಿ, ಮಳೆ, ಬಿಸಿಲು ಮುಂತಾದ ಪ್ರಾಕೃತಿಕ ಅಂಶಗಳಿಂದ ಸೃಷ್ಟಿಯಾದ ಶಿಶುಗಳು. ಪ್ರಕೃತಿಯೊಂದಿಗೆ ಸಾಮರಸ್ಯದಿಂದ ಬದುಕುವುದು ಹೇಗೆಂದು ಅವರಿಗೆ ಗೊತ್ತಿದೆ. ಮೂರು ತಿಂಗಳಿಂದಲೂ ದೆಹಲಿಯ ಗಡಿ ಭಾಗಗಳಲ್ಲಿ ಠಿಕಾಣಿ ಹೂಡಿರುವ ಅವರು, ಸಾಕಷ್ಟು ಬೈಗುಳಗಳನ್ನು ಬಿಟ್ಟರೆ, ದೆಹಲಿಯಿಂದ ಏನನ್ನೂ ಪಡೆದಿಲ್ಲ. ನೀರು ಮತ್ತು ವಿದ್ಯುತ್ ಪೂರೈಕೆಯನ್ನು ನಿಲ್ಲಿಸಿರುವ ಆಳರಸರು ಕಾಶ್ಮೀರದಲ್ಲಿ ಸಿದ್ಧಿಸಿಕೊಂಡ ಇಂಟರ್ನೆಟ್ ಬಂದ್ ಮಾಡುವ ಕಲೆಯನ್ನೂ ಸಹ ಪ್ರದರ್ಶಿಸಿದ್ದಾರೆ. ಆದರೆ, ರೈತರು ಮಾತ್ರ ಈ ಬಗ್ಗೆ ಗಲಿಬಿಲಿಗೊಂಡಿಲ್ಲ.

ನರೇಂದ್ರ ಮೋದಿ ಅವರ ಕೃಷಿ ಕಾನೂನುಗಳನ್ನು ಬೆಂಬಲಿಸುವ ಅವರ ಮಿತ್ರ-ಆರ್ಥಿಕ ತಜ್ಞರೊಬ್ಬರು ಈ ಕಾನೂನುಗಳ ಗುಟ್ಟನ್ನು ಹೊರಹಾಕಿದ್ದಾರೆ. ದೇಶವು "ಅಭಿವೃದ್ಧಿ ಹೊಂದಿದ ರಾಷ್ಟ್ರ" ಸ್ಥಾನ ಪಡೆಯುವಲ್ಲಿ ದೊಡ್ಡ ಪ್ರಮಾಣದ ಗ್ರಾಮೀಣ ನಿರುದ್ಯೋಗವು ಅನಿವಾರ್ಯ ಎಂದು ನನಗೆ ಅವರು ತಿಳಿಸಿದರು. ಜಿಡಿಪಿ ಮತ್ತು ಗ್ರಾಮೀಣ ನಿರುದ್ಯೋಗದ ನಡುವಿನ ಸಂಬಂಧವನ್ನು ಸ್ಪಷ್ಟೀಕರಿಸುವ ಕೆಲವು ಚಾರ್ಟ್‌ಗಳನ್ನು ಅವರು ನನಗೆ ಕಳುಹಿಸಿದರು: ಜಿಡಿಪಿಯು ಎಷ್ಟು ಹೆಚ್ಚುತ್ತದೆಯೊ, ಅದಕ್ಕನುಗುಣವಾಗಿ, ಕೃಷಿಕ ಸಮುದಾಯದ ನಿರುದ್ಯೋಗವೂ ಹೆಚ್ಚುತ್ತದೆ! ಇದುವೇ ವಿಶ್ವದ 100 ಶ್ರೀಮಂತ ಬಿಲಿಯನೇರ್‌ಗಳು ವಿಶ್ವದ ಅರ್ಧ ಭಾಗ ಜನರಿಗಿಂತಲೂ ಹೆಚ್ಚು ಸಂಪತ್ತನ್ನು ಹೊಂದುವಂತೆ ಖಾತ್ರಿಪಡಿಸಿದ ನವ ಉದಾರವಾದಿ ಆರ್ಥಿಕ ನೀತಿ. ಇದುವೇ ಐಎಂಎಫ್ ಮತ್ತು ವಿಶ್ವಬ್ಯಾಂಕ್ ಬೋಧಿಸುವ ಸೂತ್ರ. ಅಂದರೆ, ಮೋದಿ ಅವರ ಕೃಷಿ ಕಾನೂನುಗಳು ಈ ಸೂತ್ರದ ಭಾರತೀಯ ಆವೃತ್ತಿಯಾಗಲಿದೆ.

ಕೈಗಾರಿಕೆ ಮತ್ತು ದೊಡ್ಡ ದೊಡ್ಡ ಬಂಡವಾಳಗಾರರಿಗೆ ಅಗ್ಗದ ಕಾರ್ಮಿಕರನ್ನು ಸೃಷ್ಟಿಸುವುದೇ ಈ ಮೋಸದ ಕಾನೂನುಗಳ ಉದ್ದೇಶ. ಈ ವಿದ್ಯಮಾನವು ಈಗಾಗಲೇ ಭಾರತದಲ್ಲಿ ನಡೆಯುತ್ತಿದೆ– 2004 ರಿಂದ 2012ರ ನಡುವೆ 36 ದಶಲಕ್ಷ ರೈತರು ಕೃಷಿಯನ್ನು ತೊರೆದರು. 50 ದಶಲಕ್ಷ ಮಂದಿ ರೈತರು ಮೂಲ ಸೌಕರ್ಯ-ಬಂಡವಾಳ ಯೋಜನೆಗಳಿಂದ "ಸ್ಥಳಾಂತರಿಸಲ್ಪಟ್ಟಿದ್ದಾರೆ" ಮತ್ತು ಪ್ರತಿ ವರ್ಷವೂ ಐದು ಲಕ್ಷ ಮಂದಿ ರೈತರನ್ನು ಒಕ್ಕಲೆಬ್ಬಿಸಲಾಗುತ್ತಿದೆ. ಆದಿವಾಸಿಗಳನ್ನು ಅರಣ್ಯದಿಂದ ಹೊರಹಾಕಲಾಗುತ್ತಿದೆ. ವಲಸೆ ಕಾರ್ಮಿಕರ ಸಂಖ್ಯೆಯು ಈಗಾಗಲೇ 120 ದಶಲಕ್ಷವನ್ನು ದಾಟಿದೆ. ಇದೊಂದು ವಿಷಾದಕರ ಚಿತ್ರ. ರೈತರನ್ನು ಕೃಷಿಯಿಂದ ಹೊರದಬ್ಬುವ ಪ್ರಕ್ರಿಯೆಯನ್ನು ತ್ವರಿತಗೊಳಿಸುವುದೇ ಈ ಕೃಷಿ ಕಾನೂನುಗಳ ಉದ್ದೇಶ. ಎಷ್ಟೇ ಅಡ್ಡಿ ಆತಂಕಗಳು ಬರಲಿ, ರಿಹಾನಾ, ಗ್ರೆಟಾ ಥುನ್‌ಬರ್ಗ್ ಮುಂತಾದವರು ಎಷ್ಟೇ ಗೊಣಗಾಡಲಿ, ಬ್ಯಾರಿಕೇಡ್‌ಗಳು ಈ ಕಾನೂನುಗಳನ್ನು ಜಾರಿಗೆ ತರಲು ನೆರವಾಗುತ್ತವೆ.

ದೆಹಲಿಯಲ್ಲಿ ಆಡಳಿತ ನಡೆಸುತ್ತಿರುವವರ ಭಯ, ಅಸಾಮರ್ಥ್ಯ, ಅದಕ್ಷತೆ ಮತ್ತು ದುರುದ್ದೇಶಗಳ ಫಲವೇ ಈ ಬ್ಯಾರಿಕೇಡ್‌ಗಳು, ಸಿಂಬೆ ಸುತ್ತಿದ-ಕತ್ತಿಯ ಅಂಚಿನ-ಮುಳ್ಳು ತಂತಿಗಳು ಮತ್ತು ರಸ್ತೆಯಲ್ಲಿ ನೆಟ್ಟ ಅಡಿ-ಉದ್ದದ ಮೊಳೆಗಳು. ಗಟ್ಟಿ ಮುಟ್ಟಾದ ನಮ್ಮ ರೈತರು ಅವುಗಳಿಗೆ ಅಂಜುವುದಿಲ್ಲ. ಕಳೆದ ಆರು ತಿಂಗಳಿನಿಂದಲೂ ಅವರು ಮನವಿ ಸಲ್ಲಿಸಿದ ಪ್ರತಿಯೊಂದು ಸಂಸ್ಥೆಯೂ ಅವರನ್ನು ನಿರಾಶೆಗೊಳಿಸಿದೆ: ಸಂಸತ್ತು, ಸುಪ್ರೀಂ ಕೋರ್ಟ್, ಮಾಧ್ಯಮಗಳು ಮತ್ತು ಮುಖ್ಯಧಾರೆಯ ರಾಜಕೀಯ ಪಕ್ಷಗಳು. ಅಷ್ಟೇ ಅಲ್ಲ, ವಕೀಲರು ಮೌನವಹಿಸಿದರು. ಹಿರಿಯ ಅಧಿಕಾರಿಗಳು ತಲೆ ತಗ್ಗಿಸಿಕೊಂಡರು. ರಾಯಭಾರ ಕಚೇರಿಗಳು "ಪರಿಸ್ಥಿತಿಯನ್ನು ಗಮನಿಸುತ್ತಿದ್ದೇವೆ" ಎಂದರು. ತಮ್ಮ ಪ್ರಯತ್ನದಲ್ಲಿ ಮೋದಿ ಯಶಸ್ವಿಯಾಗುತ್ತಾರೆ ಎಂದು ಐಎಂಎಫ್ ಮತ್ತು ವಿಶ್ವಬ್ಯಾಂಕ್ ಆಶಿಸಿದವು.

ದೆಹಲಿಯು ರೈತರನ್ನು ನಿರಾಶೆಗೊಳಿಸಿದೆ. ರೈತನಿಗೆ ಭಾರತದ ರಾಜಧಾನಿಯ ಅವಶ್ಯಕತೆ ಉಳಿದಿಲ್ಲ. ಆದ್ದರಿಂದ, ರೈತನು 'ದೆಹಲಿ'ಯನ್ನು ಬಿಟ್ಟಾಕಲು ನಿರ್ಧರಿಸಿದ್ದಾನೆ ಮತ್ತು ಆ ದೋಷವನ್ನು ಸರಿಪಡಿಸಿಕೊಳ್ಳಲು ನಿರ್ಧರಿಸಿದ್ದಾನೆ: ರಾಕೇಶ್ ಟಿಕೈತ್ ಅವರು ಫೆಬ್ರವರಿ 3ರಂದು ಜಿಂದ್‌ನಲ್ಲಿ ನಡೆದ ಮಹಾಪಂಚಾಯತ್‌ನಲ್ಲಿ ಭಾಗವಹಿಸಲು, ದೆಹಲಿಯನ್ನು ತಪ್ಪಿಸಿ, ಹರಿಯಾಣ ಮಾರ್ಗವಾಗಿ ಹೆಚ್ಚು ದೂರವನ್ನು ಕ್ರಮಿಸಿದರು. ಈ ಘಟನೆಯ ಸಾಂಕೇತಿಕತೆಯನ್ನು ಕಡೆಗಣಿಸಲಾಗದು. ಪ್ರತಿಭಟನೆಗಳನ್ನು ಭಾರತದ ಇತರ ಭಾಗಗಳಿಗೆ ಕೊಂಡೊಯ್ಯುವುದಾಗಿ ಜಿಂದ್‌ನಲ್ಲಿ ಅವರು ಘೋಷಿಸಿದರು.

ಈ ಘಟನೆಯು ಎರಡು ಚಾರಿತ್ರಿಕ ಘಟನೆಗಳನ್ನು ನೆನಪಿಸುತ್ತದೆ. ಮೊದಲನೆಯದು, ಹಿಟ್ಲರ್‌ನ ಆಕ್ರಮಣದಿಂದ ತಪ್ಪಿಸಿಕೊಳ್ಳಲು, ಜರ್ಮನಿಯೊಂದಿಗಿನ ತನ್ನ ಗಡಿಯಲ್ಲಿ ಮ್ಯಾಜಿನೋಟ್ ರೇಖೆಯನ್ನು ಫ್ರಾನ್ಸ್ ನಿರ್ಮಿಸಿತು. ಎಷ್ಟು ಬಲವಾದ ಕೋಟೆ-ಕೊತ್ತಲಗಳನ್ನು ಅಲ್ಲಿ ಫ್ರಾನ್ಸ್ ನಿರ್ಮಿಸಿತು ಎಂದರೆ, ಅದು ಅಬೇಧ್ಯವೆಂದು ಪರಿಗಣಿಸಲ್ಪಟ್ಟಿತ್ತು. ಆದರೆ,

➡ ಮುಂದಿನ ಪುಟಕ್ಕೆ

➡ ಹಿಂದಿನ ಪುಟದಿಂದ

1,300 ರೂಗಳು.

ಅಂದಹಾಗೆ, ಈ ಎಲ್ಲಾ ಸರಾಸರಿ ಮಾಸಿಕ ಆದಾಯದ ಅಂಕಿಗಳು ಎಲ್ಲಾ ಮೂಲಗಳಿಂದಲೂ ಬರುವ ಆದಾಯಗಳನ್ನು ಒಳಗೊಂಡಿರುತ್ತವೆ. ಕೇವಲ ಕೃಷಿಯಿಂದ ಮಾತ್ರವಲ್ಲ, ಜಾನುವಾರು ಸಾಕಣೆ, ಕೃಷಿಯೇತರ ವ್ಯಾಪಾರ, ಕೂಲಿ, ಸಂಬಳ ಮುಂತಾದವುಗಳಿಂದ ಬರುವ ಎಲ್ಲ ಆದಾಯವೂ ಅದರಲ್ಲಿ ಸೇರಿಕೊಂಡಿದೆ.

ಪ್ರತಿಭಟನಾ ನಿರತ ರೈತರನ್ನು ಬೆದರಿಸುವ ಮತ್ತು ಭಯಹುಟ್ಟಿಸುವ ಪ್ರತಿಯೊಂದು ಪ್ರಯತ್ನವೂ ಪ್ರತಿಭಟಿಸುವ ರೈತರ ಸಂಖ್ಯೆಯನ್ನು ಹೆಚ್ಚಿಸುತ್ತಲೇ ಇದೆ. ಅವರ ಹೆಸರು ಕೆಡಿಸುವ ಪ್ರತಿಯೊಂದು ಕೃತ್ಯವೂ ಗೋದೀ(ಆಸ್ಥಾನ) ಮಾಧ್ಯಮಗಳಲ್ಲಿ ಭಾರಿ ಸೆಳೆತ ಹೊಂದಿರುವಂತೆ ತೋರುತ್ತದೆಯಾದರೂ ವಾಸ್ತವವಾಗಿ ವ್ಯತಿರಿಕ್ತ ಪರಿಣಾಮವನ್ನೇ ಬೀರಿದೆ. ಆದರೂ, ಭಯಾನಕವಾಗಿ ತೋರುವ ಅಂಶವೆಂದರೆ, ಸರ್ಕಾರದ ನಿರಂಕುಶ ಪ್ರವೃತ್ತಿ ಮತ್ತು ಅದರ ಬಲ ಪ್ರಯೋಗದ ಕ್ರೂರ ಪ್ರಯತ್ನಗಳನ್ನು ಹಿಮ್ಮೆಟ್ಟಿಸಲಾಗಿಲ್ಲ.

ಬಹುಶಃ ಈ ವಿವಾದದಲ್ಲಿ ಎದುರಾಗಿರುವ ದುಸ್ತರವಾದ ಒಂದು ಅಡಚಣೆಯೆಂದರೆ ಅದು ವೈಯುಕ್ತಿಕ ಅಹಂ ಎಂಬುದು ಕಾರ್ಪೊರೇಟ್ ಮಾಧ್ಯಮದ ಅನೇಕರಿಗೆ ತಿಳಿದಿದೆ. ಬಿಜೆಪಿಯೊಳಗಿನ ಅನೇಕರಿಗೆ ಅದು ಇನ್ನೂ ಚೆನ್ನಾಗಿ ತಿಳಿದಿದೆ. ನೀತಿಗಳಿಗೆ ಸಂಬಂಧಿಸಿದ ವಿಷಯವೂ ಅಲ್ಲ, ಅತಿ ಶ್ರೀಮಂತ ಕಾರ್ಪೊರೇಟ್‌ಗಳಿಗೆ ನೀಡಿದ ಭರವಸೆಗಳೂ ಅಲ್ಲ, ಕಾನೂನಿನ ಪಾವಿತ್ರ್ಯತೆಯೂ ಅಲ್ಲ. ಅದೇನೆಂದರೆ, ದೊರೆ ಮಾಡಿದ್ದಕ್ಕೆ ದಂಡವಿಲ್ಲ, ಅಷ್ಟೇ. ದೊರೆ ಯಾವ ತಪ್ಪನ್ನೂ ಮಾಡಲಾರ. ಈ ಬಗ್ಗೆ ದೊಡ್ಡ ದೊಡ್ಡ ದಿನಪತ್ರಿಕೆಗಳಲ್ಲಿ ಒಂದೇ ಒಂದು ಸಂಪಾದಕೀಯವೂ ಇಲ್ಲ. ಗೊತ್ತಿದ್ದರೂ ಅವರು ಪಿಸುಗುಡುತ್ತಿಲ್ಲ.

ಈ ಗೊಂದಲದ ವಾತಾವರಣದಲ್ಲಿ ಅಹಂ ಎಷ್ಟು ಮುಖ್ಯ? ರೈತರ ಬಿಡಾರದಲ್ಲಿ ಇಂಟರ್‌ನೆಟ್ ಬಂದ್ ಮಾಡಿದ್ದರ ಬಗ್ಗೆ ಅಮೇರಿಕಾದ ಒಬ್ಬ ಪಾಪ್ ಹಾಡುಗಾರ್ತಿ ರಿಹಾನಾ ಬಹಳ ಸರಳ ಟ್ವೀಟ್ ಮಾಡಿದ್ದಳು–"ನಾವು ಈ ಬಗ್ಗೆ ಏಕೆ ಮಾತನಾಡುತ್ತಿಲ್ಲ?" ಇದಕ್ಕಿಂತ ಒಂದು ಅಕ್ಷರ ಹೆಚ್ಚೂ ಇಲ್ಲ; ಕಡಿಮೆಯೂ ಇಲ್ಲ. ಅವಳು ಯಾರನ್ನೂ ದೂಷಿಸಿರಲೂ ಇಲ್ಲ ಮತ್ತು ಕೃಷಿ ಕಾನೂನುಗಳ ಬಗ್ಗೆ ಯಾವ ನಿಲುವನ್ನೂ ಪ್ರಕಟಿಸಿರಲಿಲ್ಲ – ಕೃಷಿ ಕಾನೂನುಗಳನ್ನು ಬಹಿರಂಗವಾಗಿ ಶ್ಲಾಘಿಸಿದ ಐಎಂಎಫ್ ನ ಮುಖ್ಯ ಅರ್ಥಶಾಸ್ತ್ರಜ್ಞಳಂತಲ್ಲದೆ.

ಸ್ವೀಡನ್ನಿನ ಹದಿನೆಂಟು ವಯಸ್ಸಿನ ಶಾಲಾ ಬಾಲಕಿ–ಪರಿಸರವಾದಿ ಗ್ರೇಟಾ ಥುನ್‌ಬರ್ಗ್ ಕೂಡ ತನ್ನ ಟ್ವೀಟ್ ಮೂಲಕ ರೈತರ ಪ್ರತಿಭಟನೆಯ ಮೂಲಭೂತ ಹಕ್ಕುಗಳನ್ನು ಸಮರ್ಥಿಸಿದ್ದಳು.

ಇಲ್ಲ. ಕಲಾವಿದೆ ರಿಹಾನಾ ಮತ್ತು ಪರಿಸರವಾದಿ ಗ್ರೇಟಾ ಥುನ್‌ಬರ್ಗ್ ಅಪಾಯಕಾರಿ ವ್ಯಕ್ತಿಗಳು! ಅವರು ದಯೆ–ದಾಕ್ಷಿಣ್ಯಕ್ಕೆ ಅರ್ಹರಲ್ಲ. ದೆಹಲಿ ಪೋಲೀಸರು ಈಗಾಗಲೇ ಕಾರ್ಯಪ್ರವೃತ್ತರಾಗಿದ್ದಾರೆ. ಈಗ ಈಗ ಅದು ಜಾಗತಿಕ ಮಟ್ಟದ್ದು. ನಾಳೆ ಅವರು ನಭೋ ಮಂಡಲದ್ದು ಎಂದು ಅವರು ಕಂಡುಕೊಂಡರೆ, ನಾನೇನೂ ಅವರನ್ನು ಅಪಹಾಸ್ಯ ಮಾಡಲಾರೆ. ಅಂತರ್ಜಾಲದ ಬಗ್ಗೆ ನನಗೆ ಬಹಳ ಹಿಡಿಸಿದ ಮಾತೊಂದಿದೆ: "ನಮ್ಮ ಭೂಮಂಡಲದ ಹೊರಗೆ ಬುದ್ಧಿಮತ್ತೆ ಇದೆ ಎಂಬುದಕ್ಕೆ, ಅವರು ನಮ್ಮಷ್ಟಕ್ಕೆ ಇರಲು ನಮ್ಮನ್ನು ಬಿಟ್ಟಿದ್ದಾರೆ ಎಂಬುದೇ ಒಂದು ಖಚಿತ ಪರಾವೆ"!

➡ ಹಿಂದಿನ ಪುಟದಿಂದ

ಸಮಯ ಬಂದಾಗ ಜರ್ಮನ್ನರು ಅದನ್ನು ಬೈಪಾಸ್ ಮಾಡಿ, ಆರ್ಡೆನ್ಸ್ ಅರಣ್ಯಗಳ ಮೂಲಕ ಯಾವುದೇ ತಡೆಯಿಲ್ಲದೆ ಫ್ರಾನ್ಸ್‌ಗೆ ನುಗ್ಗಿದರು. ಎರಡನೆಯದು, ದೆಹಲಿ ಮತ್ತು ಶಿಮ್ಲಾದಲ್ಲಿ ಬ್ರಿಟಿಷರೊಂದಿಗೆ ನಡೆದ ಮಾತುಕತೆಗಳಲ್ಲಿ ಯಾವುದೇ ಪ್ರಗತಿ ಸಾಧಿಸಲಿಲ್ಲ ಎಂಬುದನ್ನು ಮನಗಂಡ ಮಹಾತ್ಮ ಗಾಂಧಿ, ಗುಜರಾತಿನ ದಂಡಿಯಲ್ಲಿ ಒಂದು ಚಿಟಿಕೆ ಉಪ್ಪನ್ನು ಹೊಂದಲು, ಒಂದು ವಿರುದ್ಧ ದಿಕ್ಕಿನಲ್ಲಿ ಪಯಣಿಸಿದರು. ಅವರ ಈ ನಿರ್ಧಾರವು ಭಾರತದ ಉಳಿದ ಭಾಗಗಳಿಗೂ ತನ್ನ ಸಂದೇಶವನ್ನು ಪಸರಿಸಲು, ಅದನ್ನು ಸರ್ವಮಾನ್ಯಗೊಳಿಸಲು ಮತ್ತು ಅದಕ್ಕೆ ಇನ್ನಷ್ಟು ಬಲ ತುಂಬಲು ಸಹಾಯ ಮಾಡಿತು.

ರೈತರು ದೆಹಲಿಯನ್ನು ಅಕ್ಷರಶಃ ಮತ್ತು ಲಾಕ್ಷಣಿಕವಾಗಿ ಪ್ರವೇಶಿಸದಂತೆ ಮಾಡುವಲ್ಲಿ ಮೋದಿ ಮತ್ತು ಅಮಿತ್ ಶಾ ಬಹು ದೊಡ್ಡ ತಪ್ಪು ಲೆಕ್ಕಾಚಾರಮಾಡಿದ್ದಾರೆ. ರಾಕೇಶ್ ಟಿಕೈತ್ ತನ್ನ ಕಾರ್ಯತಂತ್ರವನ್ನು ಬದಲಿಸಿಕೊಳ್ಳುವಂತೆ ಅವರು ಒತ್ತಡ ಹೇರಿದರು. ಟಿಕೈತ್ ಈಗ ಮೂರು ಕಾರ್ಯಗಳಲ್ಲಿ ತೊಡಗಿದ್ದಾರೆ: (1) ಪಶ್ಚಿಮ ಉತ್ತರ ಪ್ರದೇಶವನ್ನು, ಪಂಜಾಬ್ ಅಲ್ಲ, ತಮ್ಮ ಚಳುವಳಿಯ ಕೇಂದ್ರವನ್ನಾಗಿ ಮಾಡಿಕೊಂಡಿದ್ದಾರೆ. 2017ರಲ್ಲಿ ಉತ್ತರ ಪ್ರದೇಶದ ಅಧಿಕಾರ ಹಿಡಿಯಲು ಬಿಜೆಪಿಗೆ ಅವಕಾಶ ಮಾಡಿಕೊಟ್ಟದ್ದೇ ಈ ಪಶ್ಚಿಮ ಉತ್ತರ ಪ್ರದೇಶ. ಈ ಭಾಗದಲ್ಲಿ 100ಕ್ಕೂ ಹೆಚ್ಚು ವಿಧಾನ ಸಭಾ ಸ್ಥಾನಗಳನ್ನು ಬಿಜೆಪಿ ಗೆದ್ದಿತ್ತು. ಜಾಟರು ಮತ್ತು ಮುಸ್ಲಿಮರ ನಡುವೆ ಕೋಮು ಗಲಭೆ ಸೃಷ್ಟಿಸುವ ಮೂಲಕ ಬಿಜೆಪಿ ಈ ಗೆಲುವು ಸಾಧಿಸಿತ್ತು (ಮುಜಫರ್ ನಗರದ ಗಲಭೆಗಳನ್ನು ನೆನಪಿಸಿಕೊಳ್ಳಿ). ಸಮುದಾಯಗಳ ನಡುವಿನ ಈ ಬಿರುಕುಗಳನ್ನು ಮುಚ್ಚುವ ಕೆಲಸವನ್ನು ಟಿಕೈತ್ ಈಗ ಮಾಡಿದ್ದಾರೆ. ಎಲ್ಲರನ್ನೂ ಸರ್ಕಾರದ ವಿರುದ್ಧ ಒಗ್ಗೂಡಿಸುವ ಮೂಲಕ, ಪಶ್ಚಿಮ ಯುಪಿಯಲ್ಲಿ ಬಿಜೆಪಿಯ ಗೆಲುವಿನ ಸೂತ್ರವನ್ನು ಧೂಳಿಪಟ ಮಾಡಿದ್ದಾರೆ. (2) ಹಿಂದಿ ಅಥವಾ ಹಿಂದೂ ಹೃದಯ ಭೂಮಿಯಲ್ಲಿ ಉಳಿದವರಿಗಿಂತ ಹೆಚ್ಚು ಹಿಡಿಸುವ ನಾಯಕನಾಗಿ ಟಿಕೈತ್ ಹೊರ ಹೊಮ್ಮಿರುವುದರಿಂದ, ಪ್ರತಿಭಟನೆಯನ್ನು ಅವರು ಮಧ್ಯಪ್ರದೇಶ, ರಾಜಸ್ಥಾನ, ಹರಿಯಾಣ, ಉತ್ತರ ಪ್ರದೇಶ, ಉತ್ತರಾಖಂಡ, ಹಿಮಾಚಲ, ಬಿಹಾರ, ಛತ್ತೀಸ್‌ಗಢ, ಜಾರ್ಖಂಡ್ ರಾಜ್ಯಗಳಿಗೆ ಯಶಸ್ವಿಯಾಗಿ ಕೊಂಡೊಯ್ಯಲು ಸಾಧ್ಯವಾಗುತ್ತದೆ. ಈ ಪ್ರದೇಶಗಳಲ್ಲಿಯೇ ಬಿಜೆಪಿಯು ಕಳೆದ ಲೋಕಸಭಾ ಚುನಾವಣೆಯಲ್ಲಿ ಭಾರಿ ಗೆಲುವು ಸಾಧಿಸಿತ್ತು. ಹಾಗಾಗಿ, ಈ ಪ್ರದೇಶಗಳಲ್ಲಿ ರೈತರ ಪ್ರತಿಭಟನೆಯು ತೀವ್ರಗೊಂಡರೆ, ಅದು ಬಿಜೆಪಿಗೆ ಪ್ರತಿಕೂಲವಾಗಿ ಪರಿಣಮಿಸಲಿದೆ. ಪ್ರತಿಭಟನೆಗಳು ದಿಲ್ಲಿ ಮತ್ತು ಅದರ ಆಸುಪಾಸಿನ ಪ್ರದೇಶಗಳಿಗೆ ಸೀಮಿತಗೊಳ್ಳುವಂತೆ ನೋಡಿಕೊಂಡಿದ್ದರೆ ಅದು ಬಿಜೆಪಿಗೆ ಹೆಚ್ಚಿನ ಲಾಭ ತರುತ್ತಿತ್ತು. (3) ಭಾರತದಲ್ಲಿ, ರಾಜಕೀಯ ಪಕ್ಷಗಳು ತಮ್ಮ ಸಾಧನೆ ಅಥವಾ ಪ್ರಣಾಳಿಕೆಗಳ ಆಧಾರದ ಮೇಲೆ ಚುನಾವಣೆಯನ್ನು ಯಾವತ್ತೂ ಗೆದ್ದಿಲ್ಲ. ಧರ್ಮ, ಜಾತಿ, ಪ್ರದೇಶ, ಹಿಂದುಳಿದಿರುವಿಕೆ ಮುಂತಾದ ಅಸ್ಮಿತೆಗಳನ್ನು ಬಡಿದೆಬ್ಬಿಸುವ ಮೂಲಕ ಚುನಾವಣೆಯನ್ನು ಗೆದ್ದಿವೆ. ಈ ವಿಷಯದಲ್ಲಿ ಬಿಜೆಪಿಯ ನೈಪುಣ್ಯತೆಗೆ ಸಾಟಿಯೇ ಇಲ್ಲ. ಆದರೆ, ಈಗ ರೈತ ಚಳುವಳಿಯು ಒಂದು ದೊಡ್ಡ ಉದ್ದೇಶದ ಸಲುವಾಗಿ, ಭೂಹೀನ ಕಾರ್ಮಿಕ, ಕುಶಲಕರ್ಮಿ, ಹಳ್ಳಿಯ ಅಂಗಡಿಕಾರ ಮುಂತಾದ ಉಪ–ಅಸ್ಮಿತೆಗಳನ್ನು ಅಳಿಸಿಹಾಕಿ, ರೈತ ಅಸ್ಮಿತೆಯನ್ನು ಎತ್ತಿ ನಿಲ್ಲಿಸಿದೆ. ಒಂದು ಅಸ್ಮಿತೆ, ಒಂದು ಕಾಳಜಿ ಮತ್ತು ಒಂದು ಬೇಡಿಕೆ ಈಗ ಪ್ರಾಧಾನ್ಯತೆ ಪಡೆದಿವೆ. ವಿಭಜನೆ ಮಾಡಲು ಏನೂ ಇಲ್ಲದುದರಿಂದ, ಮಹಾವಿಭಜಕನಿಗೆ ಆಳಲು ಸಾಧ್ಯವಿಲ್ಲ: ಈ ಪಾಠವನ್ನು ಬ್ರಿಟಿಷರು ಬಹಳ ತಡವಾಗಿ ಕಲಿತರು. ಬಿಜೆಪಿಯು ಅದನ್ನು ಬಹಳ ಶ್ರಮಪಟ್ಟು ಕಲಿಯಬೇಕಾಗುತ್ತದೆ.

ಆಟ ಬದಲಾಗಿದೆ. ಆದರೆ, ಗೆದ್ದವರೇ ಎಲ್ಲವನ್ನೂ ಬಾಚಿಕೊಳ್ಳುವ ನಿಯಮ ಬದಲಾಗಿಲ್ಲ ಎಂಬುದನ್ನು ರೈತರು ಸ್ಪಷ್ಟಪಡಿಸಿದ್ದಾರೆ. ದುರಹಂಕಾರಿ ಮತ್ತು ಅತಿಕ್ರಮಣ ಸ್ವಭಾವದ ಸರ್ಕಾರವು ಮಾಡಿದ ಈ ನಿಯಮವು ಅದನ್ನೇ ಮತ್ತೆ ಕಚ್ಚಬಹುದು. ಗಾಜಿಪುರದ ರಸ್ತೆಯಲ್ಲಿ ನೆಟ್ಟ ಮೊಳೆಗಳು ಬಿಜೆಪಿಯ ಶವಪೆಟ್ಟಿಗೆಗೆ ಹೊಡೆಯುವ ಮೊಳೆಗಳಾಗಬಹುದು. ಮುದ್ದು ಮಾಡಿ ಬೆಳಸಿದ ಮತ್ತು ತಾತ್ಸಾರ ಮನೋಭಾವ ಹೊಂದಿರುವ ದೆಹಲಿಯ ಮೇಲ್ಮಧ್ಯಮ ವರ್ಗಗಳು ಈಗ ಶಾಂತಿಯಿಂದ ಬದುಕಬಹುದು – ಯುದ್ಧವನ್ನು ಅವರಿಂದ ಬೇರೆಯವರು ವಹಿಸಿಕೊಂಡಿದ್ದಾರೆ, ಅವರು ಇನ್ನು ಮುಂದೆ ಲೆಕ್ಕಕ್ಕಿಲ್ಲ.

ಕೇಂದ್ರ ಕಾರ್ಮಿಕ ಸಂಘಟನೆಯ ಸ್ಥಾಪನೆ

ಪುಟ 11 ರಿಂದ

ಯುದ್ಧದ ಸಮಯದಲ್ಲಿ, ಅವರು ಇಂಗ್ಲೆಂಡ್‌ನಲ್ಲಿ ನಡೆದ 'ವರ್ಕರ್ಸ್ ವೆಲ್ಫೇರ್ ಲೀಗ್ ಆಫ್ ಇಂಡಿಯಾ'ದ ಅಧಿವೇಶನದಲ್ಲಿ ಭಾಗವಹಿಸಿದ್ದರು. 1920 ರಲ್ಲಿ ಅವರು ವಾಯುವ್ಯ ರೈಲ್ವೆ ಕಾರ್ಮಿಕರ ಮುಷ್ಕರಕ್ಕೆ ಸಕ್ರಿಯ ಬೆಂಬಲ ನೀಡಿದರು.

ಭಾರತದ ಸಾಮಾಜಿಕ ಮತ್ತು ರಾಜಕೀಯ ಜೀವನದ ವಿವಿಧ ಸ್ಥರಗಳ ಪ್ರತಿನಿಧಿಗಳು, ಕಾಂಗ್ರೆಸ್ ನಾಯಕತ್ವದ ಮುಂಚೂಣಿಯಲ್ಲಿದ್ದವರು, ಕಾರ್ಮಿಕ ಮುಖಂಡರು, ಬೂರ್ಜ್ವಾ ಸಾಮಾಜಿಕ ಕಾರ್ಯಕರ್ತರ ಒಂದು ಭಾಗ ಮತ್ತು ಕೈಗಾರಿಕಾ ಶ್ರೀಮಂತರ ಒಂದು ಭಾಗ ಕೂಡ ಎಐಟಿಯುಸಿಯ ಉದ್ಘಾಟನಾ ಅಧಿವೇಶನದಲ್ಲಿ ಭಾಗವಹಿಸಿದರು ಮತ್ತು ತಮ್ಮದೇ ಆದ ರೀತಿಯಲ್ಲಿ ಕಾರ್ಮಿಕರ ವಿಷಯದಲ್ಲಿ ತಮ್ಮ ಸಹಾನುಭೂತಿಯನ್ನು ವ್ಯಕ್ತಪಡಿಸಲು ಪ್ರಯತ್ನಿಸಿದರು ಎಂಬುದು ಗಮನಾರ್ಹ. ಆದರೆ ಅತ್ಯಂತ ಗಮನಾರ್ಹ ಸಂಗತಿಯೆಂದರೆ, ಗಾಂಧೀಜಿಯವರ ಅನುಪಸ್ಥಿತಿ, ಅವರು ಸಮ್ಮೇಳನಕ್ಕೆ ಒಂದು ಸಂದೇಶವನ್ನು ಸಹ ಕಳುಹಿಸಲಿಲ್ಲ. ಈ ಕುರಿತು ಎಸ್. ಎ. ಡಾಂಗೆ ಹೀಗೆ ಬರೆದಿದ್ದಾರೆ : "ತಿಳಕ್ ಎಐಟಿಯುಸಿ ಯ ಪ್ರಾರಂಭಿಕ ಹಂತದಲ್ಲಿ ಎಐಟಿಯುಸಿ ರಚನೆಯ ಮೂಲ ಚೈತನ್ಯವಾಗಿದ್ದರೂ, ಅವರು ಸಾಯುವ ಮುನ್ನ, ಮಹಾತ್ಮ ಗಾಂಧಿಯವರೊಂದಿಗೆ ಸಹ ಸಮಾಲೋಚಿಸಿದ್ದರು. ಆದರೆ ಅವರು ಈ ಕಲ್ಪನೆಯನ್ನು ಒಪ್ಪಲಿಲ್ಲ. ಮತ್ತು ಎಐಟಿಯುಸಿ ಅಧಿವೇಶನ ನಡೆದಾಗ, ಹಾಜರಾಗಲು ಅಥವಾ ಸಂದೇಶ ಕಳುಹಿಸಲು ನರಾಕರಿಸಿದರು. ಅವರು ಒಂದು ಸೈದ್ಧಾಂತಿಕವಾದ ಮತ್ತು ತಂತ್ರಗಾರಿಕೆಯ ನಿಲುವನ್ನು ಈ ವಿಷಯದ ಕುರಿತು ಹೊಂದಿದ್ದರು. ಕಾರ್ಮಿಕ ವರ್ಗದ ಮತ್ತು ಅದರ ಕಾರ್ಮಿಕ ಸಂಘಗಳ ಕೇಂದ್ರ ಸಂಘಟನೆಯಂತಹ ರಚನೆಯ ಯಾವುದೇ ವಿಚಾರವನ್ನು ಅವರು ತಳ್ಳಿಹಾಕಿದರು. ಆದಾಗ್ಯೂ, ಗಾಂಧೀಜಿಯವರ ಈ ಪಾತ್ರವು ಅವರ ರಾಜಕೀಯ ಸಿದ್ಧಾಂತಕ್ಕೆ ಅನುಗುಣವಾಗಿದೆ. ಕಾರ್ಮಿಕ ವರ್ಗವು ರಾಷ್ಟ್ರೀಯ ಮಟ್ಟದಲ್ಲಿ ಸಂಘಟಿತವಾಗುವುದರಿಂದ ಉಂಟಾಗುವ ಅಪಾಯಕಾರಿ ಪರಿಣಾಮಗಳನ್ನು ಅವರು ದೂರದೃಷ್ಟಿಯಿಂದ ಗ್ರಹಿಸಿದರು."

ಕಾರ್ಮಿಕರ ಮಧ್ಯೆ ಜನಪ್ರಿಯರಾಗಿದ್ದ ಮತ್ತು ಅವರನ್ನು ಕಾರ್ಮಿಕ ಸಂಘಗಳಲ್ಲಿ ಸಂಘಟಿತರಾಗಲು ಒತ್ತಾಯಿಸುತ್ತಿದ್ದ ಬಾಲ ಗಂಗಾಧರ ತಿಳಕ್ ಈ ಸಂಘಟನೆಯ ಹುಟ್ಟನ್ನು ನೋಡಲು ಇರಲಿಲ್ಲ. 1920 ರ ಆಗಸ್ಟ್ 1 ರಂದು ಅವರು ನಿಧನರಾದುದನ್ನು ಸಮ್ಮೇಳನ ದುಃಖದಿಂದ ದಾಖಲಿಸಿತು.

ಸಮ್ಮೇಳನದ ದಿನಗಳಲ್ಲಿ ಕಾಂಗ್ರೆಸ್ ನಾಯಕರು ಮತ್ತು ಲಕ್ಷಾಧಿಪತಿಗಳ ದೊಡ್ಡ ಗುಂಪೇ ಭಾಗವಹಿಸಿತ್ತು. ಅವರಲ್ಲಿ ಹೆಚ್ಚಿನವರಿಗೆ ಕಾರ್ಮಿಕರೊಂದಿಗೆ ಯಾವುದೇ ಸಂಬಂಧವಿದ್ದಿರಲಿಲ್ಲ. ಕಾರ್ಮಿಕರ ಚಳವಳಿಯೊಂದಿಗೆ ನೇರವಾಗಿ ಆಸಕ್ತಿ ಹೊಂದಿದ್ದ ಮತ್ತು ಸಂಪರ್ಕ ಹೊಂದಿದ್ದ ಕೆಲವರು ಮಾತ್ರ ಇದ್ದರು. ಆದರೆ ಈ ಅವಧಿಯಲ್ಲಿ ಅನೇಕ ವರ್ಗ–ಸಂಘರ್ಷಗಳಿಂದ ಪ್ರಚೋದನೆಗೊಂಡ ಮತ್ತು ರಾಜಕೀಯ ಪ್ರಕ್ಷುಬ್ಧತೆಯ ಒಂದು ಹಂತವನ್ನು ಪರಿಕ್ರಮಿಸುತ್ತಿದ್ದ ಕಾರ್ಮಿಕರು ಈ ಸಮ್ಮೇಳನದಲ್ಲಿ ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಕಾರ್ಮಿಕರೊಂದಿಗೆ ಮುಂಬಯಿಯ ರಾಜಕೀಯವಾಗಿ ಪ್ರಗತಿಪರರಾಗಿದ್ದ ವಿದ್ಯಾರ್ಥಿಗಳು ಜೊತೆಯಾಗಿ ನಿಂತರು, ಅವರಲ್ಲಿ ಪ್ರಮುಖರಾದ ಎಸ್.ಎ.ಡಾಂಗೆ ಮತ್ತು ಆರ್.ಎಸ್. ನಿಂಬಳ್ಕರ್ ಇದ್ದರು. ಈ ವಿದ್ಯಾರ್ಥಿಗಳು ಸಮ್ಮೇಳನದ ಯಶಸ್ಸಿಗೆ ಸ್ವಯಂಸೇವಕ–ಸೇವೆ ಸೇರಿದಂತೆ ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸಿದರು.

ಕಮ್ಯುನಿಸ್ಟ್ ಚಳವಳಿಯ ಪ್ರಾರಂಭ ಮತ್ತು ಭಾರತದ ಕಾರ್ಮಿಕ ವರ್ಗದ ರಾಜಕೀಯ ಪಕ್ಷದ ಜನನ ಇನ್ನಷ್ಟೇ ನಡೆಯಬೇಕಾಗಿದ್ದ ಅವಧಿಯಲ್ಲಿ ಎಐಟಿಯುಸಿಯ ಸ್ಥಾಪನಾ ಅಧಿವೇಶನ ನಡೆಯಿತು. ಸಾಮ್ರಾಜ್ಯಶಾಹಿ ವಿರೋಧಿ ಹೋರಾಟದ ಸಂಪೂರ್ಣ ನಾಯಕತ್ವ ರಾಷ್ಟ್ರೀಯ ಬೂರ್ಜ್ವಾಗಳ ಪಾಲಾಗಿತ್ತು. ಆದರೆ ಅದೇ ಸಮಯದಲ್ಲಿ, ವಿಶ್ವದ ರಾಜಕೀಯ ಬದಲಾವಣೆಗಳು ಮತ್ತು ಮೊದಲ ಸಮಾಜವಾದಿ ಪ್ರಭುತ್ವದ ಸ್ಥಾಪನೆ ಮತ್ತು ಅದರ ಆದರ್ಶವು ಭಾರತದ ಕಾರ್ಮಿಕರ ಪ್ರಗತಿಪರ ವಿಭಾಗದ ಮೇಲೆ ಕ್ರಾಂತಿಕಾರಿ ಪರಿಣಾಮವನ್ನು ಬೀರಿತು. ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ ಇಂತಹ ಪರಸ್ಪರ ವಿರುದ್ಧ–ಸೆಳಹುಗಳ ಘಟನೆಗಳಲ್ಲಿ ಸ್ಥಾಪನೆಯಾದಾಗ, ಭಾರತದ ಸಾಮ್ರಾಜ್ಯಶಾಹಿ–ವಿರೋಧಿ ಚಳವಳಿಯ ಬೂರ್ಜ್ವಾ ನಾಯಕತ್ವಕ್ಕೆ ಈ ಕಾರ್ಮಿಕರ ಸಂಘಟನೆಯ ಚುಕ್ಕಾಣಿ ನೀಡಲಾಯಿತು ಮತ್ತು ಐತಿಹಾಸಿಕವಾಗಿ ಭಾರತದ ಕಾರ್ಮಿಕ ವರ್ಗವು ರಾಷ್ಟ್ರೀಯ ಬೂರ್ಜ್ವಾ ವರ್ಗದೊಂದಿಗೆ ಹೋರಾಟಕ್ಕಾಗಿ ಒಂದು ಐಕ್ಯ ವೇದಿಕೆಯಲ್ಲಿ ಕೈಜೋಡಿಸಿತು.

ಇದರ ಪರಿಣಾಮವಾಗಿ, ರಾಷ್ಟ್ರೀಯ ನಾಯಕತ್ವದ ವರ್ಗ–ಮೂಲದ ಕಾರಣದಿಂದ ಬಂದ ನಿರಂತರ ದೌರ್ಬಲ್ಯ ಮತ್ತು ಹೊಯ್ದಾಟಗಳು ಎಐಟಿಯುಸಿಯ ಚಿಂತನೆ ಮತ್ತು ಚಟುವಟಿಕೆಗಳಲ್ಲಿ ನೇರವಾಗಿ ಪರಿಣಾಮ ಬೀರಿದವು. ಆದರೆ ಕಾರ್ಮಿಕ ವರ್ಗ ರಾಜಕೀಯ ಪ್ರಬುದ್ಧತೆಯನ್ನು ಪಡೆಯುವ ಐತಿಹಾಸಿಕ ಹಾದಿಯಲ್ಲಿ, ಕಮ್ಯುನಿಸ್ಟ್ ಚಳವಳಿಯ ಆರಂಭ, ಭಾರತದ ಕಮ್ಯುನಿಸ್ಟ್ ಪಕ್ಷದ ರಚನೆ, ವರ್ಗ ಹೋರಾಟದ ತೀವ್ರತೆ ಮತ್ತು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ರಾಜಕೀಯ ರಂಗದಲ್ಲಿ ಅನೇಕ ಬದಲಾವಣೆಗಳು, ಅನೇಕ ಸೈದ್ಧಾಂತಿಕ ಘರ್ಷಣೆಗಳು ಮತ್ತು ಹಲವಾರು ವಿಭಜನೆಗಳ ಪ್ರಕ್ರಿಯೆಯ ಮೂಲಕ ಈ ಸಂಘಟನೆ ಮುನ್ನಡೆಯಬೇಕಾಯಿತು. ಈ ವಿರೋಧಾಭಾಸಗಳು ಮತ್ತು ವಿಭಜನೆಗಳ ಸಂದರ್ಭದಲ್ಲಿ ನಾಯಕತ್ವದ ಸುಧಾರಣಾವಾದಿ ಮತ್ತು ರಾಜಿಮಾಡಿಕೊಳ್ಳುತ್ತಿದ್ದ ವಿಭಾಗವು ಎಐಟಿಯುಸಿಯನ್ನು ತೊರೆದು ಸಂಘಗಳ ಒಂದು ಗುಂಪಿಗೆ ಜನ್ಮ ನೀಡಿತು, ಇವರೆಲ್ಲರೂ ಖಚಿತ ಬೂರ್ಜ್ವಾ ಸುಧಾರಣಾವಾದಕ್ಕಾಗಿ ಪರಸ್ಪರ ಪೈಪೋಟಿ ನಡೆಸಿದರು. ಈ ಪ್ರಕ್ರಿಯೆಯು 1947 ರವರೆಗೆ ಮುಂದುವರೆಯಿತು, ಆನಂತರ ಎಐಟಿಯುಸಿ ಮತ್ತು ಸಾಮಾನ್ಯವಾಗಿ ಕಾರ್ಮಿಕ ಚಳವಳಿಯ ಸಂಘಟನೆಯಲ್ಲಿ ಭಾರಿ ಮತ್ತು ಹೆಚ್ಚು ಮಹತ್ವದ ಬದಲಾವಣೆಗಳು ಸಂಭವಿಸಿದವು.

'ಆಂದೋಲನ ಜೀವಿ' ಗಳೆಂದು ಹೀಯಾಳಿಸಿದ 'ಕಾರ್ಪೊರೇಟ್ ಜೀವಿ'

ಪುಟ 2 ರಿಂದ

ಅವರ ಸರಕಾರ ಎಂತಹ ಒತ್ತಡಕ್ಕೆ ತಲೆಬಾಗಿದೆ ಎಂಬುದನ್ನು ಬಯಲಿಗೆ ತಂದಿದೆ ಎಂದು ಟಿಪ್ಪಣಿ ಮಾಡಿದೆ.

ಪ್ರಧಾನ ಮಂತ್ರಿಗಳು ಮತ್ತು ಬಿಜೆಪಿ ಯಾವುದೇ ರೈತ ಸಂಘಟನೆ, ಅಥವ ರಾಜ್ಯ ಸರಕಾರದೊಡನೆ, ಅಷ್ಟೇ ಏಕೆ, ಸ್ವತ: ಸಂಸತ್ತಿನಲ್ಲೂ ಸಮಾಲೋಚನೆ ನಡೆಸದೆಯೇ ಮೂರು ಕಾರ್ಪೊರೇಟ್–ಪರ , ರೈತ–ವಿರೋಧಿ ಮತ್ತು ಜನ–ವಿರೋಧಿ ಕೃಷಿ ಕಾಯ್ದೆಗಳನ್ನು ತುರುಕಿಸಿದ್ದಾರೆ.

ರೈತರು, ಈ ಮೂರು ಕಾಯ್ದೆಗಳನ್ನು ರದ್ದುಗೊಳಿಸಬೇಕು, ಸಿ2+50% ಸೂತ್ರದಂತೆ ಎಂ.ಎಸ್.ಪಿ.ಗೆ ಕಾನೂನಿನ ಖಾತ್ರಿ ಕೊಡಬೇಕು, ವಿದ್ಯುಚ್ಛಕ್ತಿ(ತಿದ್ದುಪಡಿ) ಮಸೂದೆ, 2020ನ್ನು ಹಿಂತೆಗೆದುಕೊಳ್ಳಬೇಕು ಮತ್ತು ಪರಿಸರ ಮಾಲಿನ್ಯ ಸುಗ್ರೀವಾಜ್ಞೆಯ ರೈತ–ವಿರೋಧಿ ಪರಿಚ್ಛೇದಗಳನ್ನು ಕೈಬಿಡಬೇಕು ಎಂಬ ತಮ್ಮ ಎಲ್ಲ ನೈಜ ಬೇಡಿಕೆಗಳನ್ನು ಈಡೇರಿಸುವ ವರೆಗೆ ಹಿಂದಕ್ಕೆ ಸರಿಯುವದಿಲ್ಲ ಎಂದು ಎ.ಐ.ಕೆ.ಎಸ್. ಪುನರುಚ್ಚರಿಸಿದೆ.

ಪ್ರಧಾನಮಂತ್ರಿಗಳು ರೈತ ಸಮುದಾಯಕ್ಕೆ ಮಾಡಿರುವ ಈ ಅವಮಾನದ ವಿರುದ್ಧ ಬೃಹತ್ ಸ್ವರೂಪದ ಪ್ರತಿಭಟನೆಗಳನ್ನು ಸಂಘಟಿಸಬೇಕು ಮತ್ತು ದೇಶದ ಉದ್ದಗಲದಲ್ಲೂ ಇನ್ನಷ್ಟು ದೃಢನಿರ್ಧಾರದ ಸಾಮೂಹಿಕ ಹೋರಾಟಗಳಿಗೆ ಸಿದ್ಧರಾಗಬೇಕು ಎಂದು ತನ್ನ ಎಲ್ಲ ಘಟಕಗಳಿಗೆ ಹಾಗೂ ಭಾರತದ ಎಲ್ಲ ರೈತರಿಗೆ ಕರೆ ನೀಡಿದೆ.

ಹತ್ತು ಕೋಟಿ ಜನ ತೀವ್ರ ಬಡತನದತ್ತ: ವಿಶ್ವಬ್ಯಾಂಕ್

ಅನು: ನಾಗರಾಜ್ ನಂಜುಂಡಯ್ಯ

ವಿಶ್ವ ಬ್ಯಾಂಕ್ ತನ್ನ ಜನವರಿ 2021 ರ ವರದಿಯಲ್ಲಿ, ಜಾಗತಿಕ ಆರ್ಥಿಕತೆಯ ಮೇಲೆ ಮಹಾಸೋಂಕಿನ ಪರಿಣಾಮವನ್ನು ಅಂದಾಜಿಸಿ, ಬಡತನದ ಪ್ರಮಾಣವನ್ನು 2017ರ ಕೊನೆಯಲ್ಲಿ ಕಂಡ ಮಟ್ಟಕ್ಕೆ ತಳ್ಳಬಹುದು, ಹತ್ತು ಕೋಟಿಗೂ ಹೆಚ್ಚು ಜನರು ತೀವ್ರ ಬಡತನದತ್ತ ಸಾಗಬಹುದು ಎಂದು ಹೇಳಿದೆ. ಕಳೆದ ಮೂರು ತಿಂಗಳುಗಳಲ್ಲಿ (ನವೆಂಬರ್–ಜನವರಿ) ಜಾಗತಿಕ ಆರ್ಥಿಕ ವಿದ್ಯಮಾನಗಳ ಸ್ಥೂಲ ಸಮೀಕ್ಷೆ ಇಲ್ಲಿದೆ. ಜಾಗತಿಕ ಆರ್ಥಿಕದ ಈಗಿನ ಸ್ಥಿತಿ, 2021ರ ಬೆಳವಣಿಗೆಯ ಮುನ್ನೋಟ, ಆರ್ಥಿಕ ಕುಸಿತದಿಂದಾದ ಪ್ರತಿಭಟನೆಗಳ ಅಲೆ, ಈ ಅವಧಿಯ ಪ್ರಮುಖ ಆರ್ಥಿಕ ಒಪ್ಪಂದಗಳನ್ನು ಈ ಸಮೀಕ್ಷೆ ಒಳಗೊಂಡಿದೆ. ಇವು ಸಿಪಿಐ(ಎಂ) ಕೇಂದ್ರ ಸಮಿತಿ ಜನವರಿ 30–31ರ ಸಭೆಯಲ್ಲಿ ಅಂಗೀಕರಿಸಲಾದ ರಾಜಕೀಯ ವರದಿಯ ಆಯ್ದ ಭಾಗಗಳು.

ಜಾಗತಿಕ ಆರ್ಥಿಕತೆ

ಕೋವಿದ್–19 ಮಹಾಸೋಂಕು ಏಕಾಏಕಿಯಾಗಿ, ಹರಡುವ ಮುಂಚೆಯೇ, ಜಾಗತಿಕ ಆರ್ಥಿಕತೆಯು ತೀವ್ರವಾಗಿ ನಿಧಾನಗತಿಯಲ್ಲಿತ್ತು. ಮಹಾಸೋಂಕು ಇನ್ನೂ ಜಗತ್ತನ್ನು ಕಾಡುತ್ತಿರುವಾಗಲೇ, ವಿಶ್ವ ಬ್ಯಾಂಕ್ ತನ್ನ ಜನವರಿ 2021 ರ ವರದಿಯಲ್ಲಿ, ಜಾಗತಿಕ ಆರ್ಥಿಕತೆಯ ಮೇಲೆ ಅದರ ಪರಿಣಾಮವನ್ನು ಅಂದಾಜಿಸಿ, ಅದು 2020 ರಲ್ಲಿ ಶೇಕಡಾ 4.3 ರಷ್ಟು ಸಂಕುಚಿತಗೊಂಡಿದೆ ಎಂದಿದೆ. ಇದು "ಜಾಗತಿಕ ಆರ್ಥಿಕ ಹಿಂಜರಿತ"ಕ್ಕೆ ಕಾರಣವಾಗಿದೆ. ಇದರ ಆಳವು ಕಳೆದ ಒಂದುವರೆ ಶತಮಾನದ ಅವಧಿಯಲ್ಲಿ ಸಂಭವಿಸಿದ್ದ ಎರಡು ವಿಶ್ವ ಯುದ್ಧಗಳು ಮತ್ತು ಮಹಾ ಕುಸಿತವನ್ನು ಕೂಡಾ ಮೀರಿಸಿದೆ ಎಂದು ವರದಿ ಗುರುತಿಸಿದೆ.

ಜಾಗತಿಕ ಆರ್ಥಿಕ ಉತ್ಪಾದನೆಯು 2021 ರಲ್ಲಿ ಶೇಕಡಾ 4 ರಷ್ಟು ವಿಸ್ತರಿಸುವ ನಿರೀಕ್ಷೆಯಿದೆ. ಆದರೆ, ಇದು ಕೂಡಾ, ಮಹಾಸೋಂಕು– ಪೂರ್ವ ಅಂದಾಜುಗಳಿಗಿಂತ ಶೇಕಡಾ 5 ಕ್ಕಿಂತ ಹೆಚ್ಚು ಕಡಿತ ಕಂಡಿದೆ. ಈ ಅಂದಾಜು ಸಹ ಗಂಭೀರ ಎಚ್ಚರಿಕೆಗಳೊಂದಿಗೆ ಬಂದಿದೆ. ಇದು ಸಹ ಪ್ರಪಂಚದ ಎಲ್ಲಾ ದೇಶಗಳಲ್ಲಿ ಪರಿಣಾಮಕಾರಿ ಮಹಾಸೋಂಕು ನಿರ್ವಹಣೆ ಮತ್ತು ವ್ಯಾಕ್ಸಿನೇಷನ್ ಮತ್ತು ಇನ್ನಿತರೆ ಅಂಶಗಳ ಮೇಲೆ ಅವಲಂಬಿತವಾಗಿರುತ್ತದೆ. ವಿಶ್ವಬ್ಯಾಂಕ್ ನ ಅತ್ಯಂತ ನಿರಾಶಾದಾಯಕ ಅಂದಾಜಿನಂತೆ, ಜಾಗತಿಕ ಆರ್ಥಿಕತೆಯ ಕೇವಲ ಶೇ. 1.6 ರಷ್ಟು ಚೇತರಿಸಿಕೊಳ್ಳಬಹುದು. ಹೆಚ್ಚು ತೀವ್ರ ನಕಾರಾತ್ಮಕ ಅಂಶಗಳು ತಲೆದೋರಿದರೆ ಜಾಗತಿಕ ಆರ್ಥಿಕದ ಬೆಳವಣಿಗೆ 2021 ರಲ್ಲಿ ಸಹ ಋಣಾತ್ಮಕವಾಗಬಹುದು. ಮಹಾಸೋಂಕು ರೋಗ ಕಡಿಮೆಯಾದ ನಂತರವೂ ಜಾಗತಿಕ ಆರ್ಥಿಕ ಚಟುವಟಿಕೆಯು ಅದರ ಹಿಂದಿನ ಹಂತಗಳಿಗೆ ಮರಳುವುದು ಅಸಂಭವ ಎನ್ನಲಾಗಿದೆ.

ಪ್ರಮುಖ ಬಂಡವಾಳಶಾಹಿ ಆರ್ಥಿಕತೆಗಳು

2020 ರ ಮೊದಲಾರ್ಧದಲ್ಲಿ ಯು.ಎಸ್ ಆರ್ಥಿಕ ಚಟುವಟಿಕೆ 2008 ರ ಜಾಗತಿಕ ಹಣಕಾಸು ಬಿಕ್ಕಟ್ಟು ಅವಧಿಯ ಗರಿಷ್ಠ ಕುಸಿತದ ಮೂರು ಪಟ್ಟು ಕುಸಿದಿದೆ. ಅಧಿಕೃತ ಅಂಕಿ ಅಂಶಗಳ ಪ್ರಕಾರ, 2020ರಲ್ಲಿ ಉತ್ಪಾದನೆಯು ಶೇಕಡಾ 3.6 ರಷ್ಟು ಕುಸಿದಿದೆ.

ಯುರೋಪಿಯನ್ ಒಕ್ಕೂಟ (ಇ.ಯು) ರಾಷ್ಟ್ರಗಳು 2020 ರಲ್ಲಿ ಶೇಕಡಾ 7.4 ರಷ್ಟು ಕುಸಿತವನ್ನು ಕಂಡಿದೆ. 2021ರ ಮುನ್ಸೂಚನೆಯು ಶೇಕಡಾ 3.6 ರಷ್ಟು ಬೆಳವಣಿಗೆಯಾಗಿದ್ದು, ಇದು ಮಹಾಸೋಂಕು–ಪೂರ್ವದ ಪ್ರವೃತ್ತಿಗಿಂತ ಇನ್ನೂ ಶೇಕಡಾ 3.8 ರಷ್ಟು ಕಡಿಮೆಯಾಗಿದೆ.

ಜಪಾನ್ ಆರ್ಥಿಕ 2020 ರಲ್ಲಿ ಶೇ 5.3 ರಷ್ಟು ಸಂಕುಚಿತ ಗೊಂಡಿದೆ. 2021 ರಲ್ಲಿ ಇದು ಶೇಕಡಾ 2.5 ರಷ್ಟು ವಿಸ್ತರಿಸುವ ನಿರೀಕ್ಷೆಯಿದೆ, ಇದು ಇನ್ನೂ ಮಹಾಸೋಂಕು–ಪೂರ್ವದ ಪ್ರವೃತ್ತಿಗಿಂತ ಶೇಕಡಾ 2.4 ರಷ್ಟು ಕಡಿಮೆ ಇದೆ.

ಅಭಿವೃದ್ಧಿ ಹೊಂದುತ್ತಿರುವ ದೇಶಗಳು

ವಿಶೇಷವಾಗಿ ಉದಯೋನ್ಮುಖ ಮಾರುಕಟ್ಟೆಗಳಲ್ಲಿ ಮತ್ತು ಅಭಿವೃದ್ಧಿ ಹೊಂದುತ್ತಿರುವ ಆರ್ಥಿಕತೆಗಳಲ್ಲಿ ಪ್ರಪಂಚದಾದ್ಯಂತ ಹೂಡಿಕೆ ಪ್ರಮಾಣದಲ್ಲಿ ತೀವ್ರ ಕುಸಿತ ಕಂಡಿದೆ. ಕಡಿಮೆ ಆದಾಯದ ದೇಶಗಳು 2020 ರಲ್ಲಿ ಶೇಕಡಾ 0.9 ರಷ್ಟು ಕುಗ್ಗುವಿಕೆಗೆ ಸಾಕ್ಷಿಯಾಗಿವೆ. ಇದು ಒಂದು ಪೀಳಿಗೆಯ ಮೊದಲ ಆರ್ಥಿಕ ಕುಗ್ಗುವಿಕೆ. ಈ ದೇಶಗಳ 2021ರ ಅಂದಾಜು ಬೆಳವಣಿಗೆ ಶೇಕಡಾ 5 ಕ್ಕೆ ತಲುಪಿರುವುದು, ಇದರ ಬಹುಭಾಗ ಚೀನಾದ ಆರ್ಥಿಕತೆಯ ದೃಢವಾದ ಚೇತರಿಕೆಯಿಂದಾಗಿ ಆಗಿದೆ.

ಹೆಚ್ಚುತ್ತಿರುವ ಜನರ ದುಃಖಗಳು

ವಿಶ್ವಬ್ಯಾಂಕ್ ವರದಿ ಹೀಗೆ ಹೇಳುತ್ತದೆ: “ಮಹಾಸೋಂಕು ತೀವ್ರವಾದ ಜೀವ ನಷ್ಟವನ್ನು ಉಂಟುಮಾಡಿದೆ, ಇದು ಲಕ್ಷಾಂತರ ಜನರನ್ನು ತೀವ್ರ ಬಡತನಕ್ಕೆ ದೂಡುತ್ತಿದೆ, ಹಾಗೂ ಶಾಶ್ವತ ಗಾಯಗಳನ್ನು ಮಾಡಿ ಚಟುವಟಿಕೆ ಮತ್ತು ಆದಾಯಗಳನ್ನು ದೀರ್ಘಕಾಲದ ಅವಧಿಗೆ ಮಹಾಸೋಂಕು–ಪೂರ್ವ ಮುಂಚಿನ 2017ರ ಪರಿಸ್ಥಿತಿಗಿಂತ ಕೆಳಗೆ ತಳ್ಳುತ್ತದೆ ಎಂದು ನಿರೀಕ್ಷಿಸಲಾಗಿದೆ.

ಶೇಕಡಾ 90 ಕ್ಕಿಂತ ಹೆಚ್ಚು ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ 2020 ರಲ್ಲಿ ತಲಾ ಆದಾಯವು ಕುಸಿಯಿತು, ಲಕ್ಷಾಂತರ ಜನರನ್ನು ಮತ್ತೆ ಬಡತನಕ್ಕೆ ತಳ್ಳಿದೆ. ಇದು ಕನಿಷ್ಠ ಹಿಂದಿನ ಹತ್ತು ವರ್ಷಗಳಲ್ಲಿ ಆದ ತಲಾ ಆದಾಯದ ಏರಿಕೆಯನ್ನು ಅಳಿಸಿ ಹಾಕುತ್ತದೆ. ಬಡತನದ ಪ್ರಮಾಣವನ್ನು 2017ರ ಕೊನೆಯಲ್ಲಿ ಕಂಡ ಅಥವಾ ಇನ್ನೂ ಹೆಚ್ಚಿನ ಮಟ್ಟಕ್ಕೆ ತಳ್ಳುವ ನಿರೀಕ್ಷೆಯಿದೆ. ಉದ್ಯೋಗದಲ್ಲಿ ಆದ ನಷ್ಟದಿಂದ ಚೇತರಿಕೆ ಸಹ ಬಹಳ ಕಾಲ ತೆಗೆದುಕೊಳ್ಳುತ್ತದೆ ಎಂದು ಅಂದಾಜಿಸಲಾಗಿದೆ.

ಹತ್ತು ಕೋಟಿಗೂ ಹೆಚ್ಚು ಜನರು ತೀವ್ರ ಬಡತನದತ್ತ ಸಾಗುವ ನಿರೀಕ್ಷೆಯಿದೆ. ಅದೇ ಸಮಯದಲ್ಲಿ, ಶ್ರೀಮಂತರು ಶ್ರೀಮಂತರಾಗುತ್ತಾರೆ ಮತ್ತು ಬಡವರು ಬಡವರಾಗುವುದರೊಂದಿಗೆ ಅಸಮಾನತೆಯು ಇನ್ನಷ್ಟು ಹದಗೆಡುವ ಸಾಧ್ಯತೆಯಿದೆ. ಮಹಿಳೆಯರು, ವಲಸೆ ಕಾರ್ಮಿಕರು, ಕಡಿಮೆ ನುರಿತ ಉದ್ಯೋಗಗಳು ಮತ್ತು ಅನೌಪಚಾರಿಕ ವಲಯಗಳು ಹೆಚ್ಚು ಬಳಲಿರುವ ದುರ್ಬಲ ಗುಂಪುಗಳಲ್ಲಿ ಸೇರಿವೆ. ಶಿಕ್ಷಣದಲ್ಲಿನ ಅಡೆತಡೆಗಳ ದೀರ್ಘಕಾಲೀನ ಪರಿಣಾಮವು ಕೆಲವು ಶಾಶ್ವತ ಪರಿಣಾಮವನ್ನು ಬೀರುತ್ತದೆ, ವಿಶೇಷವಾಗಿ ಅದು ಕಳಪೆ ಮೂಲಸೌಕರ್ಯ ಮತ್ತು ತಾಂತ್ರಿಕ ಸಂವಹನ ಹೊಂದಿರುವ ದೇಶಗಳಲ್ಲಿ ಹೆಚ್ಚಾಗಿರುತ್ತದೆ.

ಸಮಾಜವಾದಿ ದೇಶಗಳು

ಸಮಾಜವಾದಿ ಆರ್ಥಿಕತೆಗಳ ಪೈಕಿ, **ಚೀನಾದ** ಆರ್ಥಿಕತೆಯು ಮೊದಲ ಅಂದಾಜುಗಳಿಗಿಂತ ಉತ್ತಮವಾಗಿ ಕಾರ್ಯನಿರ್ವಹಿಸಿದೆ. ಮಹಾಸೋಂಕಿನ ಪರಿಣಾಮಕಾರಿ ನಿಯಂತ್ರಣ ಮತ್ತು ದೊಡ್ಡ ಪ್ರಮಾಣದ ಸಾರ್ವಜನಿಕ ಹೂಡಿಕೆಯ ಪ್ಯಾಕೇಜ್ ಗಳಿಂದ ಇದು ಸಾಧ್ಯವಾಯಿತು. 2020 ರಲ್ಲಿ ಚೀನಾದ ಜಿಡಿಪಿ ಶೇಕಡಾ 2.3 ರಷ್ಟು ಹೆಚ್ಚಿದೆ. ಬೆಳವಣಿಗೆಯು 2021 ರಲ್ಲಿ ಶೇಕಡಾ 7.9 ರಷ್ಟಾಗುತ್ತದೆ ಎಂದು ಅಂದಾಜಿಸಲಾಗಿದೆ. ನಿರುದ್ಯೋಗ ದರವು ಸರ್ಕಾರದ ಗುರಿ ಶೇಕಡಾ 6 ಕ್ಕಿಂತ ಕಡಿಮೆಯಾಗಿದೆ. 2020 ರಲ್ಲಿ ಸುಮಾರು 1.2 ಕೋಟಿ ಹೊಸ ನಗರ ಉದ್ಯೋಗಗಳನ್ನು ಸೃಷ್ಟಿಸಲಾಯಿತು ಮತ್ತು 2020 ರ ಡಿಸೆಂಬರ್ ನಲ್ಲಿ ನಿರುದ್ಯೋಗವು ಶೇಕಡಾ 4.7 ಕ್ಕೆ ಇಳಿದಿದೆ.


ಗ್ರೀಸ್ ನಲ್ಲಿ ಪ್ರತಿಭಟನೆಗಳು

ವಿಶ್ವ ಬ್ಯಾಂಕಿನ ಪ್ರಕಾರ, **ವಿಯೆಟ್ನಾಂ** 2020 ರಲ್ಲಿ ಶೇ 2.91 ರಷ್ಟು ಜಿಡಿಪಿ ಬೆಳವಣಿಗೆಯನ್ನು ದಾಖಲಿಸಿದೆ. ಸರ್ಕಾರವು ತೆರಿಗೆ ಮತ್ತು ಭೂಮಿ ಬಾಡಿಗೆಯನ್ನು ಮುಂದೂಡಿದೆ, ಬಡ್ಡಿದರಗಳನ್ನು ಕಡಿಮೆ ಮಾಡಿ ಸಾಲ ಮತ್ತು ಹೂಡಿಕೆಯನ್ನು ಹೆಚ್ಚಿಸಿದೆ ಮತ್ತು ಜನರ ಖರೀದಿ ಶಕ್ತಿಯನ್ನು ಹೆಚ್ಚಿಸುವ ಮೂಲಕ ದೇಶೀಯ ಬೇಡಿಕೆಯನ್ನು ಸೃಷ್ಟಿಸುತ್ತಿದೆ. ಕೋವಿಡ್ ಪಾಸಿಟಿವ್ ಪ್ರಕರಣಗಳು ಕೇವಲ 1,547 ಮತ್ತು ಸಾವಿನ ಸಂಖ್ಯೆ ಕೇವಲ 35 ಆಗಿದೆ.

ಲಾವೋಸ್: ನಿರಂತರ ಬೆಳವಣಿಗೆಯನ್ನು ದಾಖಲಿಸಿದೆ ಮತ್ತು ಕೇವಲ 41 ಕೋವಿಡ್ ಸೋಂಕುಗಳು ಮತ್ತು ಮುಖ್ಯವಾಗಿ ಸಾವುಗಳ ಸಂಖ್ಯೆ ಶೂನ್ಯ.

ಕ್ಯೂಬಾ: ಒಂದು ಕಡೆ ಮಹಾಸೋಂಕು ಮತ್ತೊಂದೆಡೆ ಯುಎಸ್ ಸಾಮ್ರಾಜ್ಯಶಾಹಿ ಹೇರಿದ ಕಟುವಾದ ಆರ್ಥಿಕ ದಿಗ್ಬಂಧನಗಳ ಡಬ್ಬಲ್ ದಾಳಿಯನ್ನು ಕ್ಯೂಬಾ ಯಶಸ್ವಿಯಾಗಿ ಎದುರಿಸಿ ಬದುಕುಳಿಯಿತು. ಹೆಚ್ಚಿನ ಸಾರ್ವಜನಿಕ ಆರೋಗ್ಯ ವೆಚ್ಚಗಳು ಮತ್ತು ಪ್ರವಾಸೋದ್ಯಮದಲ್ಲಿ ಆರ್ಥಿಕ ಚಟುವಟಿಕೆಯ ಕುಸಿತದೊಂದಿಗೆ, ಕ್ಯೂಬನ್ ಆರ್ಥಿಕತೆಯು ಶೇಕಡಾ 11 ರಷ್ಟು ಕುಗ್ಗಿತು. ಆದಾಗ್ಯೂ, ಸಾಂಕ್ರಾಮಿಕ ರೋಗವನ್ನು ಎದುರಿಸುವಲ್ಲಿ, ತನ್ನ ನಿಸ್ವಾರ್ಥ ವೈದ್ಯಕೀಯ ನೆರವನ್ನು ವಿಶ್ವದ 39 ದೇಶಗಳಿಗೆ ಕ್ಯೂಬಾ ನೀಡಲು ಸಾಧ್ಯವಾಗಿದೆ.

ಜಾಗತಿಕ ಪ್ರತಿಭಟನೆಗಳು

ಪ್ರಸ್ತುತ ಪರಿಸ್ಥಿತಿಗಳಲ್ಲಿ, ಆರ್ಥಿಕ ಹಿಂಜರಿತವನ್ನು ನಿವಾರಿಸಲು ಯಾವುದೇ ಪರಿಹಾರವನ್ನು ನೀಡುವಲ್ಲಿ ವಿಫಲವಾಗಿದ್ದು, ತಮ್ಮ ಲಾಭವನ್ನು ಮತ್ತಷ್ಟು ಹೆಚ್ಚಿಸಿಕೊಳ್ಳಲು ಜಾಗತಿಕ ಬಂಡವಾಳಶಾಹಿ ನವ–ಉದಾರವಾದಿ ಸುಧಾರಣೆಗಳನ್ನು ಆಕ್ರಮಣಕಾರಿಯಾಗಿ ಜಾರಿಗೊಳಿಸುತ್ತಿದೆ ಎಂದು ಕಳೆದ ವರದಿಯಲ್ಲಿ ಗುರುತಿಸಲಾಗಿದೆ. ಇದು ಆರ್ಥಿಕ ಅಸಮಾನತೆಗಳನ್ನು ಮತ್ತಷ್ಟು ವಿಸ್ತರಿಸುತ್ತದೆ ಮತ್ತು ದುಡಿಯುವ ಜನರ ವಿರುದ್ಧ ವರ್ಗ ಆಕ್ರಮಣವನ್ನು ತೀಕ್ಷ್ಣಗೊಳಿಸುತ್ತದೆ. ಇದರ ವಿರುದ್ಧ ಅನೇಕ ದೇಶಗಳಲ್ಲಿ ಪ್ರತಿಭಟನೆಗಳು ಭುಗಿಲೆದ್ದಿವೆ.

ಗ್ರೀಸ್ ನಲ್ಲಿ ಕೆಲಸದ ಸಮಯ ಹೆಚ್ಚಳ, ರಜಾದಿನಗಳನ್ನು ರದ್ದುಪಡಿಸುವುದು, ಸಾಮಾಜಿಕ ಭದ್ರತೆಯ ಖಾಸಗೀಕರಣ ಮತ್ತು ವಿಮೆ ಮಾಡದ ಮತ್ತು ಪಾವತಿಸದ ಕೆಲಸದ ವಿರುದ್ಧ ಕಾರ್ಮಿಕ ಸಂಘಗಳು ಮುಷ್ಕರ ನಡೆಸಿದವು. ಕಮ್ಯುನಿಸ್ಟ್ ಪಕ್ಷ (ಕೆಕೆಇ) ನೇತೃತ್ವದಲ್ಲಿ ನಡೆಯುತ್ತಿದ್ದ, ಪಾಲಿಟೆಕ್ನಿಕ್ ದಂಗೆಯ ಸ್ಮರಿಸುವ ವಾರ್ಷಿಕೋತ್ಸವವನ್ನು ಪ್ರದರ್ಶನದಲ್ಲಿ, ಪೊಲೀಸರು ಹಲ್ಲೆ ನಡೆಸಿದರು. ಪಕ್ಷದ ಪ್ರಧಾನ ಕಾರ್ಯದರ್ಶಿ, ಅದರ ಮುಖಂಡರು ಮತ್ತು ಸಂಸದರು ಸೇರಿದಂತೆ ಅನೇಕರು ಗಾಯಗೊಂಡಿದ್ದಾರೆ.

ಪ್ಯಾರಿಸ್ ಮತ್ತು ಇತರೆ ಫ್ರೆಂಚ್ ನಗರಗಳಲ್ಲಿ ನವೆಂಬರ್ ಮತ್ತು ಡಿಸೆಂಬರ್ ಉದ್ದಕ್ಕೂ ಉದ್ದೇಶಿತ ಹೊಸ ಭದ್ರತಾ ಕಾನೂನುಗಳ ವಿರುದ್ಧ ವ್ಯಾಪಕ ಪ್ರತಿಭಟನೆಗಳು ನಡೆದವು. ಈ ಕಾನೂನುಗಳು ಜನರ ಮೇಲೆ ಹೆಚ್ಚಿನ ಕಣ್ಗಾವಲು ಮತ್ತು ಪೊಲೀಸ್ ಅಧಿಕಾರಿಗಳ ದೌರ್ಜನ್ಯಗಳನ್ನು ಮಾಧ್ಯಮಗಳಲ್ಲಿ ಪ್ರಸಾರ ಮಾಡುವ ಹಕ್ಕುಗಳ ಮೇಲೆ ನಿರ್ಬಂಧ ಹೇರುತ್ತವೆ. ಆದರೆ, ಇವುಗಳನ್ನು ಹಿಂಪಡೆಯುವಂತೆ ಪ್ರತಿಭಟನಾಕಾರರಿಂದ ಸರ್ಕಾರವನ್ನು ಒತ್ತಾಯಿಸಲಾಯಿತು. ಅದರಂತೆ, ಈ ಕಾನೂನನ್ನು ಸಂಪೂರ್ಣವಾಗಿ ಪುನಃ ಬರೆಯಲಾಗುವುದು ಎಂದು ಸರ್ಕಾರ ಹೇಳಿದೆ. ಅದಾಗ್ಯೂ ಪ್ರತಿಭಟನಾಕಾರರ ಮೇಲೆ ಅನೇಕ ಪ್ರದೇಶಗಳಲ್ಲಿ ವ್ಯಾಪಕವಾದ ಪೊಲೀಸ್ ದೌರ್ಜನ್ಯ ನಡೆಸಲಾಯಿತು.

ಜಾರ್ಜಿಯಾದ ರಾಜಧಾನಿ ಟಿಬಿಲಿಸಿಯಲ್ಲಿ ಸಾವಿರಾರು ಸರ್ಕಾರಿ ವಿರೋಧಿ ಪ್ರದರ್ಶನಗಳು ಸಜ್ಜುಗೊಂಡಿದ್ದವು ಮತ್ತು ದೇಶದ ಶ್ರೀಮಂತ ವ್ಯಕ್ತಿ ಮತ್ತು ಮಾಜಿ ಪ್ರಧಾನ ಮಂತ್ರಿಯು ಅಕ್ಟೋಬರ್ ಸಂಸತ್ ಚುನಾವಣೆಯನ್ನು ಅಪಹರಣ ಮಾಡುವ ವಿರುದ್ಧ ಪ್ರತಿಭಟನೆಗಳು ನಡೆದು, ಹೊಸ ಚುನಾವಣೆಗೆ ಆಗ್ರಹಿಸಲಾಗಿದೆ.

ಪ್ರಧಾನಿ ಪ್ರಯುತ್ ಚಾನ್–ಚಾ ಅವರ ರಾಜೀನಾಮೆ, ಹೆಚ್ಚಿನ ಪ್ರಜಾಪ್ರಭುತ್ವ ಭಾಗವಹಿಸುವಿಕೆಗೆ ಅವಕಾಶ ನೀಡುವಂತೆ ಸಂವಿಧಾನದ ಪರಿಷ್ಕರಣೆ ಮತ್ತು ರಾಜಪ್ರಭುತ್ವವನ್ನು ಕಾನೂನು, ರಾಜಕೀಯ ಮತ್ತು ಹಣಕಾಸಿನ ಮೇಲ್ವಿಚಾರಣೆಗೆ ಒಳಪಡಿಸುವಂತೆ ಒತ್ತಾಯಿಸಿ ಥೈಲ್ಯಾಂಡ್ ನಲ್ಲಿ ವ್ಯಾಪಕ ಪ್ರದರ್ಶನಗಳು ನಡೆದಿವೆ.

ಕೃಷಿ ಸುಧಾರಣೆಗಳು ಮತ್ತು ಹೊಸ ಕಾನೂನುಗಳ ವಿರುದ್ಧ ಡಿಸೆಂಬರ್ ನಲ್ಲಿ ಪೆರು ಭಾರೀ ಪ್ರತಿಭಟನೆಗಳನ್ನು ಕಂಡಿದೆ. ತೀವ್ರ ಪ್ರತಿಭಟನೆಗಳಿಗೆ ಮಣಿದು ಪೆರುವಿನ ಕೃಷಿಯನ್ನು ಬಹುರಾಷ್ಟ್ರೀಯ ಕೃಷಿ ಕಾರ್ಪೊರೇಟ್ ಕಂಪನಿಗಳಿಗೆ ಹಸ್ತಾಂತರಿಸುವ ಈ ರೈತ ವಿರೋಧಿ ಕಾನೂನುಗಳನ್ನು ಸರ್ಕಾರವು ರದ್ದುಗೊಳಿಸಬೇಕಾಗಿ ಬಂದಿದೆ.

ಬ್ರೆಕ್ಸಿಟ್

ಹಲವು ವರ್ಷಗಳ ವಿಳಂಬ ಮತ್ತು ಮಾತುಕತೆಗಳ ನಂತರ, ಇಯು–ಬ್ರಿಟನ್ ಬ್ರೆಕ್ಸಿಟ್ ವ್ಯಾಪಾರ ಒಪ್ಪಂದಕ್ಕೆ ಬಂದಿವೆ. ಈ ಒಪ್ಪಂದವು ಬ್ರಿಟನ್ನನ್ನು ಇಯು ಸಾರ್ವಭೌಮತ್ವದಿಂದ ಮುಕ್ತಗೊಳಿಸುತ್ತದೆ. ಆದರೆ ದೊಡ್ಡ ಕಾರ್ಪೊರೇಟ್ ಸಂಸ್ಥೆಗಳ ಸಾರ್ವಭೌಮತ್ವದಿಂದ ಅಲ್ಲ. ಬಂಡವಾಳಶಾಹಿ ಮುಕ್ತ ಮಾರುಕಟ್ಟೆ ನಿಯಮಗಳು ಮತ್ತು ನೀತಿಗಳು, ಡಬ್ಲ್ಯುಟಿಒ ನಿಯಮಗಳು ಮತ್ತು ಹೊಸ ಯುಕೆ–ಇಯು ಮಧ್ಯಸ್ಥಿಕೆಗಳ ಪ್ರಾಬಲ್ಯವನ್ನು ಉಳಿಸಿಕೊಳ್ಳಲು ಬ್ರಿಟನ್ ಕಾನೂನುಗಳನ್ನು ಜಾರಿಗೊಳಿಸುತ್ತದೆ.

ಈ ಒಪ್ಪಂದದ ಪ್ರಕಾರ, ಉದ್ಯೋಗ ನಷ್ಟದಂತಹ ಪರಿಣಾಮಗಳನ್ನು ಲೆಕ್ಕಿಸದೆ ಕಾರ್ಪೊರೇಟ್ ಗಳು ಕಾರ್ಯಾಚರಣೆಯನ್ನು ಸ್ಥಳಾಂತರಿಸಲು ಮತ್ತು ಬ್ರಿಟನ್ ಮತ್ತು ಇಯುನಲ್ಲಿ ಎಲ್ಲಿಯಾದರೂ ಹೂಡಿಕೆ ಮಾಡಲು ಮುಕ್ತರಾಗಿರುತ್ತಾರೆ. ಅಪಾಯಕಾರಿ ಅಂಶವೆಂದರೆ, ಇದು ರಾಷ್ಟ್ರೀಯ ಆರೋಗ್ಯ ಸೇವೆ (ಎನ್.ಎಚ್.ಎಸ್), ರೈಲ್ವೆ ಮತ್ತು ಇಂಧನ ವಿತರಣೆಯಂತಹ ಸಾರ್ವಜನಿಕ ಸೇವೆಗಳನ್ನು ಖಾಸಗೀಕರಣಕ್ಕೆ ಮತ್ತು ಬ್ರಿಟನ್ ಮತ್ತು ಯುರೋಪಿನಾದ್ಯಂತ ಸ್ಪರ್ಧೆಗೆ ಸಂಪೂರ್ಣವಾಗಿ ತೆರೆಯುತ್ತದೆ. ಹಣಕಾಸು ಬಂಡವಾಳದ ಚಲನೆ ಕುರಿತ ಒಪ್ಪಂದಗಳ ವಿವರಗಳನ್ನು ಇನ್ನೂ ಅಂತಿಮಗೊಳಿಸಲಾಗಿಲ್ಲ.

ಭೀಮ-ಕೊರೆಗಾಂವ್ ಹಿಂಸಾಚಾರದ ಪ್ರಕರಣ: ಪುರಾವೆಗಾಗಿ ಲ್ಯಾಪ್‌ಟಾಪ್ ಮಾಲ್‌ವೇರ್ ಬಳಕೆ?

ರೋನ ವಿಲಿಯವ್ಸ್ ವಿರುದ್ಧ ಹಾಕಿರುವ ಭೀಮ–ಕೊರೆಗಾಂವ್ ಹಿಂಸಾಚಾರ ಪ್ರಕರಣದಲ್ಲಿ ಆರೋಪಿಗಳ ವಿರುದ್ಧ ಸಿಕ್ಕಿದೆಯೆನ್ನಲಾದ ಸಾಕ್ಷ್ಯ ಒಂದು ಮಾಲ್‌ವೇರನ್ನು, ಅಂದರೆ ದುರುದ್ದೇಶದ ತಂತ್ರಾಂಶವನ್ನು ಬಳಸಿ ಅವರ ಲ್ಯಾಪ್ ಟಾಪ್‌ನಲ್ಲಿ ಕಳ್ಳತನದಿಂದ ಹಾಕಿರುವಂತದ್ದು ಎಂದು ಅಮೆರಿಕಾದ ಡಿಜಿಟಲ್ ಫೊರೆನ್ಸಿಕ್ (ಅಪರಾಧ ಪರೀಕ್ಷಣಾ) ಸಂಸ್ಥೆ ಆರ್ಸೆನಲ್ ಕನ್ಸಲ್ಟಿಂಗ್‌ನ ವರದಿ ಬಯಲಿಗೆ ತಂದಿದೆ ಎಂದು ಮಾಧ್ಯಮಗಳಲ್ಲಿ ವರದಿಯಾಗಿದೆ.

ಸ್ವತಂತ್ರ ಸಂಶೋಧಕರಾಗಿರುವ ರೋನ ವಿಲಿಯನ್ಸ್‌ರವರ ಬಂಧನದ ಮೊದಲು ಅವರ ಲ್ಯಾಪ್ ಟಾಪ್‌ನಲ್ಲಿ ಸುಳ್ಳುಗಳನ್ನು ತುರುಕುವ ಹಲ್ಲೆಕೋರರರು ಒಂದು ಮಾಲ್ ವೇರನ್ನು ಬಳಸಿ ಕನಿಷ್ಟ ಹತ್ತು ಪತ್ರಗಳನ್ನು ಹಾಕಿದ್ದಾರೆ ಎಂದು ಆರ್ಸೆನಲ್ ಕನ್ಸಲ್ಟಿಂಗ್‌ನ ವರದಿ ಹೇಳಿರುವುದಾಗಿ 'ವಾಶಿಂಗ್ಟನ್ ಪೋಸ್ಟ್' ವರದಿ ಮಾಡಿದೆ. ಈ ಹತ್ತರಲ್ಲಿ ಪ್ರಧಾನ ಮಂತ್ರಿ ಮೋದಿಯವರನ್ನು ಹತ್ಯೆ ಮಾಡುವ ಒಂದು ನಿಷೇಧಿತ ಮಾವೋವಾದಿ ಸಂಘಟನೆಯ ಪಿತೂರಿಯ ಭಾಗವಾಗಿ ರೋನ ವಿಲಿಯಮ್ಸ್ ಒಬ್ಬ ಮಾವೋವಾದಿ ಉಗ್ರಗಾಮಿಗೆ ಬರೆದಿದ್ದರು ಎಂದು ಪೋಲಿಸರು ಆಪಾದಿಸಿರುವ ಪತ್ರವೂ ಸೇರಿದೆ ಎನ್ನಲಾಗಿದೆ. ಈ ಕಂಪ್ಯೂಟರ್ ಹಲ್ಲೆಕೋರರು ಯಾರು ಎಂದು ಗೊತ್ತಾಗಿಲ್ಲ, ಆದರೆ ಈ ಕಂಪ್ಯೂಟರ್ ಹಲ್ಲೆಗೆ ರೋನ ವಿಲಯವ್ಸ್ ಅಲ್ಲದೆ ಇತರರೂ ಬಲಿಯಾಗಿದ್ದಾರೆ ಎಂದೂ ಆರ್ಸೆನಲ್ ಕನ್ಸಲ್ಟಿಂಗ್‌ನ ವರದಿ ಹೇಳಿರುವುದಾಗಿ ತಿಳಿದು ಬಂದಿದೆ.

ವಿಲಿಯುವಸ್‌ರವರ ಲ್ಯಾಪ್‌ಟಾಪ್ 22 ತಿಂಗಳುಗಳಿಗಿಂತ ಸ್ವಲ್ಪ ಹೆಚ್ಚು ಕಾಲ ಮಾರ್ಪಾಟಿಗೆ ಒಳಗಾಗಿತ್ತು, ಇದನ್ನು ಕಳ್ಳತನದಿಂದ ಮಾಡಿದವರ ಉದ್ದೇಶ 'ನಿಗಾವಣೆ ಮತ್ತು ಆರೋಪಿಸಬಹುದಾದ ದಸ್ತಾವೇಜನ್ನು ಒದಗಿಸುವುದು" ಎನ್ನುತ್ತ 20 ವರ್ಷಗಳಿಂದ ಈ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಆರ್ಸೆನಲ್ ಕಂಪನಿಯ ಈ ವರದಿ, ಇದು ತಾನು ಇದುವರೆಗೆ ನೋಡಿರುವ ಸಾಕ್ಷ್ಯದಲ್ಲಿ ಅಕ್ರಮ ನಡೆಸುವ ಗಂಭೀರ ಪ್ರಕರಣಗಳಲ್ಲಿ ಒಂದು ಎಂದಿರುವುದಾಗಿಯೂ ವರದಿಯಾಗಿದೆ.

ಜೂನ್ 2016ರಲ್ಲಿ ಈ ಪ್ರಕರಣದಲ್ಲಿ ಇನ್ನೊಬ್ಬ ಆರೋಪಿಯಾಗಿರುವ 80ವರ್ಷದ ವರವರ ರಾವ್‌ರವರ ಇ–ಮೇಲ್ ಬಳಸಿ ಈ ದಾಳಿ ಆರಂಭವಾಗಿತ್ತು, ನೆಟ್‌ವೈರ್ ಎಂಬ ದುರುದ್ದೇಶದ ತಂತ್ರಾಂಶವನ್ನು ಬಳಸಿ ರೋನ ವಿಲಿಯಂಸ್‌ರವರ ಲ್ಯಾಪ್‌ಟಾಪ್‌ನ ಮೇಲೆ ಹಲ್ಲೆಕೋರರು ಹತೋಟಿ ಪಡೆದರೆಂದು ಈ ವರದಿ ಹೇಳಿದೆ.

ಪುಣೆ ಪೋಲಿಸ್ ಈ ಪ್ರಕರಣದಲ್ಲಿ ಈ ಪತ್ರಗಳನ್ನು ಪ್ರಾಥಮಿಕ ಸಾಕ್ಷ್ಯವಾಗಿ ಕೊಟ್ಟಿದ್ದರು. ಮಹಾರಾಷ್ಟ್ರದ ವಿಧಾನಸಭಾ ಚುನಾವಣೆಗಳಲ್ಲಿ ಬಿಜೆಪಿ ಸೋತ ನಂತರ ಈ ಕೇಸನ್ನು ಇದ್ದಕಿದ್ದಂತೆ ರಾಷ್ಟ್ರೀಯ ತನಿಖಾ ಏಜೆನ್ಸಿ(ಎನ್‌ಐಎ)ಗೆ ವರ್ಗಾಯಿಸಲಾಯಿತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಈ ಕೇಸಿನಲ್ಲಿ ರೋನ ವಿಲಯವ್ಸ್‌ರಲ್ಲದೆ ಇನ್ನೂ 15 ಮಾನವ ಹಕ್ಕು ಹೋರಾಟಗಾರರು, ವಕೀಲರು ಮತ್ತು ಅಧ್ಯಯನಕಾರರು ಕರಾಳ ಯು.ಎ.ಪಿ.ಎ. ಅಡಿಯಲ್ಲಿ ಸುಮಾರು ಎರಡು ವರ್ಷಗಳಿಂದ ಜೈಲುಗಳಲ್ಲಿದ್ದಾರೆ.

ಆರೋಪ ಪಟ್ಟಿಯಲ್ಲಿ ಹೇಳಿರುವ ಈ 'ಪತ್ರಗಳ' ಬಗ್ಗೆ ರೋನ ವಿಲಿಯವ್ಸ್‌ರವರಿಗೆ ಗೊತ್ತಾದದ್ದು ಒಂದು ವರ್ಷದ ಮೇಲೆ ಅವರ ಮೇಲೆ ಹಾಕಿದ ಆರೋಪ ಪಟ್ಟಿಯ ಭಾಗವಾಗಿ ಕೊಟ್ಟ 'ಇಲೆಕ್ಟ್ರಾನಿಕ್ ಸಾಕ್ಷ್ಯ'ದ ಮೂಲಕ. ಈ 'ಸಾಕ್ಷ್ಯ'ದ ಪರೀಕ್ಷಣೆ ನಡೆಸಲು ರೋನ ವಿಲಿಯವ್ಸ್‌ರವರ ವಕೀಲರು ಅಮೆರಿಕನ್ ಬಾರ್ ಅಸೋಸಿಯೇಷನ್‌ಗೆ ಸಲ್ಲಿಸಿದ ಕೋರಿಕೆಯಂತೆ ಆರ್ಸೆನಲ್ ಕನ್ಸಲ್ಟಿಂಗ್ ಇದರ ಪರೀಕ್ಷಣೆಯನ್ನು ನಡೆಸಿ ಈ ವರದಿಯನ್ನು ಕೊಟ್ಟಿದೆ.



ಈ ವರದಿಯ ಆಧಾರದಲ್ಲಿ ರೋನ ವಿಲಿಯವ್ಸ್‌ರವರ ವಕೀಲರು ಫೆಬ್ರುವರಿ 10ರಂದು ಮುಂಬೈ ಹೈಕೋರ್ಟಿನಲ್ಲಿ ಈ ಕೇಸನ್ನೇ ವಜಾ ಮಾಡಬೇಕು ಮತ್ತು ಸುಳ್ಳು ಸಾಕ್ಷ್ಯ ಸೃಷ್ಟಿಯ ಪ್ರಕರಣದ ತನಿಖೆಗೆ ಒಂದು 'ವಿಶೇಷ ತನಿಖಾ ತಂಡ'(ಎಸ್.ಐ.ಟಿ.)ವನ್ನು ರಚಿಸಬೇಕು, ಇದು ಹೈಕೋರ್ಟ್‌ನ ಉಸ್ತುವಾರಿಯಲ್ಲಿ ತನಿಖೆ ನಡೆಸುವಂತಾಗಬೇಕು ಎಂದು ಕೋರಿ ಅರ್ಜಿ ಸಲ್ಲಿಸಿದ್ದಾರೆ.

ವಾಶಿಂಗ್ಟನ್ ಪೋಸ್ಟ್‌ನ ಈ ವರದಿಯನ್ನು ಕೇಂದ್ರ ಸರಕಾರದ ಮೂಲಗಳು ನಿರಾಕರಿಸಿವೆ, ಎನ್‌ಐಎ. ಅಧಿಕಾರಿಯೊಬ್ಬರು ಇದು ಈ ತನಿಖೆಗೆ ಮತ್ತು ಇದರಲ್ಲಿ ಸಂಗ್ರಹಿಸಿದ ಸಾಕ್ಷ್ಯಕ್ಕೆ ಮಸಿ ಬಳಿವ ಪ್ರಯತ್ನ ಎಂದಿರುವುದಾಗಿ ಟೈಮ್ಸ್ ಆಫ್ ಇಂಡಿಯಾ (ಟಿ. ಎನ್‌ಎನ್, ಫೆ.11) ವರದಿ ಮಾಡಿದೆ.

ಮುಖ್ಯವಾಗಿ, ಈ ಒಪ್ಪಂದವು ಕಾರ್ಮಿಕರ, ವಿಶೇಷವಾಗಿ ಬ್ರಿಟನಿನಲ್ಲಿ ಕೆಲಸ ಮಾಡುವ ಇಯು ವಲಸಿಗರ. ಹಕ್ಕುಗಳನ್ನು ದುರ್ಬಲಗೊಳಿಸುತ್ತದೆ, ಬ್ರಿಟನಿನ ಸಾರ್ವಭೌಮತ್ವವನ್ನು ಭದ್ರ ಪಡಿಸಲಾಗಿದ್ದರೂ, ದೊಡ್ಡ ಬಂಡವಾಳಶಾಹಿ ಕಾರ್ಪೊರೇಟುಗಳ ಆರ್ಥಿಕ ಅಭಿವೃದ್ಧಿ ಮತ್ತು ನಿಯಂತ್ರಣ ನೀತಿಗಳನ್ನು ಯೋಜಿಸಲು ಯಾವುದೇ ಭವಿಷ್ಯದ ಸರ್ಕಾರಕ್ಕೂ ಈ ಒಪ್ಪಂದವು ಅನುಮತಿಸುವುದಿಲ್ಲ.

ಇಯು–ಚೀನಾ ಒಪ್ಪಂದ

ಹೂಡಿಕೆಯ ಮೇಲಿನ ಇಯು–ಚೀನಾ ಸಮಗ್ರ ಒಪ್ಪಂದ (ಸಿಎಐ) ಮಾರುಕಟ್ಟೆ ಪ್ರವೇಶ ಮತ್ತು ಹೂಡಿಕೆ ರಕ್ಷಣೆಯನ್ನು ಒಳಗೊಳ್ಳುವ ಉದ್ದೇಶವನ್ನು ಹೊಂದಿತ್ತು. ಒಪ್ಪಂದದ ಒಪ್ಪಿದ ಪಠ್ಯವು ಮಾರುಕಟ್ಟೆ ಪ್ರವೇಶಕ್ಕೆ ಮಾತ್ರ ಸಂಬಂಧಿಸಿದೆ, ಹೂಡಿಕೆ ಸಂರಕ್ಷಣೆ ಕುರಿತ ಅಂಶಗಳು ಇನ್ನೂ ಮಾತುಕತೆಯಲ್ಲಿಯೇ ಉಳಿದಿದೆ. ಸಿಎಐಗಾಗಿ ಮಾತುಕತೆ 2013 ರಲ್ಲಿ ಪ್ರಾರಂಭವಾಯಿತು ಮತ್ತು 35 ಸುತ್ತಿನ ಮಾತುಕತೆ ನಡೆದಿದೆ. ಒಪ್ಪಂದವು ಈಗ "ಕಾನೂನು ಪರಾಮರ್ಶೆ"ಗೆ ಒಳಗಾಗಬೇಕಿದೆ ಮತ್ತು ಅದನ್ನು ಅಂಗೀಕರಿಸುವ, ಜಾರಿಗೆ ತರುವ ಮೊದಲು ಎರಡು ಕಡೆಯಿಂದ ಸಹಿ ಆಗಬೇಕಾಗುತ್ತದೆ. ಇದಕ್ಕೆ ಒಂದು ವರ್ಷದ ಸಮಯ ತೆಗೆದುಕೊಳ್ಳಬಹುದು. ಹೆಚ್ಚುವರಿ ಹೂಡಿಕೆ ಸಂರಕ್ಷಣಾ ಒಪ್ಪಂದದ ಕುರಿತು ಮಾತುಕತೆಗಳು ಮತ್ತು ಅಂತಿಮ ತೀರ್ಮಾನಕ್ಕೆ ಎರಡು ವರ್ಷಗಳ ಗಡುವನ್ನು ನಿಗದಿಪಡಿಸಲಾಗಿದೆ.

ಇದು ಯುರೋಪಿಯನ್ ಪಾರ್ಲಿಮೆಂಟ್‌ನಲ್ಲಿ ಮತ್ತು ಸದಸ್ಯ ರಾಷ್ಟ್ರಗಳ ನಡುವೆ, ಒಪ್ಪಂದದ ಬೆಂಬಲಿಗರು ಮತ್ತು ವಿರೋಧಿಗಳ ನಡುವೆ ವಿವಾದವನ್ನು ಹುಟ್ಟುಹಾಕಿದೆ. ಇತರ ಸದಸ್ಯ ರಾಷ್ಟ್ರಗಳ ಅಭಿಪ್ರಾಯ ತೆಗೆದುಕೊಳ್ಳದೆ ಜರ್ಮನಿ ಮತ್ತು ಫ್ರಾನ್ಸ್‌ಗಳು ಈ ಒಪ್ಪಂದವನ್ನು ವರ್ಷಾಂತ್ಯಕ್ಕೆ ಮೊದಲೇ ಮುಗಿಸಲು ಅವಸರ ಮಾಡಿವೆ ಎಂದು ಪೋಲೆಂಡ್ ಮತ್ತು ಇಟಲಿಗಳು ಸಾರ್ವಜನಿಕವಾಗಿ ದೂರಿವೆ. ●

ಮಹಿಳಾ ಲೋಕದೃಷ್ಟಿಯನ್ನು ಒಟ್ಟು ಸಮಾಜದ ಲೋಕದೃಷ್ಟಿಯಾಗಿಸಬೇಕು......... ಪುಟ 6 ರಿಂದ

ಹೊಡೆದು ಸಾಯಿಸುವ ಮಟ್ಟಕ್ಕೆ ಬಂದಿದೀವಿ. ಈ ಕ್ರೌರ್ಯ, ಅಮಾನುಷತೆ, ಮೇಲುರಿಮೆ, ಗಂಡಾಳ್ವಿಕೆಯ ಕೊಡುಗೆಗಳು. ಇವುಗಳು ಮೌಲ್ಯವಾಗುವುದರ ವಿರುದ್ಧ ನೆಲೆಯಲ್ಲಿ ನಾವೀಗ ತುರ್ತಾಗಿ ತಾಯಿಗುಣವನ್ನು ಮುನ್ನೆಲೆಗೆ ತರಬೇಕಾಗಿದೆ. ಇದರ ಕೊರತೆಯಿಂದಾಗಿಯೇ ಈ ಐವತ್ತು ವರ್ಷಗಳಲ್ಲಿ ಅತ್ಯಾಚಾರ ಪ್ರಕರಣಗಳು– ಅದರಲ್ಲೂ ದಲಿತ/ದಮನಿತರ ಮೇಲೆ ಅತಿಹೆಚ್ಚು – ವೇಗ ಪಡೀತಿದೆ. ಈ ಪ್ರಕರಣಗಳ ಹಿಂದೆ–ಮುಂದೆ ಯಾರಿದ್ದಾರೆ ಎಂಬ ಆಧಾರದಲ್ಲಿ ಸುದ್ದಿ ಮಾಧ್ಯಮಗಳು ತಾರತಮ್ಯ ಮಾಡಿ ಪ್ರಸಾರ ಮಾಡತೊಡಗಿವೆಯೇ ಹೊರತು ಅತ್ಯಾಚಾರವೆಂಬ ಮನಸ್ಥಿತಿಯೇ ನಾಶವಾಗಬೇಕೆಂಬ ಚಿಂತನೆ ಮುನ್ನೆಲೆಗೆ ಬರುತ್ತಿಲ್ಲ. ಅಷ್ಟೇ ಅಲ್ಲ, ಹೆಣ್ಣುಮಕ್ಕಳೇ ಜಾಣ ಮೌನ, ಆಯ್ಕೆಗಳ ರಾಜಕಾರಣವನ್ನು ರೂಢಿಸಿಕೊಳ್ಳತೊಡಗಿದ್ದಾರೆ. ಅಂದರೆ, ನಮ್ಮ ಕೈಗೇ ಬಡಿಗೆ ಕೊಟ್ಟು ನಮಗೇ ಹೊಡೆತ ಹಾಕುವಂತೆ ಮಾಡಲು ಗಂಡಾಳ್ವಿಕೆಯು ಯಶಸ್ಸು ಕಾಣತೊಡಗಿದೆ.

ಇನ್ನು ರಾಜಕೀಯ ಕ್ಷೇತ್ರವೂ ಅಷ್ಟೇ. ಇಲ್ಲಿ ಕೇವಲ ಪ್ರಾತಿನಿಧ್ಯ ಪಡೆಯುವುದೆಂದರೆ, ಅದು ಗಂಡಾಳ್ವಿಕೆಯ ವರ್ಗಾವಣೆಯಷ್ಟೇ ಆಗಿ ಉಳಿಯುತ್ತದೆ. ಹೀಗಾದಲ್ಲಿ ಹೋರಾಟಗಳು ನೆಲಕಚ್ಚಿ ಬಿಡುತ್ತವೆ. ಮಂಡ್ಯದಲ್ಲಿ ಸಂಸತ್ ಚುನಾವಣೆ ಸಂದರ್ಭದಲ್ಲಿ ಸುಮಲತಾ ಅವರು ಕಣಕ್ಕಿಳಿದ ಸಂದರ್ಭದಲ್ಲಿ ಹೇಗೆಲ್ಲಾ ನಾಲಿಗೆಯನ್ನು ಹರಿಬಿಡಲಾಯಿತು ಎಂಬುದನ್ನು ನೋಡಿದ್ದೀವಿ. ಆಕೆ ಹೆಣ್ಣು ಮಗಳೆಂಬ ಕಾರಣಕ್ಕೆ ಜಾತಿಯ ಪ್ರಶ್ನೆ, ಐಡೆಂಟಿಟಿಯ ಪ್ರಶ್ನೆ ಮುನ್ನೆಲೆಗೆ ಬಂತು. ಹೀಗೆಲ್ಲಾ ನಾಲಿಗೆ ಹರಿಬಿಟ್ಟವರದ್ದೇನೋ ಕೊಳಕು ಮನಸ್ಥಿತಿಯೆಂಬುದರಲ್ಲಿ ಸಂಶಯವಿಲ್ಲ. ಆದರೆ, ಆ ಮಾತುಗಳಿಗೆ ಉತ್ತರವಾಗಿ ಬಂದ ಮನಸ್ಥಿತಿ ಯಾವರೀತಿಯದು? ಮೇಲ್ನೋಟಕ್ಕೆ ಆಕೆಯ ಪರ ಎಂಬಂತೆ ಕಂಡರೂ, ಹೇಗೆ ತಿದ್ದಿತೀಡಿ ಇಟ್ಟ ಸಾಮಾಜಿಕತೆಯು ಹೆಣ್ಣನ್ನು ಅಧೀನ ಸ್ಥಿತಿಯಲ್ಲೇ ಪರಿಗಣಿಸುತ್ತದೆ ಎಂಬುದನ್ನು ಗಮನಿಸಬೇಕು. ಅದೂ ಈ ಸಂದರ್ಭದಲ್ಲಿ ಅತಿ ಜನಪ್ರಿಯರೆನಿಸಿದ ನಾಯಕ ನಟರು ಸುಮಲತಾ ಪರ ಪ್ರಚಾರ ಮಾಡಲು ಬಂದಿದ್ದರು. ಅವರಿಗೆ ತೋಚಿದ ಉತ್ತರ ಎಷ್ಟು ಅಸಹಾಯಕವಾಗಿದೆ ನೋಡಿ. 'ಹೆಣ್ಣು ಮದುವೆ ಆದ ಮೇಲೆ ಯಾರ ಜಾತಿಗೆ ಸೇರಿಕೊಳ್ತಾರಪ್ಪಾ?' ಎಂದು ಇವರು ಮರುಪ್ರಶ್ನಿಸಿದರೇ ಹೊರತು, ಮರು ಪ್ರಶ್ನೆಯ ಸ್ವರೂಪ ಬೇರೆಯಾಗಬಹುದಿತ್ತು ಎಂಬುದು ಯಾರಿಗೂ ಹೊಳೆಯಲಿಲ್ಲ. ಇದು ಹೆಣ್ಣಿನ ಸಾಮಾಜಿಕ ಸ್ಥಿತಿಯು ಇಂದಿಗೂ ಗಂಡಿನ ನೆರಳಿನಲ್ಲೇ ನಿರೂಪಿತವಾಗುವುದಕ್ಕೆ ನಿದರ್ಶನ. ನಮ್ಮ ಪ್ರಧಾನಿಗಳು ತಮ್ಮದಲ್ಲದ ವಾರಣಾಸಿಯಲ್ಲಿ ನಿಲ್ಲಬಹುದಾದರೆ, ನಮ್ಮ ಮಾಜಿ ಮುಖ್ಯಮಂತ್ರಿಗಳು ದೂರದ ಬಾದಾಮಿಯಲ್ಲಿ ನಿಲ್ಲಬಹುದಾದರೆ, ರಾಹುಲ್ ಗಾಂಧಿಯವರು ಕೇರಳದ ವಯನಾಡ್‌ನಲ್ಲಿ ಚುನಾವಣೆಗೆ ನಿಲ್ಲಬಹುದಾದರೆ, ಸುಮಲತಾ ಯಾಕೆ ಮಂಡ್ಯದಲ್ಲಿ ನಿಲ್ಲಬಾರದು? ಆಕೆಗೂ ಒಂದು ಸ್ವತಂತ್ರ ವ್ಯಕ್ತಿತ್ವ ಮತ್ತು ಭಾರತದಲ್ಲಿ ಎಲ್ಲಿಯಾದರೂ ಚುನಾವಣೆಗೆ ನಿಲ್ಲಬಹುದಾದ ಆಯ್ಕೆ ಮತ್ತು ಸ್ವಾತಂತ್ರ್ಯ ಇದೆ ಎಂಬುದನ್ನು ಜನರಿಗೆ ಮನಗಾಣಿಸಲು ಯಾಕೆ ಸಾಧ್ಯವಾಗದೇ ಹೋಯಿತು? ನಮಗೇ ಆ ಬಗ್ಗೆ ಒಂದು ನಂಬಿಕೆ ಇಲ್ಲದೇ ಹೋದರೆ ನಾವು ಉತ್ತರಿಸಲು ತಡವರಿಸುತ್ತೇವೆ.

ಹೆಣ್ಣು ರಾಜಕೀಯ ಕ್ಷೇತ್ರವಿರಲಿ, ಯಾವುದೇ ಕ್ಷೇತ್ರದಲ್ಲಿರುವುದೂ ಸಹಜ ಎಂಬ ಮನಸ್ಥಿತಿಗೆ ಪಲ್ಲಟವಾಗಬೇಕಿರುವುದು ಎಷ್ಟು ಮುಖ್ಯವೋ, ಅವಳು ಗಂಡಿನ ಜಾಗದಲ್ಲಿ ಕೂತುಕೊಳ್ಳುವುದಕ್ಕಿಂತಲೂ, ಅವಳದೇ ಆದ ಅಪೂರ್ವ ಲೋಕದೃಷ್ಟಿಯನ್ನು ಅವಳು ಹೊಂದಿದ್ದೂ ಅದನ್ನು ಒಟ್ಟು ಸಮಾಜದ ಲೋಕದೃಷ್ಟಿಯಾಗಿಸುವುದು ಅಷ್ಟೇ ಮುಖ್ಯ. ಈ ಹಿನ್ನೆಲೆಯಲ್ಲಿ ವಂದನಾ ಶಿವ ಹೇಳುವ, ಗ್ರ್ಯಾಂಡ್ ಮದರ್ಸ್ ಯುನಿವರ್ಸಿಟಿಯ ವಿಸ್ತೃತ ನೆಲೆಗಳ ಹುಡುಕಾಟ ಇಂದಿನ ತುರ್ತು. ಕೃಷಿ ಹೆಣ್ಣಿನ ಕೈಯಲ್ಲಿರುವತನಕವೂ ಆಕೆ ಬೀಜ ಸಂರಕ್ಷಣೆ ಮಾಡುತ್ತಾ ಬಂದಿದ್ದಾಳೆ. ಮಾತ್ರವಲ್ಲ, ಅವಳ ಕೈಯಲ್ಲಿ ಕೃಷಿ ಇರುವತನಕವೂ ಯಾವುದೇ ರೈತರ ಆತ್ಮಹತ್ಯೆ ಆಗಿರಲಿಲ್ಲ, ಆಹಾರ ಹೆಣ್ಣಿನ ಕೈಯಲ್ಲಿ ಇರುವ ತನಕವೂ ಜಂಕ್ ಫುಡ್ ಇರಲಿಲ್ಲ ಅಂತ ಅವರು ಹೇಳುತ್ತಾರೆ. ಅಂದರೆ, ಆ ಮೂಲಕ ಹೆಣ್ಣು ಗಂಡನ್ನೂ ಕಾಪಾಡಿದ್ದಾಳೆ. ಗಂಡಿನ ಕೈಗೆ ಕೃಷಿ ಹೋಗುತ್ತಿದ್ದಂತೆಯೇ, ಅವನು ಅದನ್ನು ಕೃಷಿ ವಿಶ್ವವಿದ್ಯಾಲಯ ಮಾಡಿ, ಬಂಡವಾಳಶಾಹಿಯ ಕಂಪೆನಿ ಮಾಡಿ– ಭೂಮಿಯನ್ನೂ, ಕೃಷಿಯನ್ನೂ, ರೈತರನ್ನೂ ನಾಶಮಾಡ ಹೊರಟಿರುವುದು ನಮ್ಮೆಲ್ಲಾ ಸಾಮಾಜಿಕ, ರಾಜಕೀಯ ಪರಿಸ್ಥಿತಿಗಳ ರೂಪಕವಾಗಿದೆ. ಹೀಗಾಗಿ, ಆ ಆತ್ಮಹತ್ಯೆಯ ದಾರಿಯಲ್ಲಿ ನಮಗೆ ಪ್ರಾತಿನಿಧ್ಯ ಬೇಕಿಲ್ಲ. ಆ ಆತ್ಮಹತ್ಯೆಯ ಕ್ಯೂನಲ್ಲಿ ನಿಲ್ಲಲು ಜಗಳ ಬೇಕಿಲ್ಲ. ನಾವು ತೋರುವ ಹೊಸದಾರಿಯಲ್ಲಿ ನಮ್ಮ ನಾಯಕತ್ವ ಅತ್ಯಂತ ಸಹಜ ಸಂಗತಿ ಎಂಬ ಮನಸ್ಥಿತಿಯ ಪಲ್ಲಟ ಬೇಕಾಗಿದೆ. ಈ ಹೊಸದಾರಿ ಎಂದರೆ, ಮೊತ್ತ ಮೊದಲಿಗೆ ಭೂಮಿ ವಿಷರಹಿತವಾಗುವುದು, ರಾಜಕೀಯ ವಿಷರಹಿತವಾಗುವುದು, ಇವೆರಡರ ನಡುವೆ ಬದುಕುವ ಸಕಲ ಜೀವಿಗಳ ಸಾಮಾಜಿಕ ಬದುಕು ವಿಷರಹಿತವಾಗುವುದು. ಇದು ಹೆಣ್ಣು ರೂಪಿಸಿಕೊಂಡಿದ್ದ ದಾರಿ, ರೂಪಿಸಿಕೊಟ್ಟಿದ್ದ ದಾರಿ. ಮತ್ತು ಆ ದಾರಿಯನ್ನು ಮರು ಅನ್ವೇಷಣೆ ಮಾಡಿಕೊಂಡು ಸಾಮಾಜಿಕ, ರಾಜಕೀಯ ಪಲ್ಲಟ ಸಾಧಿಸುವುದು ನಮ್ಮ ಗುರಿ. ●

JANASHAKTHI KANNADA VARA PATRIKE February 15-21, 2021 Price: Rs. 10/- Date of Publication: 12 February 2021 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21

‘ರಸ್ತೆ ತಡೆ ಚಳುವಳಿ’ ರಾಜ್ಯದಲ್ಲಿ ಬಹುತೇಕ ಯಶಸ್ವಿ











ಫೆ.20 : ದೆಹಲಿ ರೈತರ ಚಳುವಳಿ ಕುರಿತು ಎರಡು ಪುಸ್ತಕಗಳ ಬಿಡುಗಡೆ

ದೇಶದಲ್ಲಿ ಜನತಾಂತ್ರಿಕ ನೆಲೆಗಳು ದುರ್ಬಲಗೊಳ್ಳುತ್ತಿರುವ ಈ ಕಾಲಘಟ್ಟದಲ್ಲಿ ಹೋರಾಟ ನಡೆಸಿರುವ ಅನ್ನದಾತರು ಪ್ರಜಾಪ್ರಭುತ್ವದ ಎಳೆಗಳನ್ನು ಗಟ್ಟಿಗೊಳಿಸುವ ಮಹತ್ವದ ಚಳುವಳಿಯನ್ನು ರೂಪಿಸುತ್ತಿದ್ದಾರೆ. ಇದನ್ನು ಇಡೀ ವಿಶ್ವವೇ ಒಪ್ಪಿಕೊಂಡಿದೆ. ಕಳೆದ ಎರಡೂವರೆ ತಿಂಗಳಿಂದಲೂ ರೈತ ಹೋರಾಟ ದೆಹಲಿಯ ಗಡಿಗಳಲ್ಲಿ ನಡೆಯುತ್ತಿದೆ.

ಸರ್ಕಾರವನ್ನೇ ಬೆಚ್ಚಿ ಬೀಳಿಸುವಂತಹ ಮಟ್ಟದಲ್ಲಿ ರೈತರಿಗೆ ಬೆಂಬಲ ವ್ಯಕ್ತವಾಗಿದೆ. 2021ರ ಗಣರಾಜ್ಯೋತ್ಸವ ‘ರೈತಗಣರಾಜ್ಯೋತ್ಸವ’ವಾಗಿ ಮಾರ್ಪಟ್ಟಿತು. ಇದೇ ಸಂದರ್ಭದಲ್ಲಿ ಬರಹಗಾರರು, ಕಲಾವಿದರು, ಸಾಹಿತಿಗಳು ತಮ್ಮ

ಕಾಳಜಿಯನ್ನು ಬರಹದ ಮೂಲಕ ವ್ಯಕ್ತಪಡಿಸುತ್ತಿದ್ದಾರೆ. ವಿಶ್ವದೆಲ್ಲೆಡೆಗಳಿಂದ ರೈತರ ಹೋರಾಟವನ್ನು ಬೆಂಬಲಿಸಿ ಪ್ರತಿಭಟನೆಗಳು ನಡೆಯುತ್ತಿವೆ. ರೈತರ ಕುರಿತು ಸಾವಿರಾರು ಬರಹಗಾರರು ಕವಿತೆ, ಕತೆ, ಲೇಖನ, ಹಾಡು, ನಾಟಕಗಳ ಮೂಲಕ ಸ್ಪಂದಿಸುತ್ತಿದ್ದಾರೆ. ಇಂತಹ ದುರಿತ ಕಾಲದಲ್ಲಿ ಲೇಖಕರು ಸ್ಪಂದಿಸಬೇಕಾದದ್ದು ಕರ್ತವ್ಯವೂ ಆಗಿದೆ. ಈ ಹೋರಾಟಕ್ಕೆ ಸ್ಪಂದಿಸಿದ ಕನ್ನಡದ ಕವಿಗಳಿಂದ ರೈತರ ಆಂದೋಲನ ಕುರಿತ ಕವನಗಳನ್ನು ತರಿಸಿ, ‘ಹೊನ್ನಾರು ಒಕ್ಕಲು’ (ರೈತ ಆಂದೋಲನದ ಕವಿತೆಗಳು) ಎಂಬ ಹೆಸರಿನ ಕವನ ಸಂಕಲನವನ್ನು ರೂಪಿಸಲಾಗಿದೆ. 64 ಹಿರಿಯ ಕಿರಿಯ ಕವಿಗಳ ಕವಿತೆಗಳು ಇಲ್ಲಿವೆ. ಈ ಸಂಕಲನವನ್ನು ಡಾ. ಕೆ ಶರೀಫಾ ಮತ್ತು ಯಮುನಾ ಗಾಂವ್ಕರ್ ಸಂಪಾದಿಸಿದ್ದಾರೆ. ಈ ಸಂಕಲನದಲ್ಲಿ ರೈತ ಚಳುವಳಿಗೆ ಬೆಂಬಲವಾಗಿ ಕಲಾವಿದರು ಬರೆದ ಕಲಾತ್ಮಕ ಪೋಸ್ಟರುಗಳು, ಕಲಾಕೃತಿಗಳ ಚಿತ್ರಗಳನ್ನು ಕವಿತೆಗಳ ಜತೆ ಕೊಡಲಾಗಿದೆ.

ರೈತ ಚಳುವಳಿ ತೀವ್ರವಾಗುತ್ತಿದ್ದಾಗ ಜನವರಿಯ ಎರಡನೇ ವಾರದಲ್ಲಿ ದೆಹಲಿ ರೈತರ ಚಳುವಳಿಗೆ ಕರ್ನಾಟಕ ರೈತರ ಸೌಹಾರ್ದ ಬೆಂಬಲ ಕೊಡಲು ಮತ್ತು ಆ ಚಾರಿತ್ರಿಕ ಚಳುವಳಿಯ ಪ್ರತ್ಯಕ್ಷ ಅನುಭವ ಪಡೆಯಲು ಕರ್ನಾಟಕ ಪ್ರಾಂತ ರೈತ ಸಂಘ ಅದರ ರಾಜ್ಯ ನಾಯಕರುಗಳಾದ ಎಚ್.ಆರ್. ನವೀನ್ ಕುಮಾರ್ ಮತ್ತು ಜಗದೀಶ ಸೂರ್ಯ ಅವರನ್ನು ದೆಹಲಿಗೆ ಕಳಿಸಿತು. ಅವರು 10 ದಿನಗಳ ಪ್ರವಾಸದ ಅವಧಿಯಲ್ಲಿ ತಮ್ಮ ಶ್ರೀಮಂತ ಅನುಭವವನ್ನು ಬರಹ, ಫೋಟೋ, ಲೈವ್ ವಿಡಿಯೊ ಗಳ ಮೂಲಕ ಫೇಸ್ ಬುಕ್ ನಲ್ಲಿ ಹಂಚಿಕೊಂಡರು. ದೆಹಲಿಯ ರೈತ ಹೋರಾಟವನ್ನು ಜಾಣ ಮೌನ, ಸುಳ್ಳು ಸುದ್ದಿ, ಪೊಳ್ಳು ಆಪಾದನೆಗಳ ಮೂಲಕ ನಿರ್ಲಕ್ಷ, ಅವಹೇಳನಕ್ಕೆ ಗುರಿ ಮಾಡಿರುವ “ಗೋದಿ ಮೀಡಿಯಾ”ದ ಅಸಹ್ಯ ವರ್ತನೆಯ ಸಂದರ್ಭದಲ್ಲಿ ಇವು ಬಹಳ ಜನಪ್ರಿಯವಾದವು. ಈ ಚಾರಿತ್ರಿಕ ಚಳುವಳಿಯ ಅಮೂಲ್ಯ ಅನುಭವಗಳ ಕುರಿತ ಚಾರಿತ್ರಿಕ ಬರಹಗಳನ್ನು ಫೋಟೊಗಳನ್ನು ಇನ್ನಷ್ಟು ಸೇರಿಸಿ, ಪರಿಷ್ಕರಿಸಿ ಪುಸ್ತಕ ರೂಪದಲ್ಲಿ ಪ್ರಕಟಿಸಬೇಕು ಎಂಬ ಒತ್ತಾಯದ ಮೇರೆಗೆ ಸ್ವತಃ ಉತ್ತಮ ಪತ್ರಕರ್ತ, ಫೋಟೊಗ್ರಾಫರ್ ಆಗಿರುವ ಎಚ್. ಆರ್. ನವೀನ್ ಕುಮಾರ್ ಅದನ್ನು ಪುಸ್ತಕದ ರೂಪದಲ್ಲಿ ಬರೆದಿದ್ದಾರೆ. ಅದರಲ್ಲಿ ತಾವೇ ತೆಗೆದ ಉತ್ತಮ ಫೋಟೊಗಳನ್ನು ಸೇರಿಸಿದ್ದಾರೆ. ಇದಕ್ಕೆ ‘ಕದನ ಕಣ’ ಎಂದು ಹೆಸರಿಟ್ಟಿದ್ದಾರೆ.

ಈ ಎರಡೂ ಪುಸ್ತಕಗಳನ್ನು ಕ್ರಿಯಾ ಮಾಧ್ಯಮ ಪ್ರಕಟಿಸುತ್ತಿದ್ದು, ಇವುಗಳೆರಡಕ್ಕೂ ದೆಹಲಿಯಲ್ಲಿ ವಾಸವಿದ್ದು ರೈತರ ಚಳುವಳಿಯ ನೇರ ಸಂಪರ್ಕ ಇಟ್ಟುಕೊಂಡಿರುವ ಅದರ ಆಳವಾದ ತಿಳುವಳಿಕೆ ಇರುವ ಡಾ. ಪುರುಷೋತ್ತಮ ಬಿಳಿಮಲೆ ಅವರು ಮುನ್ನುಡಿ ಬರೆದು ಬೆನ್ನು ತಟ್ಟಿದ್ದಾರೆ.

ದೆಹಲಿ ರೈತರ ಚಳುವಳಿಯ ಕುರಿತಾದ ‘ಹೊನ್ನಾರು ಒಕ್ಕಲು’ ಮತ್ತು ‘ಕದನ ಕಣ’ ಎಂಬ ಈ ಎರಡು ಪುಸ್ತಕಗಳನ್ನು ಫೆಬ್ರುವರಿ 20ರಂದು ನಡೆಯುವ ಆನ್ ಲೈನ್ ಸಭೆಯಲ್ಲಿ ಬಿಡುಗಡೆ ಮಾಡಲಾಗುತ್ತದೆ. ದೆಹಲಿಗೆ ಎರಡು ಬಾರಿ ಭೇಟಿಯಿತ್ತು ದೆಹಲಿ ರೈತರ ಚಳುವಳಿಯ ಕುರಿತು ಸಾಕ್ಷ್ಯ ಚಿತ್ರ ತಯಾರಿಸುತ್ತಿರುವ ಕೇಸರಿ ಹರವು, ಚಳುವಳಿಯ ನಾಯಕತ್ವ ವಹಿಸುತ್ತಿರುವ ರೈತ ಸಂಘಟನೆಗಳಲ್ಲಿ ಒಂದಾದ ಅಖಿಲ ಭಾರತ ಕಿಸಾನ ಸಭಾದ ಜಂಟಿ ಕಾರ್ಯದರ್ಶಿ ವಿಜೂ ಕೃಷ್ಣನ್ ಮತ್ತು ಡಾ. ಪುರುಷೋತ್ತಮ ಬಿಳಿಮಲೆ ಈ ಸಭೆಯಲ್ಲಿ ಭಾಗವಹಿಸಲಿದ್ದಾರೆ. ಎರಡೂ ಪುಸ್ತಕಗಳ ಲೇಖಕರು, ಕವಿಗಳು, ಸಂಪಾದಕರು ಭಾಗವಹಿಸಲಿದ್ದಾರೆ.



ಫೆ.21 ರಂದು ಕೆಂಪು ಪುಸ್ತಕ ದಿನ ಆಚರಣೆ

ಫೆಬ್ರುವರಿ 21, 1848 ಮಾರ್ಕ್ಸ್–ಎಂಗೆಲ್ಸ್ ಕಮ್ಯುನಿಸ್ಟ್ ಪ್ರಣಾಳಿಕೆಯನ್ನು ಪ್ರಕಟಿಸಿದ ದಿನ. ಇದನ್ನು ಕಳೆದ ವರ್ಷದಿಂದ ಪ್ರತಿ ವರ್ಷ ‘ಕೆಂಪು ಪುಸ್ತಕ ದಿನ’ವಾಗಿ ಆಚರಿಸಲಾಗುತ್ತಿದೆ. ಎಂಗೆಲ್ಸ್ ಜನ್ಮ ದ್ವಿಶತಾಬ್ದಿಯ ಪ್ರಯುಕ್ತ ಅದರ ಆಚರಣೆಯ ಭಾಗವಾಗಿ ಕಮ್ಯುನಿಸ್ಟ್ ಪ್ರಣಾಳಿಕೆಯ ಮೊದಲ ಕರಡಾಗಿ ಎಂಗೆಲ್ಸ್ 1847ರಲ್ಲಿ ಎಂಗೆಲ್ಸ್ ಬರೆದ “ಕಡುಟಿಭುಿಟಛ ಔಜಿ ಅಂಟಟಣಟಘುಟ” (ಕಮ್ಯುನಿಸ್ಟ್ ತತ್ವಗಳು) ಎಂಬ ಪ್ರಶ್ನೋತ್ತರ ರೂಪದಲ್ಲಿರುವ ಕಿರುಪುಸ್ತಕದ ಸಾರ್ವಜನಿಕ ಓದನ್ನು ರಾಜ್ಯವ್ಯಾಪಿ ಸಂಘಟಿಸಬೇಕು ಎಂದು ಸಿಪಿಐ(ಎಂ) ರಾಜ್ಯ ಸಮಿತಿ ತನ್ನ ಘಟಕಗಳಿಗೆ ಕರೆ ಕೊಟ್ಟಿದೆ. ಈ ಪುಸ್ತಕವನ್ನು ಕನ್ನಡಕ್ಕೆ ಅನುವಾದ ಮಾಡಿ ಕ್ರಿಯಾ ಮಾಧ್ಯಮ ಪ್ರಕಟಿಸುತ್ತಿದೆ. ಅದರ ಅಡಿಯೋ ಬುಕ್ (ಕೇಳು ಪುಸ್ತಕ) ಆವೃತ್ತಿಯನ್ನೂ ಪ್ರಕಟಿಸುತ್ತಿದೆ.

ಎಂಗೆಲ್ಸ್ 200 ಸರಣಿ ಕಾರ್ಯಕ್ರಮದ ಭಾಗವಾಗಿ ಫೆ. 21 ರಂದು ರಾಜ್ಯ ಮಟ್ಟದ ಆನ್ ಲೈನ್ ಸಭೆಯೊಂದನ್ನು ಸಂಘಟಿಸಲಾಗುತ್ತಿದೆ. ಈ ಸಭೆಯಲ್ಲಿ “ಕಮ್ಯುನಿಸ್ಟ್ ತತ್ವಗಳು” ಪ್ರಿಂಟ್ ಮತ್ತು ಅಡಿಯೊ ಬುಕ್ ಬಿಡುಗಡೆ ಮಾಡಲಾಗುತ್ತದೆ. ಈ ಪುಸ್ತಕದ ಓದು, “ಕಮ್ಯುನಿಸ್ಟ್ ಪಕ್ಷಗಳ ಕಾರ್ಯಕ್ರಮದ ಮಾದರಿಯಾಗಿ ಕಮ್ಯುನಿಸ್ಟ್ ಪ್ರಣಾಳಿಕೆಯ ಮಹತ್ವ” ಎಂಬುದರ ಕುರಿತು ಉಪನ್ಯಾಸ, ‘ನಾನು ಓದಿದ ಮೊದಲ ಕೆಂಪು ಪುಸ್ತಕ’ ಎಂಬುದರ ಕುರಿತು 5 ಸಂಗಾತಿಗಳಿಂದ ಅನುಭವ ಕಥನ, “ಸಮತಾವಾದ’ದ ಆದರ್ಶಗಳನ್ನು ಒಳಗೊಂಡ ಮೊದಲ ಕನ್ನಡ ಕವನಗಳ ವಾಚನ/ಹಾಡು – ಇತ್ಯಾದಿ ವೈವಿಧ್ಯಮಯ ಕಾರ್ಯಕ್ರಮಗಳು ಈ ಸಭೆಯಲ್ಲಿ ಇರುತ್ತದೆ. ಫೆ. 21–28 ಅವಧಿಯಲ್ಲಿ ಜಿಲ್ಲಾ ಕೇಂದ್ರಗಳಲ್ಲಿ (ರಾಜ್ಯ ಮಟ್ಟದ ಆನ್ ಲೈನ್ ಸಭೆಗಳ ನಾಲ್ಕು ಅಂಶಗಳಲ್ಲಿ ಕೆಲವು ಅಥವಾ ಎಲ್ಲ ನಾಲ್ಕನ್ನೂ ಒಳಗೊಂಡ) ಮತ್ತು ಸಾಧ್ಯವಿದ್ದ ತಾಲೂಕು ಕೇಂದ್ರಗಳಲ್ಲಿ ಇಂತಹ ದೈಹಿಕ ಸಭೆಗಳನ್ನು ನಡೆಸಬೇಕು ಎಂದು ಸಿಪಿಐ(ಎಂ) ರಾಜ್ಯ ಸಮಿತಿ ಕರೆ ಕೊಟ್ಟಿದೆ.

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**